ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ
ಕನ್ನಡ ವಾರಪತ್ರಿಕೆ


ಸಂಪುಟ 13 | ಸಂಚಿಕೆ 50 | ಡಿಸೆಂಬರ್ 9–15, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ
7ನೇ ರಾಜ್ಯ ಸಮ್ಮೇಳನ
13-15, ಡಿಸೆಂಬರ್ 2019 • ಕಲಬುರಗಿ
AIAWU



ಕೂಲಿಯವರ ರಾಜ್ಯ ಸಮ್ಮೇಳನ



ಮಹಿಳೆಯರ ಮೇಲೆ ದೌರ್ಜನ್ಯ ತಡೆಯುವುದು ಹೇಗೆ?



ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಜಾಥಾ

CITU

100



ಭಾರತ ಕಮ್ಯೂನಿಸ್ಟ್ ಪಕ್ಷದ ಶತಮಾನೋತ್ಸವ – ಮೊದಲ ಪುಸ್ತಕ ಬಿಡುಗಡೆ

ಪೌರತ್ವ (ತಿದ್ದುಪಡಿ) ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು–ಸಿಪಿಐ(ಎಂ)

"ಪೌರತ್ವದ ಎಲ್ಲಾ ಸಂವಿಧಾನಿಕ ಮೂಲಾಂಶಗಳನ್ನು ಉಲ್ಲಂಘಿಸುವ ಮಸೂದೆ"

ಕೇಂದ್ರ ಸಚಿವ ಸಂಪುಟ ಡಿಸೆಂಬರ್ 4 ರಂದು ಪೌರತ್ವ (ತಿದ್ದುಪಡಿ) ಮಸೂದೆಗೆ ಮಂಜೂರಾತಿ ನೀಡಿದೆ ಎಂದು ವರದಿಯಾಗಿದೆ. ಇದರ ಕರಡನ್ನು ಮೊದಲಿಗೆ 2016ರಲ್ಲಿ ತರಲಾಗಿತ್ತು. ಆಗ ಸರಕಾರ ಇದನ್ನು ಸಂಸತ್ತಿನ ಎರಡೂ ಸದನಗಳ ಒಂದು ಜಂಟಿ ಆಯ್ಕೆ ಸಮಿತಿಗೆ ಪರಾಮರ್ಶೆಗೆ ಒಪ್ಪಿಸಬೇಕಾಗಿ ಬಂದಿತ್ತು. ಸಿಪಿಐ(ಎಂ) ಒಂದು ಭಿನ್ನಮತದ ಟಿಪ್ಪಣಿಯನ್ನು ಸಮಿತಿಗೆ ಕೊಟ್ಟಿದೆ.

ಆಗ ಲೋಕಸಭಾ ಸದಸ್ಯರಾಗಿದ್ದ ಮಹಮ್ಮದ್ ಸಲೀಂ ಜನವರಿ 3, 2019ರಂದು ಸಲ್ಲಿಸಿದ ಈ ಟಿಪ್ಪಣಿಯ ಮುಖ್ಯಾಂಶಗಳೆಂದರೆ:

- ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು.
- ಈ ಮಸೂದೆ ಭಾರತೀಯ ಸಂವಿಧಾನದ ಮೂಲಭೂತ ಅಂಶಗಳನ್ನು ಉಲ್ಲಂಘಿಸುತ್ತಿದೆ.
- ಸಂವಿಧಾನದ ಪೀಠಿಕೆ, ಪೌರತ್ವದ ಬಗ್ಗೆ ಹೇಳಿರುವ ಅಂಶಗಳು(ಕಲಮು 5 ರಿಂದ 11) ಮತ್ತು ಮೂಲಭೂತ ಹಕ್ಕುಗಳು ಲಿಂಗ, ಜಾತಿ, ಮತ, ವರ್ಗ, ಸಮುದಾಯ ಅಥವ ಭಾಷೆಯ ಭೇದ–ಭಾವವಿಲ್ಲದ ಸಮಾನತೆಯ ಮೂಲ ಅಂಶಗಳನ್ನು ಒತ್ತಿ ಹೇಳಿವೆ. ಈ ಮಸೂದೆ ಅವೆಲ್ಲವನ್ನೂ ಉಲ್ಲಂಘಿಸುತ್ತದೆ.
- ಈ ಮಸೂದೆ ಕೇವಲ ಶಾಸನದಲ್ಲಿನ ಬದಲಾವಣೆಯಷ್ಟೇ ಅಲ್ಲ, ಭಾರತೀಯ ಗಣತಂತ್ರದ ಚಾರಿತ್ರ್ಯವನ್ನೇ ಮೂಲಭೂತವಾಗಿ ಬದಲಿಸುವ ಒಂದು ಕಾನೂನು.

ಮಹಮ್ಮದ್ ಸಲೀಂ ತಮ್ಮ ಭಿನ್ನಮತದ ಟಿಪ್ಪಣಿಯಲ್ಲಿ ಆರು ಅಂಶಗಳನ್ನು ಪಟ್ಟಿ ಮಾಡಿದ್ದಾರೆ.

ಮೊದಲನೆಯದಾಗಿ, ಇಂತಹದೊಂದು ಮಹತ್ವದ ವಿಷಯದ ಮೇಲೆ ರಚಿಸಿದ ಸಮಿತಿ ತನಗೆ ವಹಿಸಿದ ಕೆಲಸವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಸಮಿತಿ ರಚಿಸಿ ಮೂರು ವರ್ಷಗಳಾದರೂ, ಅದು ತಿಂಗಳಾನುಗಟ್ಟಲೆ ಸಭೆ ಸೇರಲೇ ಇಲ್ಲ, ಕಳೆದ ಚಳಿಗಾಲದ ಅಧಿವೇಶನದ 10 ದಿನಗಳಲ್ಲಿ ಮಾತ್ರ ಇದ್ದಕ್ಕಿದ್ದಂತೆ ಸಭೆ ಸೇರುತ್ತಿತ್ತು. ಇದು ಸೂಚಿಸಿರುವ ತಿದ್ದುಪಡಿಗಳ ಗಂಭೀರತೆಯ ದೃಷ್ಟಿಯಿಂದ ಇದು ಹೆಚ್ಚು ಪಾರದರ್ಶಕವಾಗಿ ಸಮಾಲೋಚನೆಗಳನ್ನು ನಡೆಸಬೇಕಿತ್ತು, ಇದರಿಂದ ಬಾಧಿತರಾಗುವ ಎಲ್ಲರೊಂದಿಗೂ ತಾನೇ ಮುಂದಾಗಿ ಸಭೆಗಳನ್ನು ನಡೆಸಬೇಕಿತ್ತು, ಆದರೆ ಒಮ್ಮೆ ಬಹಳಷ್ಟು ಪ್ರತಿಭಟನೆಗಳು ವ್ಯಕ್ತಗೊಳ್ಳುತ್ತಿದ್ದ ಅಸ್ಸಾಂಗೆ ಅರೆ–ಬರೆ ಭೇಟಿಯಲ್ಲದೆ, ಬೇರೇನೂ ಮಾಡಲೇ ಇಲ್ಲ.

ಎರಡನೆಯದಾಗಿ, ಭಾರತೀಯ ಸಂವಿಧಾನದ ಮೂಲ ಆಧಾರಗಳಲ್ಲೇ ಬದಲಾವಣೆ, ಪಲ್ಲಟ ತರಲಾಗುತ್ತಿದೆ.

ಮೂರನೆಯದಾಗಿ, ಇದು ಒಂದು ಶಾಸನದ ಬದಲಾವಣೆಗಿಂತ ಹೆಚ್ಚಾಗಿ ಒಂದು ರಾಜಕೀಯ

ಪುಟ 14 ಕ್ಕೆ

ಭಾರತದ ಬುನಾದಿಯನ್ನು ಹಾಳುಗೆಡಹುವ ಉದ್ದೇಶ ಈ ಮಸೂದೆಯದ್ದು– ಯೆಚುರಿ

"ಇದು ಸರಳ ಸಂಗತಿ. ಪೌರತ್ವವನ್ನು ಧರ್ಮದ ಆಧಾರದಲ್ಲಿ ನಿರ್ಧರಿಸುವುದು, ಅಥವ ಅದರೊಂದಿಗೆ ತಳುಕು ಹಾಕುವುದು ಸಾಧ್ಯವಿಲ್ಲ. ಇದೇ ಈ ಮಸೂದೆಯನ್ನು ಅಸ್ವೀಕಾರಾರ್ಹ ಮತ್ತು ಅಸಂವಿಧಾನಿಕಗೊಳಿಸಿದೆ. ಭಾರತದ ಬುನಾದಿಯನ್ನು ಹಾಳುಗೆಡಹುವ ಉದ್ದೇಶ ಈ ಮಸೂದೆಯದ್ದು" ಈ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಂ ಯೆಚುರಿ ಟಿಪ್ಪಣಿ ಮಾಡಿದ್ದಾರೆ.

"ಭಾರತದ ಪೌರರು, ಅವರು ಯಾವುದೇ ನಂಬಿಕೆಯನ್ನು ಅನುಸರಿಸುತ್ತಿರಲಿ, ಅಥವ ಅನುಸರಿಸದಿರಲಿ, ಏನೆ ತಿನ್ನಲಿ, ಯಾವುದೇ ಕೆಲಸ ಮಾಡುತ್ತಿರಲಿ, ಅವರ ಜಾತಿ,ಮತ, ನಿವಾಸ ಸ್ಥಳ, ಲಿಂಗ ಅಥವ ಮೈಬಣ್ಣ ಯಾವುದೇ ಇರಲಿ, ಎಲ್ಲರೂ ಭಾರತೀಯ ಪೌರರೇ. ಪೌರತ್ವ ತಿದ್ದುಪಡಿ ಮಸೂದೆ ಬೇಡ" ಎಂದು ಅವರು ಹೇಳಿದ್ದಾರೆ.

ಕೇಂದ್ರ ಸರಕಾರ ಹೇರಿದ ಕ್ರಮಗಳ ದುಷ್ಫಲ: ಜಮ್ಮು ಕಾಶ್ಮೀರದಲ್ಲಿ ಸೇಬು ಬಿಕ್ಕಟ್ಟು ರಾಷ್ಟ್ರೀಯ ಅನಾಹುತ ಎಂದು ಘೋಷಿಸಿ ಪರಿಹಾರ ನೀಡಲು ಬೆಳೆಗಾರರ ಆಗ್ರಹ

ಡಿಸೆಂಬರ್ 2ರಂದು ಜಮ್ಮು ಮತ್ತು ಕಾಶ್ಮೀರದ ಸೇಬು ಬೆಳೆಗಾರರ ಮತ್ತು ರೈತರ ಹಾಗೂ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್‌ಸಿಸಿ)ಯ ಮುಖಂಡರಿದ್ದ ನಿಯೋಗವೊಂದು ಕೇಂದ್ರ ಕೃಷಿ ಮಂತ್ರಿ ನರೇಂದ್ರ ಸಿಂಗ್ ತೋಮರ್‌ರನ್ನು ಭೇಟಿ ಮಾಡಿ ಒಂದು ಮನವಿ ಪತ್ರವನ್ನು ಸಲ್ಲಿಸಿದೆ. ಕಾಶ್ಮೀರ ಕಣಿವೆಯಲ್ಲಿ ಸೇಬು ಬೆಳೆಗಾರರು ಈಗ ಎದುರಿಸುತ್ತಿರುವ ಬಿಕ್ಕಟ್ಟನ್ನು ರಾಷ್ಟ್ರೀಯ ಅನಾಹುತ ಎಂದು ಘೋಷಿಸಬೇಕು, ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಹಣ್ಣು ಬೆಳೆಗಾರರ ಬೆಂಬಲಕ್ಕೆ 1000 ಕೋಟಿ ರೂ.ಗಳ ಮಧ್ಯಂತರ ನೆರವಿನ ಪ್ಯಾಕೆಜನ್ನು ನೀಡಬೇಕು ಎಂದು ಈ ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ. ಸೇಬು ಬೆಳೆಗಾರರನ್ನು ಅವರ ಜೀವನಾಧಾರದ ಧ್ವಂಸದಿಂದ, ತೀವ್ರ ಸಂಕಟದಿಂದ ಪಾರು ಮಾಡಲು ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು ಎಂದೂ ಮನವಿ ಪತ್ರದಲ್ಲಿ ಕೋರಲಾಗಿದೆ.

ಸಪ್ಟಂಬರ್‌ನಿಂದ ನವಂಬರ್ ಕಾಶ್ಮೀರ ಕಣಿವೆಯಲ್ಲಿ ಸೇಬು ಬೇಸಾಯದ ಅವಧಿ. ಆದರೆ ಈ ವರ್ಷ ಆಗಸ್ಟ್ 5ರಂದು 370ನೇ ಕಲಮನ್ನು ನಿಷ್ಕ್ರಿಯಗೊಳಿಸಿದ್ದರಿಂದಾಗಿ ಹೇರಿದ ನಿರ್ಬಂಧದ ಕ್ರಮಗಳಿಂದಾಗಿ ಸೇಬು ಬೇಸಾಯಕ್ಕೆ ತೀವ್ರ ತೊಂದರೆ ಉಂಟಾಯಿತು. ಮೊದಲು ಹಣ್ಣಿನ ತೋಟಗಳಲ್ಲಿ ಕೆಲಸಗಾರರು ಸಿಗದಂತಾಯಿತು, ನಂತರ ಬೆಳೆದ ಹಣ್ಣುಗಳನ್ನು ಸಾರಿಗೆ ಮತ್ತು ಸಂಪರ್ಕ ಸಾಧನಗಳ ಮೇಲೆ ಕೇಂದ್ರ ಸರಕಾರ ಹೇರಿದ ನಿರ್ಬಂಧಗಳಿಂದಾಗಿ ಮಾರುಕಟ್ಟೆಗಳಿಗೆ ತಲುಪಿಸಲಾಗದೆ ಬೆಳೆಗಾರರು ಮತ್ತು ಇದರ ಮಾರಾಟದಲ್ಲಿ ತೊಡಗಿರುವವರು ಅಪಾರ ಹಾನಿ ಅನುಭವಿಸಬೇಕಾಗಿ ಬಂದಿದೆ. ನವಂಬರ್ ತಿಂಗಳ ಭಾರೀ ಹಿಮಪಾತ ಸಂಕಟಗಳನ್ನು ಮತ್ತಷ್ಟು ಉಲ್ಬಣಗೊಳಿಸಿದೆ. ಈ ವರ್ಷ ಮಾತ್ರವಲ್ಲ, ಮುಂಬರುವ ಹಲವು ವರ್ಷಗಳವರೆಗೆ ಇದರ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಭೀತಿಯಲ್ಲಿ ಬೆಳೆಗಾರರು ಇದ್ದಾರೆ.

ಜಮ್ಮು ಮತ್ತು ಕಾಶ್ಮೀರ ತೋಟಗಾರಿಕೆ ನಿರ್ದೇಶಕರ ಅಂದಾಜಿನ ಪ್ರಕಾರ 35ಶೇ.ದಿಂದ 45 ಶೇ.ದ ವರೆಗೆ ಸೇಬು ಬೆಳೆ ನಷ್ಟಗೊಂಡಿದೆ. ಆದರೆ ಸೇಬು ಬೆಳೆಯುವ ಮುಖ್ಯಪ್ರದೇಶಗಳಲ್ಲಿ 80ಶೇ. ದ ವರೆಗೂ ಹಾನಿ ಉಂಟಾಗಿದೆ ಎಂದು ಬೆಳೆಗಾರರು ಹೇಳುತ್ತಾರೆ. ದೇಶದ 75ಶೇ.ದಷ್ಟು ಸೇಬು ಕಾಶ್ಮೀರ ಕಣಿವೆಯಿಂದ ಬರುತ್ತದೆ.

ಅಖಿಲ ಭಾರತದ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್‌ಸಿಸಿ)ಯ ಒಂದು ನಿಯೋಗ ಇತ್ತೀಚೆಗೆ ಕಾಶ್ಮೀರಕ್ಕೆ ಭೇಟಿ ನೀಡಿದಾಗ ಅಲ್ಲಿನ ರೈತರು, ಸರಕಾರದಿಂದ ನೆರವು ಬಾರದಿದ್ದರೆ ಕಾಶ್ಮೀರ ಕಣಿವೆಯಲ್ಲಿ ವ್ಯಾಪಕ ಪ್ರಮಾಣದಲ್ಲಿ ರೈತರ ಆತ್ಮಹತ್ಯೆಗಳು ನಡೆಯಬಹುದು ಎಂಬ ಆತಂಕವನ್ನು ವ್ಯಕ್ತಪಡಿಸಿದರು. ಆದ್ದರಿಂದ ಸರಕಾರ ಮತ್ತು ಭಾರತದ ಜನತೆ ಕಾಶ್ಮೀರದ ಸೇಬು ಬೆಳೆಗಾರರ ಬೆಂಬಲಕ್ಕೆ ದೃಢವಾಗಿ ನಿಲ್ಲಬೇಕು ಎಂದಿರುವ ಎಐಕೆಎಸ್‌ಸಿಸಿ ಭಾರತ ಸರಕಾರದ ಮುಂದೆ ಈ ಕೆಳಗಿನ ಆಗ್ರಹಗಳನ್ನು ಮಂಡಿಸಿದೆ.

1. ಕಾಶ್ಮೀರ ಕಣಿವೆಯ ಸೇಬು ಬಿಕ್ಕಟ್ಟನ್ನು ರಾಷ್ಟ್ರೀಯ ಅನಾಹುತ ಪರಿಹಾರ ನಿಧಿ(ಎನ್‌ಡಿಆರ್‌ಎಫ್)ಗೆ ಅರ್ಹವಾಗುವಂತೆ 'ರಾಷ್ಟ್ರೀಯ ಅನಾಹುತ ' ಎಂದು ಘೋಷಿಸಬೇಕು.
2. ಹಣ್ಣು ಬೆಳೆಗಾರರು ಮತ್ತು ಉದ್ದಿಮೆ ಅನುಭವಿಸಿರುವ ನಿಜವಾದ ನಷ್ಟವನ್ನು ಅಂದಾಜು ಮಾಡಲು ರೆವಿನ್ಯೂ ಅಧಿಕಾರಿಗಳಿಂದ ಒಂದು ಸಮಗ್ರ ಸರ್ವೆಯನ್ನು ತಕ್ಷಣವೇ ನಡೆಸಬೇಕು.
3. ಭಾರತ ಸರಕಾರದ ತೋಟಗಾರಿಕೆ ಇಲಾಖೆಯ

ಪುಟ 14 ಕ್ಕೆ

ಇಎಸ್‌ಐ ನಿಧಿಗಳ ಹೂಡಿಕೆಯ ನಿರ್ವಹಣೆಗೆ ಖಾಸಗಿ/ವಿದೇಶಿ ಕಂಪನಿ: ಕಾರ್ಮಿಕ ಸಂಘಟನೆಗಳ ಆಕ್ಷೇಪಣೆ ನಿಜವಾದ ಮೇಲೆ ನಿರ್ವಹಣೆ ರದ್ದು

ಸೆಪ್ಟಂಬರ್ 28, 2018ರಂದು ನಡೆದ ಇಎಸ್‌ಐ ಕಾರ್ಪೊರೇಷನ್‌ನ ಆಡಳಿತ ಸಮಿತಿಯ 175ನೇ ಸಭೆಯಲ್ಲಿ, ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಒಕ್ಕೊರಲಿನ ತೀವ್ರ ಪ್ರತಿಭಟನೆಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಿ ರಿಲಯನ್ಸ್ ನಿಪ್ಪೊನ್ ಲೈಫ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯನ್ನು ಇಎಸ್‌ಐ ನಿಧಿಯ ಹೂಡಿಕೆಗಳ ನಿರ್ವಾಹಕರೆಂದು ನೇಮಿಸಲಾಗಿತ್ತು. ಇನ್ನೊಬ್ಬರನ್ನೂ ಹೂಡಿಕೆಗಳ ನಿರ್ವಾಹಕರೆಂದು ನೇಮಿಸಬೇಕು ಎಂಬ ಸಿಐಟಿಯು ಸೂಚನೆಯನ್ನು ಸ್ವೀಕರಿಸಲಾಗಿತ್ತು. ಆದರೆ ಇನ್ನೂ ಜಾರಿಗೊಳಿಸಿಲ್ಲ.

ಈ ನಡುವೆ, ರಿಲಯನ್ಸ್ ನಿಪ್ಪೊನ್ ನಿರ್ದೇಶನದಂತೆ 23,000 ಕೋಟಿ ರೂ.ಗಳನ್ನು ಯಾವುದೇ ಅಧಿಕೃತ ಹಣಕಾಸು ಸಂಸ್ಥೆಯಿಂದ ಸೂಕ್ತ ಭದ್ರತೆಯಿಲ್ಲದೆ ಅಲ್ಪಕಾಲೀನ ಹೂಡಿಕೆಗಳಲ್ಲಿ ಹಾಕಲಾಗಿದೆ. ಇದು ಇಂತಹ ಹೂಡಿಕೆಗಳಿಗೆ ಹಾಕಿಕೊಟ್ಟಿರುವ ವಿಧಿವಿಧಾನಗಳ ಉಲ್ಲಂಘನೆಯಾಗಿದೆ. ಅಲ್ಲದೆ ಗರಿಷ್ಟ ಮಿತಿ 5%ವನ್ನೂ ಮೀರಿ ಈ ಹೂಡಿಕೆ ಮಾಡಲಾಗಿದೆ. ನಂತರ ರಿಲಯನ್ಸ್ ಕಂಪನಿ ತನ್ನೆಲ್ಲ ಶೇರುಗಳನ್ನು ನಿಪ್ಪೊನ್ ಕಂಪನಿಗೆ ಮಾರಿಬಿಟ್ಟಿದೆ. ಈ ಮೂಲಕ ಭಾರತೀಯ ಕಾರ್ಮಿಕರ ಸಾಮಾಜಿಕ ಭದ್ರತೆಯ ಹಣವನ್ನು ಅವರ ಹಿತಗಳನ್ನು ರಕ್ಷಿಸುವ ಯಾವ ಕಾಳಜಿಯೂ ಇಲ್ಲದ ವಿದೇಶಿ ಕಂಪನಿಯೊಂದರ ಮರ್ಜಿಗೆ ಒಪ್ಪಿಸಿದಂತಾಗಿದೆ. ಕಾರ್ಮಿಕ ಸಂಘಟನೆಗಳು ಇಂತಹ ಸನ್ನಿವೇಶದ ಬಗ್ಗೆಯೇ ಎಚ್ಚರಿಸಿದ್ದವು. ಇದೀಗ ಅವರ ಆಕ್ಷೇಪಣೆಗಳು ಸರಿಯೆಂದು ಸಾಬೀತಾಗಿವೆ.

ಇದರಿಂದಾಗಿ ಡಿಸೆಂಬರ್ 5ರಂದು ನಡೆದ ಸಭೆಯಲ್ಲಿ ನಿಪ್ಪೊನ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯನ್ನು ಹೂಡಿಕೆ ನಿರ್ವಹಣೆಯಿಂದ ತೆಗೆಯಲು ಇಎಸ್‌ಐ ಕಾರ್ಪೊರೇಷನ್ ನಿರ್ಧರಿಸಿದೆ. ಈ ಸಭೆಯಲ್ಲಿ ಕಾರ್ಮಿಕರ ಸಾಮಾಜಿಕ ಭದ್ರತೆಯ ಹಣದ ಹೂಡಿಕೆಯ ನಿರ್ವಹಣೆಯನ್ನು ಯಾವುದೇ ಖಾಸಗಿಯವರಿಗೆ ಮತ್ತು /ಅಥವ ವಿದೇಶಿ ಭಾಗೀದಾರಿಕೆಯ ಸಂಸ್ಥೆಗಳಿಗೆ ಕೊಡಬಾರದು, ರಾಷ್ಟ್ರೀಕೃತ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳನ್ನೇ ಅವಲಂಬಿಸಬೇಕು ಎಂಬ ತಮ್ಮ ನಿಲುವನ್ನು ಕಾರ್ಮಿಕ ಸಂಘಟನೆಗಳು ಪುನರುಚ್ಚರಿಸಿವೆ.

ಕಟ್ಟಡ ನಿರ್ಮಾಣ ಕಾರ್ಮಿಕರ ಸಂಸದ್ ಚಲೋ: ಡಿಸೆಂಬರ್ 5ರಂದು ದೇಶದೆಲ್ಲೆಡೆಗಳಿಂದ ಸಾವಿರಾರು ಕಟ್ಟಡ ಕೆಲಸಗಾರರು ಕಟ್ಟಡ ನಿರ್ಮಾಣ ಕಾರ್ಮಿಕರ ಉಕ್ಕೂಟ ಸಿಡಬ್ಲ್ಯುಎಫ್‌ಐ ಕರೆಯ ಮೇರೆಗೆ ನವದೆಹಲಿಗೆ ಬಂದು ಸಂಸತ್ತಿನ ಬಳಿ ಭಾರಿ ರ್‍ಯಾಲಿ ನಡೆಸಿದರು. ಕಟ್ಟಡ ಮತ್ತು ಇತರ ಕಾರ್ಮಿಕರ ಕಾಯ್ದೆ(ಬಿಒಸಿಎ)ಯನ್ನು ಉಳಿಸಬೇಕು, ಸಾಮಾಜಿಕ ಭದ್ರತಾ ಸಂಹಿತೆ ಮಸೂದೆಯ ಮೂಲಕ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ 45000 ಕೋಟಿ ರೂ.ಗಳನ್ನು ಅಪಹರಿಸುವ ಕ್ರಮವನ್ನು ಕೈಬಿಡಬೇಕು ಎಂದು ಆಗ್ರಹಿಸಿ ಈ ಬೃಹತ್ ಪ್ರತಿಭಟನೆ ನಡೆದಿದೆ.





ಸಂಪಾದಕೀಯ

ಕೂಲಿಯವರ ರಾಜ್ಯ ಸಮ್ಮೇಳನ

ಶಾರಿಗಂಜಿಗಾಗಿ ಸೇರು ಬೆವರು ಸುರಿಸುತ
ಊರೂರು ತಿರುಗುವರು ಯಾರಯ್ಯ
ಈನಾಡ ಕಟ್ಟಿದವರು ನಾವೆಲ್ಲಿಗೋಗಬೇಕು
ಕೂಲಿಯವರು ನಾವು ಕೇಳಯ್ಯ ॥

ಪ್ರಾಕೃತಿಕ ವಿಕೋಪ ಸತತವಾಗಿ ರಾಜ್ಯವನ್ನು ಕಾಡುತ್ತಲೇ ಇದೆ. ಇತ್ತೀಚೆಗೆ ಸುರಿದ ಭಾರಿ ಮಳೆಗೆ ಹಲವು ಜಿಲ್ಲೆಗಳು ತತ್ತರಿಸಿವೆ. ಬೆಳೆಗಳು ನಾಶವಾಗಿವೆ, ಮನೆಗಳು ಧ್ವಂಸವಾಗಿ ಜನ ಕಂಗೆಟ್ಟಿದ್ದಾರೆ. ಜನ ಜಾನುವಾರುಗಳು ನೀರು ಪಾಲಾಗಿವೆ. ಸಂತ್ರಸ್ತರಿಗೆ ಇದುವರೆಗೂ ಪುನರ್ವಸತಿ ಕಲ್ಪಿಸಲಾಗಿಲ್ಲ. ಮಳೆಯ ಅಬ್ಬರ ಕಡಿಮೆಯಾಗುತ್ತಿದ್ದಂತೆ ಬರಗಾಲದ ಭೀಕರ ಛಾಯೆ ಆವರಿಸತೊಡಗಿದೆ. ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಸೃಷ್ಟಿಯಾಗಿದೆ. ನೇಗಿಲಯೋಗಿ ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ.

ಬರದಿಂದ ಬಡ ಕೂಲಿಕಾರರ ಮತ್ತು ಗ್ರಾಮೀಣ ದುಡಿಮೆಗಾರರ ಬದುಕು ದುರ್ಬರವಾಗಿದೆ. ಕೃಷಿ ಚಟುವಟಿಕೆಗಳು ಸ್ಥಗಿತಗೊಳ್ಳುತ್ತಿದ್ದು, ಕೃಷಿ ಕೂಲಿಕಾರರು ತಮ್ಮ ಮನೆಮಾರುಗಳನ್ನು ತೊರೆದು ನಗರಗಳತ್ತ ಮುಖ ಮಾಡಿದ್ದಾರೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಯ ಸಮರ್ಪಕ ಅನುಷ್ಠಾನದ ಕೊರತೆ, ಅರ್ಜಿಸಲ್ಲಿಸಿದವರಿಗೆ ಕೆಲಸ ನೀಡುವಲ್ಲಿ ವಿಳಂಬ, ಕೆಲಸ ಮಾಡಿದವರ ಬ್ಯಾಂಕ್ ಖಾತೆಗಳಿಗೆ ಸಕಾಲದಲ್ಲಿ ಕೂಲಿ ಹಣ ಜಮಾ ಆಗದಿರುವುದು, ಕೆಲಸ ಒದಗಿಸಲಾಗದ ದಿನಗಳಿಗೆ ನಿರುದ್ಯೋಗ ಭತ್ಯೆಯನ್ನು ಪಾವತಿಸದಿರುವುದು ಮುಂತಾದ ವೈಫಲ್ಯಗಳಿಂದಾಗಿ ಗ್ರಾಮೀಣ ದುಡಿಮೆಗಾರರು ಚರಿತ್ರಾರ್ಹವಾದ ಈ ಯೋಜನೆಯಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ.

ಗ್ರಾಮೀಣ ಉದ್ಯೋಗ ಖಾತ್ರಿಯೋಜನೆ ಸಮರ್ಪಕವಾಗಿ ಜಾರಿಯಾದರೆ ಅದು ಗ್ರಾಮೀಣ ನಿರುದ್ಯೋಗವನ್ನು ಹಾಗೂ ಕಳವಳಕಾರಿ ವಲಸೆಯನ್ನು ತಡೆಗಟ್ಟಬಹುದಲ್ಲದೇ ಗ್ರಾಮಗಳ ಆಸ್ತಿ ವೃದ್ಧಿಸುವುದು. ಗಿಡಮರಗಳನ್ನು ಬೆಳೆಸುವುದರಿಂದ ಪರಿಸರ ರಕ್ಷಣೆಯಾಗುವುದು. ಕೃಷಿ ಹೊಂಡಗಳ ನಿರ್ಮಾಣದಿಂದ ಮಳೆ ನೀರು ಕೊಯ್ಲು ಸಾಧ್ಯವಾಗುವುದು. ಕೆರೆಗಳ ಹೂಳೆತ್ತುವುದರಿಂದ ಜನರಿಗೆ ಮತ್ತು ಜಾನುವಾರುಗಳಿಗೆ ಕುಡಿಯಲು, ಬಳಸಲು ನೀರಿನ ಕೊರತೆಯಾಗದು, ಅಂತರ್ಜಲ ವೃದ್ಧಿಯಾಗುವುದು. ಬಡ ರೈತರ ಭೂಮಿಯಲ್ಲಿ ಕೃಷಿ ಚಟುವಟಿಕೆಗಳಿಗೆ ಈ ಯೋಜನೆಯ ಬಳಕೆಯಿಂದ ಅವರ ಆದಾಯ ಹೆಚ್ಚಾಗುವುದು, ದುಡಿಯುವ ಮಹಿಳೆಯರಲ್ಲಿ ಉಳಿತಾಯ, ಸ್ವಾವಲಂಬನೆ ಹೆಚ್ಚಾಗುವುದು. ಅವರ ಚೌಕಾಸಿಯ ಸಾಮರ್ಥ್ಯ ಬಲಗೊಳ್ಳುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರೋತ್ಸಾಹ ಸಾಲದಾಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಬೆಂಗಳೂರಿಗೆ ದುಡಿಮೆಗಾಗಿ ಹೋಗುವ ಕೂಲಿಕಾರರ ಅನುಕೂಲಕ್ಕಾಗಿ ಪ್ರತ್ಯೇಕ 'ಕೂಲಿ ಎಕ್ಸ್‌ಪ್ರೆಸ್' ರೈಲನ್ನಾದರೂ ಒದಗಿಸಬೇಕಾಗಿದೆ.

ಗ್ರಾಮೀಣ ಬಡವರಿಗೆ ವಾಸಕ್ಕೆ ಸ್ವಂತ ಮನೆಗಳಿಲ್ಲ. ಸರ್ಕಾರಿ ನಿವೇಶನಗಳಿಗೆ ಪಟ್ಟಾ ಸಿಕ್ಕಿಲ್ಲ. ಅನಧೀಕೃತ ಭೂಮಿ ಸಾಗುವಳಿ ಸಕ್ರಮಗೊಳಿಸುವ ಭರವಸೆ ನೆನೆಗುದಿಗೆ ಬಿದ್ದಿದೆ. ಬೆಲೆ ಏರಿಕೆ ತೀವ್ರವಾಗಿದೆ. ಸಮರ್ಪಕ ಪಡಿತರ ವ್ಯವಸ್ಥೆ ಇಲ್ಲ. ಕೂಲಿಕಾರರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಇದ್ದಾರೆ. ಬಹುತೇಕ ಕೂಲಿಕಾರರು ದಲಿತರು, ಹಿಂದುಳಿದ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ದಲಿತರ ಮೇಲೆ, ಮಹಿಳಾ ಕೂಲಿಕಾರರ ಮೇಲೆ ನಿರಂತರ ದೌರ್ಜನ್ಯಗಳು ನಡೆಯುತ್ತಿವೆ. ಮಹಿಳಾ ಕೂಲಿಕಾರರ ಮತ್ತು ಗ್ರಾಮೀಣ ಕೆಲಸಗಾರರ ಸಮಸ್ಯೆಗಳನ್ನು ಚರ್ಚಿಸಿ ಹೋರಾಟದ ಕಾರ್ಯಕ್ರಮ ರೂಪಿಸಲು ಇದೇ ಡಿಸೆಂಬರ್ 13 ರಿಂದ 15 ರ ವರೆಗೆ 3 ದಿನಗಳ ಕಾಲ ರಾಜ್ಯ ಮಟ್ಟದ ಸಮ್ಮೇಳನವನ್ನು ಕಲಬುರಗಿ ನಗರದಲ್ಲಿ ಏರ್ಪಡಿಸಲಾಗಿದೆ.

ಸಮ್ಮೇಳನದ ಅಂಗವಾಗಿ ಡಿಸೆಂಬರ್ 13 ರಂದು ಶುಕ್ರವಾರ ಮಧ್ಯಾಹ್ನ 11–00 ಗಂಟೆಗೆ ನಗರದ ಸೂಪರ್ ಮಾರ್ಕೆಂಟ್‌ನಿಂದ ಬೃಹತ್ ಮೆರವಣಿಗೆ ನಡೆಯಲಿದ್ದು 12–00 ಗಂಟೆಗೆ 'ಕನ್ನಡ ಭವನ' ಆವರಣದಲ್ಲಿ ಬಹಿರಂಗ ಸಭೆ ನಡೆಯಲಿದೆ. ನಂತರ ಎರಡು ದಿನ ಪ್ರತಿನಿಧಿಗಳ ಅಧಿವೇಶನ ನಡೆಯಲಿದೆ.

ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಕೆಲಸಗಾರರು ಶ್ರಮಿಕ ವರ್ಗದ ಅವಿಭಾಜ್ಯ ಅಂಗವಾಗಿದ್ದಾರೆ. ಸಮಾಜದಲ್ಲಿ ಕಟ್ಟ ಕಡೆಯವರು. ರಟ್ಟೆಯ ಬಿಟ್ಟರೆ ಬೇರೆ ಆಸ್ತಿ ಇಲ್ಲದವರು. ಇದುವರೆಗೆ ಕೃಷಿಯಲ್ಲಿ ಕೂಲಿ ಕೆಲಸವನ್ನು ನಂಬಿಕೊಂಡಿದ್ದವರು. ಇಂದು ಕೃಷಿಯಲ್ಲಿ ಯಂತ್ರಗಳ ಬಳಕೆ ಹೆಚ್ಚುತ್ತಿದ್ದು ಕೃಷಿಕೂಲಿಕಾರರು ಕೃಷಿ ಕ್ಷೇತ್ರದಿಂದ ಹೊರದೂಡಲ್ಪಡುತ್ತಿದ್ದಾರೆ.

ಹೊಟ್ಟೆಪಾಡಿಗಾಗಿ ವಲಸೆ ಹೋಗುತ್ತಾರೆ. ಕಾಯಂ ಕೆಲಸ ಇಲ್ಲ. ಖಚಿತ ಆದಾಯವಿಲ್ಲ. ಅವರ ಜೀವನ ಪರಿಸ್ಥಿತಿ ಬದಲಾಗದೆ, ಅವರ ಕೊಳ್ಳುವ ಶಕ್ತಿ ಹೆಚ್ಚಾಗದೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಅವರನ್ನು ಸಂಘಟಿಸಿ ಹೋರಾಟಕ್ಕೆ ಇಳಿಸುವುದು ತುರ್ತಾಗಿ ಆಗಬೇಕಿದೆ. ಸಂಘಟಿತ ಕಾರ್ಮಿಕ ವರ್ಗ ಅವರನ್ನು ವರ್ಗ ಹೋರಾಟದಲ್ಲಿ ಪಳಗಿಸಬೇಕಾಗಿದೆ.

ವಲಸೆ – ಉದ್ಯೋಗ ಖಾತ್ರಿ
ವಿಚಾರ ಸಂಕಿರಣ



ಕಲಬುರಗಿ ನಗರದ ಕನ್ನಡ ಭವನದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ 7ನೇಯ ರಾಜ್ಯ ಸಮ್ಮೇಳನದಂಗವಾಗಿ ವಲಸೆ–ಉದ್ಯೋಗ ಖಾತ್ರಿ ಕುರಿತು ವಿಚಾರ ಸಂಕಿರಣದ ಉದ್ಘಾಟನೆಯು ಕಲಬುರಗಿ ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳಾದ ಪಿ ರಾಜ ಇವರು ನೆರವೇರಿಸಿ 'ಶ್ರಮಿಕರು ಹೊಟ್ಟೆ ಹೊರೆಯಲು ವಲಸೆ ಹೋಗುವುದನ್ನು ತಪ್ಪಿಸುವುದಕ್ಕಾಗಿ ಉದ್ಯೋಗ ಖಾತ್ರಿ ಕಾಯ್ದೆಯ ಸಂಪೂರ್ಣ ಪ್ರಯೋಜನ ಪಡೆಯಲು ಸಾಧ್ಯವಾಗಬೇಕಿದೆ. ಕಲಬುರಗಿ ಜಿಲ್ಲೆಯು ಹೆಚ್ಚು ಕೃಷಿ ಕೂಲಿಕಾರ್ಮಿಕರನ್ನು ಹೊಂದಿದ ಜಿಲ್ಲೆಯಾಗಿದೆ. ದೊಡ್ಡ ಸಂಖ್ಯೆಯಲ್ಲಿರುವ ಕೂಲಿ ಕಾರ್ಮಿಕರಿಗೆ ಕೆರೆಗಳಲ್ಲಿ ಮನರೇಗಾ ಅಡಿ ಕೆಲಸ ಕೊಡಲು ಆಸ್ಪದವಿದೆ. ರಾಷ್ಟ್ರೀಯ ಸಂಪತ್ತಾಗಿ ನಿರ್ಮಾಣವಾಗುವಂತೆ ಗ್ರಾಮ ಪಂಚಾಯತ್ ನಿರ್ವಹಣೆ ವಮಾಡಬೇಕಾಗುವುದು. ಸಿಬ್ಬಂದಿಗಳ ಕೊರತೆಯೂ ಇದೆ. ಆದಾಗ್ಯೂ ಉದ್ಯೋಗ ಖಾತ್ರಿ ಕಾಯ್ದೆಯ ಮೂಲಕ ಕೆಲಸ ಬಯಸಿದವರಿಗೆಲ್ಲ ಕೊಡಲಾಗುವುದು. ಕೆಲಸ ಬಯಸಿದವರೆಲ್ಲರೂ ಅರ್ಜಿ ನಮೂನೆ 6 ತುಂಬಿಸಿಕೊಟ್ಟು ಸ್ವೀಕೃತಿ ಪಡೆಯಬೇಕು. ಈ ವರ್ಷ 55 ಲಕ್ಷ ಮಾನವ ದಿನಗಳ ಸೃಷ್ಟಿ ಗುರಿ ಹೊಂದಿದ್ದೇವೆ. ಸಮಸ್ಯೆಗಳು ಪರಿಹರಿಸಲಾಗುವುದು. ಉದ್ಯೋಗ ಖಾತ್ರಿಯ ಜಾರಿಯ ಮೂಲಕ ವಲಸೆ ತಡೆಗಟ್ಟುವಲ್ಲಿ ಖಂಡಿತ ಶ್ರಮಿಸಲಾಗುವುದು' ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೆ ನೀಲಾ 'ವಲಸೆ ಬದುಕು ಬಹು ದಾರುಣವಾದದ್ದು. ಕುಟುಂಬ ವಿಘಟನೆ, ಮಕ್ಕಳು ಶಾಲೆಯಿಂದ ಹೊರಗುಳಿಯುವುದು, ಆರೋಗ್ಯ ಕೆಡುವುದು, ರೋಗ ರುಜಿನಕ್ಕೆ ಬಲಿಯಾಗುವುದು, ಹಳ್ಳಿಯಲ್ಲಿರುವ ವೃದ್ಧ ತಂದೆ ತಾಯಿ ಚಿಕ್ಕ ಮಕ್ಕಳು ಅನಾಥರಾಗುವುದು, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಯುವುದು ಇವೆಲ್ಲವೂ ವಲಸೆಯ ದುಷ್ಪರಿಣಾಮಗಳು. ನಮ್ಮ ಪ್ರದೇಶದಿಂಧ ಹೆಚ್ಚು ವಲಸೆ ಹೋಗುವರು. ಗೇಣು ಹೊಟ್ಟೆ ಹೊರೆಯಲು ಮಾರುದ್ದ ಮೈ ಮಾರಿಕೊಳ್ಳುವಂತಹ ಬರ್ಬರ ಸ್ಥಿತಿಯೂ ಇದೆ. ಇದನ್ನು ತಪ್ಪಿಸಲೇಬೇಕಿದೆ. ವಲಸೆ ತಡೆಗಟ್ಟುವುದು ಉದ್ಯೋಗ ಖಾತ್ರಿಯ ಮಹತ್ವದ ಉದ್ದೇಶಗಳಲ್ಲೊಂದು. ಈ ಕಾಯ್ದೆಯನ್ನು ಕಟ್ಟು ನಿಟ್ಟಾಗಿ ಜಾರಿ ಮಾಡಬೇಕು.' ಎಂದು ಹೇಳಿದರು.

ವಲಸೆ – ಉದ್ಯೋಗ ಖಾತ್ರಿ ಕುರಿತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ ಎನ್ ನಾಗರಾಜ ಇವರು ಮಾತನಾಡಿ 'ವಲಸೆಯು ಜಾಗತಿಕ ಸಮಸ್ಯೆಯಾಗಿದೆ. ಶ್ರಮಿಕರನ್ನು ಗಡಿಯಾಚೆ ತಳ್ಳುವ, ಭದ್ರತೆ ಇಲ್ಲದಂತಾಗಿಸುವ, ಬದುಕುಳಿಯಲು ಸಹ ಅವಕಾಶ ಇಲ್ಲದಂತೆ ಮಾಡುವ ಬಹು ದೊಡ್ಡ ಜಾಗತಿಕ ವಿದ್ಯಮಾನಗಳಿವೆ. ಭೂಮಿ ವಂಚಿತರು ವಲಸೆಗೆ ಹೆಚ್ಚು ಒಡ್ಡಿಕೊಳ್ಳುವವರಾಗಿದ್ದಾರೆ. ಭೂಮಿಯ ಅಸಮಾನ ಹಂಚಿಕೆ, ಮತ್ತು ದುಡಿಯುವವರಿಗೆ ಭೂಮಿ ಇಲ್ಲದಿರುವುದು ಮುಖ್ಯ ಕಾರಣವಾಗಿದೆ. ಬಡ ಮತ್ತು ಮದ್ಯಮವರ್ಗದ ರೈತರು ಸಹ ಸರ್ಕಾರದ ಕೃಷಿ ವಿರೋಧಿ ಧೋರಣೆಯಿಂದಾಗಿ ಭೂಮಿ ಕಳೆದಕೊಂಡು ಕೃಷಿ ಕೂಲಿಕಾರ್ಮಿಕರಾಗಿ ಮಾರ್ಪಡುತ್ತಿದ್ದಾರೆ. ಈಗ ರೈತ

ಪುಟ 6 ಕ್ಕೆ



ಅಮೆರಿಕಾದಲ್ಲಿ ಬಂಡವಾಳಶಾಹಿ ಬಗ್ಗೆ ವಿರೋಧ ಹೆಚ್ಚುತ್ತಿದೆ
ಡಾ|ಅಮರ್‌ಕುಮಾರ್ ಜೊತೆ ಮಾತುಕತೆ

ವರದಿ: ವಾ.ಉ.

ಮೈಸೂರಿನವರಾದ ಡಾ|ಅಮರ್‌ಕುಮಾರ್ ಅಮೆರಿಕಾದಲ್ಲಿ ಸರ್ಜನ್ ವೈದ್ಯರಾಗಿ ಕಳೆದ 46 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರ ಪತ್ನಿಯೂ ವೈದ್ಯೆಯೇ. ಮನೆಯಲ್ಲಿ ಕನ್ನಡವನ್ನೇ ಮಾತನಾಡುತ್ತಾರೆ. ಅಲ್ಲೇ ಬೆಳೆದ ಇಬ್ಬರು ಮಕ್ಕಳೂ ಕನ್ನಡವನ್ನೇ ಮಾತನಾಡುತ್ತಾರೆ.

ಡಾ| ಅಮರ್‌ಕುಮಾರ್ ಅಮೇರಿಕಾದಲ್ಲಿದ್ದು, ಅಮೇರಿಕಾ ಹಾಗೂ ಭಾರತವನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಎರಡೂ ಕಡೆಯ ರಾಜಕೀಯ ಆರ್ಥಿಕ ವ್ಯವಸ್ಥೆಗಳು ಅರ್ಧಶತಮಾನದ ಅವಧಿಯಲ್ಲಿ ತಾಳಿದ ರೂಪಾಂತರಗಳನ್ನು ಗುರುತಿಸುತ್ತಾರೆ. ವಿಚಾರವಾದಿಯಾಗಿರುವ ಅವರು ಮೈಸೂರು ಜಿಲ್ಲೆ ಮುಳ್ಳೂರಿನಲ್ಲಿ ಶಾಲೆಯೊಂದನ್ನು ಸ್ಥಾಪಿಸಿದ್ದಾರೆ. ಮೈಸೂರಿನಲ್ಲಿ ಲಾಭೋದ್ದೇಶವಿಲ್ಲದೆ ಆಸ್ಪತ್ರೆಯಲ್ಲೂ ಹೂಡಿಕೆ ಮಾಡಿದ್ದಾರೆ. ಡಿಸೆಂಬರ್ 5 ರಂದು ಮಂಗಳೂರಿನ ಡಿವೈಎಫ್‌ಐ ಮತ್ತಿತರ ಪ್ರಗತಿಪರ ಸಂಘಟನೆಗಳು ಅವರನ್ನು ಆಹ್ವಾನಿಸಿ ಅವರೊಡನೆ ಮಾತುಕತೆ ನಡೆಸಿತು.

ಅಮೇರಿಕಾದ ಕೇವಲ 3 ಜನರಲ್ಲಿ ಅಲ್ಲಿನ 160 ಮಿಲಿಯ ಜನರಿಗಿಂತ ಹೆಚ್ಚು ದುಡ್ಡಿದೆ. ಈಗ ಅಲ್ಲಿ ಎಲ್ಲರಿಗೂ ಕೆಲಸ ಇದೆ. ಆದರೆ ಆ ಕೆಲಸದಿಂದ ಜೀವನ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಮೊದಲೆಲ್ಲಾ 18 ವರ್ಷಕ್ಕೆ ಮಕ್ಕಳು ಮನೆಬಿಟ್ಟು ಹೊರಗೆ ದುಡಿದು ವಿದ್ಯೆ ಪಡೆದು ತಮ್ಮದೇ ಆದ ವಸತಿ, ಸಂಸಾರ ಮಾಡಿಕೊಳ್ಳುತ್ತಿದ್ದರು. ಈಗ ದುಡಿಮೆಯ ಆದಾಯದಲ್ಲಿ ಬದುಕುವುದು ಕಷ್ಟವಾದುದರಿಂದ ಬೇಗನೆ ಮನೆ ಬಿಡುತ್ತಿಲ್ಲ. ತಡವಾಗಿ ಮದುವೆಯಾಗುತ್ತಿದ್ದಾರೆ. ಹುಟ್ಟುವ ಮಕ್ಕಳ ಪ್ರಮಾಣವೂ ಕಡಿಮೆಯಾಗಿದೆ. ಹೀಗಾಗಿ ಯುವಜನ ಬಂಡವಾಳಶಾಹಿಯನ್ನು ಹೆಚ್ಚುಹೆಚ್ಚು ವಿರೋಧಿಸುತ್ತಿದ್ದಾರೆ.

1973 ರಲ್ಲಿ ತಾನು ಹೋದಾಗ ಸಮಾಜವಾದಿ ಎಂಬ ಪದದ ಪ್ರಯೋಗವೇ ಇರಲಿಲ್ಲ. ಸಮಾಜವಾದ ಕೊನೆಗೊಂಡಿದೆ ಎಂಬರ್ಥದ ಮಾತು ಬರುತ್ತಿತ್ತು. ಕಪ್ಪು ಜನಾಂಗದ ಮೇಲೆ, ರೆಡ್ ಇಂಡಿಯನ್ನರ ಮೇಲೆ ದಾಳಿಗಳು ನಡೆದಾಗ, ಬಿಳಿಯ ಜನಕ್ಕೆ ಏನೂ ಅನಿಸುತ್ತಿರಲಿಲ್ಲ. ಭಾರತದಲ್ಲಿ ದಲಿತರ ಮೇಲೆ ದಾಳಿ ಆದಾಗ, ಮೇಲ್ಜಾತಿಯವರಿಗೆ ಏನೂ ಅನಿಸುತ್ತಿಲ್ಲ ಅಲ್ಲವೇ? ಹಿಂದೆ ವಿದೇಶೀಯರಲ್ಲಿ ನೀವು ಅಮೆರಿಕಾಕ್ಕೆ ಬರುತ್ತಿರುವುದು ಅಮೆರಿಕಾ ಶ್ರೇಷ್ಠ ಎಂಬ ಭಾವನೆಯಿಂದಲ್ಲವೇ ಎಂದು ಪ್ರಶ್ನಿಸುತ್ತಿದ್ದರು ಆದರೆ ಅಲ್ಲಿನ ಕಪ್ಪು ಜನ ಎಂದೂ ಆ ಪ್ರಶ್ನೆಯನ್ನು ವಿದೇಶೀಯರಿಗೆ ಕೇಳುತ್ತಿರಲಿಲ್ಲ.

ಶಿಕಾಗೋ ಮತ್ತಿತರ ನಗರಗಳಲ್ಲಿ ಈಗಲೂ ಭಿಕ್ಷಾಟನೆ ಇದೆ. ಹಾಗೆ ನೋಡಿದರೆ ಕಳೆದ 50 ವರ್ಷಗಳಲ್ಲಿ ಭಾರತದಲ್ಲಿ ಭಿಕ್ಷಾಟನೆ ಕಡಿಮೆಯಾಗಿದೆ. ಅಲ್ಲಿನ ನಗರದ ಸ್ಲಮ್ಮುಗಳಲ್ಲಿ ಹಿಂಸೆ ಹಾಗೂ ಮಾರಕದ್ರವ್ಯ ಸೇವನೆ ಹೆಚ್ಚಿದೆ. ಅಮೆರಿಕಾದಲ್ಲಿ ಹೆಚ್ಚಿನ ಪ್ರಾಂತ್ಯಗಳಲ್ಲಿ ವ್ಯಕ್ತಿಯೊಬ್ಬನಿಗೆ ಗನ್ ಹೊಂದಲು ಲೈಸೆನ್ಸ್ ಬೇಕಾಗಿಲ್ಲ; ಆದರೆ ಕಾರು ಚಾಲನೆಗೆ ಎಲ್ಲರಿಗೂ ಲೈಸೆನ್ಸ್ ಬೇಕು. ಗ್ಯಾಂಗ್‌ಸ್ಟರ್‌ಗಳ ಪಾತ್ರ ಅಮೆರಿಕಾದ ಚರಿತ್ರೆಯಲ್ಲಿದೆ. ಈಗಿನ ಅಧ್ಯಕ್ಷ ಟ್ರಂಪ್ ಕೂಡಾ ಅಂಥ ಗುಂಪುಗಳ ನಾಯಕ. ಪ್ರಪಂಚದಲ್ಲಿ ಇಂದಿನ ದಿನಗಳಲ್ಲಿ ಗ್ಯಾಂಗ್‌ಸ್ಟರ್ ಮಾದರಿಯವರೇ ಉಗ್ರರಾಷ್ಟ್ರೀಯವಾದಿಗಳಾಗಿ ನಿರೂಪಿತರಾಗಿದ್ದಾರೆ. ಇದರಲ್ಲಿ ಅಮೆರಿಕಾ ಮತ್ತು ಭಾರತದ ಮುಖಂಡರಲ್ಲಿ ಸಾಮ್ಯವಿದೆ.

ಅಮೆರಿಕಾದಲ್ಲಿ ದುಡಿದ ತಾನು ಅಮೆರಿಕನೂ ಅಲ್ಲ, ಇಂಡಿಯನ್ ಕೂಡಾ ಅಲ್ಲ, ತಾನು ಪ್ರಪಂಚಕ್ಕೆ ಸೇರಿದವನು ಎಂದು ಹೇಳುತ್ತಿದ್ದೆ ಎನ್ನುತ್ತಾರೆ ಡಾ|ಅಮರ್‌ಕುಮಾರ್. ಭಾರತೀಯರು ಅಮೆರಿಕಾಕ್ಕೆ ಹೋದವರು ಬುದ್ಧಿವಂತಿಕೆಯಿಂದ ಅಲ್ಲಿ ಗಣ್ಯರಾಗಿದ್ದರೂ, ದುಡ್ಡಿನ ಹಿಂದೆಯೇ ಬಿದ್ದುಬಿಟ್ಟಿದ್ದಾರೆ; ಅವರಲ್ಲಿ ಇಂಟೆಲೆಕ್ಚುವಲ್ ಎನ್ನುಬಹುದಾದವರು ತೀರಾ ವಿರಳ. ಅವರಿಗೆ ಅಲ್ಲಿ ಮೈನಾರಿಟಿ ಹಕ್ಕುಗಳು ಬೇಕು. ಆದರೆ ಭಾರತದ ಬಹುಸಂಖ್ಯಾಕವಾದವನ್ನು ಹಾಗೂ ಅದರ ಕೇಂದ್ರ ವ್ಯಕ್ತಿಗಳಾದ ಮೋದಿ ಮತ್ತು ಷಾ ರನ್ನು ಭಾವನಾತ್ಮಕವಾಗಿ ಮೆಚ್ಚುತ್ತಾರೆ. ಈ ನಿಲುವಿನಿಂದ ವಿಶ್ವಹಿಂದೂ ಪರಿಷತ್ತಿನಂಥ ಸಂಸ್ಥೆಗಳಿಗೆ ಹಣದ ನೆರವು ನೀಡುತ್ತಾರೆ. ಮೋದಿ ಏನು ಮಾಡಿದರೂ ಅದನ್ನು ಸಮರ್ಥಿಸುತ್ತಾರೆ.

ಆದರೆ ಯುವಭಾರತೀಯರು ಅಲ್ಲಿನ ಇತರ ಯುವಜನರಂತೆ ಟ್ರಂಪ್‌ನ ವಿರೋಧವಿದ್ದಾರೆ. ಬಂಡವಾಳಶಾಹಿಯ ವಿರೋಧವಿದ್ದಾರೆ. ಪರಿಸರ ಚಳುವಳಿ ಪ್ರಬಲವಾಗಿದೆ. ವಿದ್ಯಾರ್ಥಿ ಚಳುವಳಿಗಳೂ, ನಾಸ್ತಿಕ ಚಳುವಳಿಯೂ ಬೆಳೆಯುತ್ತಿವೆ. ಅಮೆರಿಕಾದ ಜನರಿಗೆ ಭಾರತೀಯ ಅಮೆರಿಕನರ ಶ್ರಮಜೀವನದ ಬಗ್ಗೆ ಗೌರವವಿದೆ. ಅಮೆರಿಕಾದ ಜನರಲ್ಲಿ ವೈಯುಕ್ತಿಕ ಪ್ರಾಮಾಣಿಕತೆ ಹೆಚ್ಚು. ಆದರೆ ತದ್ವಿರುದ್ಧವಾಗಿ ಅಲ್ಲಿನ ಸರಕಾರಗಳು ಅಪ್ರಾಮಾಣಿಕವಾಗಿವೆ. ಅಮೆರಿಕಾ ದೇಶ ರೂಪುಗೊಂಡಾಗ ರೆಡ್ ಇಂಡಿಯನ್ನರಿಗೆ ನೀಡಿದ್ದ 300 ಅಶ್ವಾಸನೆಗಳಲ್ಲಿ ಅಮೆರಿಕಾ ಒಂದನ್ನೂ ಜಾರಿಗೊಳಿಸಿಲ್ಲ.

ಅಮೆರಿಕಾ ಕುರಿತಾದ ಕೇಳುಗರ ಪ್ರಶ್ನೆಗಳಿಗೆ ಡಾ|ಅಮರ್‌ಕುಮಾರ್ ನೀಡಿದ ಉತ್ತರಗಳಿಂದ, ಅಮೆರಿಕಾದ ಜೊತೆಜೊತೆಗೇ ಭಾರತವನ್ನೂ ಅರ್ಥಮಾಡಿಕೊಳ್ಳುವ ಅರಿವು ಮೂಡಿಸುವ ಕಾರ್ಯಕ್ರಮವಾಗಿ ಮಾತುಕತೆ ಮೂಡಿಬಂತು. ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಸ್ವಾಗತಿಸಿದರು. ಪ್ರೊ.ನರೇಂದ್ರ ನಾಯಕ್, ವಾಸುದೇವ ಉಚ್ಚಿಲ್, ಡಾ.ರಾಜೇಂದ್ರ ಉಡುಪ, ಡಾ.ಕೃಷ್ಣಪ್ಪ ಕೊಂಚಾಡಿ, ಯಶವಂತ ಮರೋಳಿ ಮತ್ತಿತರರು ಸಂವಾದದಲ್ಲಿ ಭಾಗವಹಿಸಿದ್ದರು.

ಚಿತ್ರನಟ ಹಾಗೂ ಹೋರಾಟಗಾರ ಚೇತನ್ ಅವರು ಡಾ|ಅಮರ್‌ಕುಮಾರ್ ಅವರ ಪುತ್ರ. ●

ಉಡುಪಿಯಲ್ಲಿ ಅಂಗನವಾಡಿ ನೌಕರರ ಬೃಹತ್ ಜಾಥಾ

ಅಂಗನವಾಡಿ ಕೇಂದ್ರಗಳಲ್ಲಿ ಶಾಲಾಪೂರ್ವಪ್ರಾಥಮಿಕ ಶಿಕ್ಷಣವನ್ನು ಆರಂಭಿಸುವಂತೆ ಆಗ್ರಹಿಸಿ ಹಾಗೂ ಅಂಗನವಾಡಿ ಖಾಸಗೀಕರಣದ ಹುನ್ನಾರದ ವಿರುದ್ಧ ರಾಜ್ಯ ಮಟ್ಟದ ಅಂಗನವಾಡಿ ನೌಕರರು ಅನಿರ್ದಿಷ್ಟಾವಧಿ ಮುಷ್ಕರದ ಪ್ರಯುಕ್ತ, ಉಡುಪಿ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಸಮಿತಿಯ ವತಿಯಿಂದ ಡಿಸೆಂಬರ್ 4 ರಂದು ಉಡುಪಿ ನಗರದಲ್ಲಿ ನಡೆದ ಪ್ರಚಾರ ಜಾಥಾಕ್ಕೆ ನೌಕರರಿಂದ ಅದ್ಭುತ ಸ್ವಾಗತ ದೊರಕಿತು.

ಜಾಥಾ ಅಲ್ಲಿನ ಅಜ್ಜರಕಾಡು ಹುತಾತ್ಮ ಸ್ಮಾರಕದ ಬಳಿ ಸೇರಿದಾಗ, ಸಭೆಯನ್ನುದ್ದೇಶಿಸಿ ಸಂಘದ ರಾಜ್ಯ ಕಾರ್ಯದರ್ಶಿ ಯಮುನಾಗಾಂವ್ಕರ್ ಮಾತನಾಡಿದರು. ಸಂಘದ ಜಿಲ್ಲಾಧ್ಯಕ್ಷೆ ಭಾರತಿ, ಪ್ರಧಾನ ಕಾರ್ಯದರ್ಶಿ ಸುಶೀಲಾನಾಡ, ಕೋಶಾಧಿಕಾರಿ ಯಶೋಧ, ಸಿಐಟಿಯು ಮುಖಂಡರಾದ ಕೆ.ಶಂಕರ್, ಕವಿರಾಜ್, ವಿದ್ಯಾರಾಜ್, ಬಲ್ಕೀಸ್ ಕುಂದಾಪುರ – ಸಭೆಯಲ್ಲಿ ಭಾಗವಹಿಸಿದ್ದರು.

ಇದಕ್ಕೂ ಮುನ್ನ ಉಡುಪಿ ಸರ್ವಿಸ್ ಬಸ್ ನಿಲ್ದಾಣದಿಂದ ಹೊರಟ ಅಂಗನವಾಡಿ ನೌಕರರ ಜಾಥಾ ಅಜ್ಜರಕಾಡಿನಲ್ಲಿ ಸಮಾಪ್ತಿಗೊಂಡಿತು. ●

ನೇಣುಹಗ್ಗ ಪ್ರದರ್ಶಿಸಿ ಬಂದರು ಶ್ರಮಿಕರ ಸಂಘ ಪ್ರತಿಭಟನೆ:

ಈರುಳ್ಳಿ ದರ ಏರಿಕೆ ನಿಯಂತ್ರಿಸಲಾಗದ ಕೇಂದ್ರ ಸರಕಾರದ ನೀತಿಯ ವಿರುದ್ಧ ಹಾಗೂ ಸಂಕಷ್ಟಕ್ಕೀಡಾದ ಗ್ರಾಹಕರು–ಕಾರ್ಮಿಕರ ರಕ್ಷಣೆಗೆ ಒತ್ತಾಯಿಸಿ ಮಂಗಳೂರು ಬಂದರು ಶ್ರಮಿಕರ ಸಂಘದಿಂದ ಬಂದರಿನ ಕಾರ್ಮಿಕರ ಕಟ್ಟೆಯ ಬಳಿ ಡಿಸೆಂಬರ್ 5 ರಂದು ಈರುಳ್ಳಿ ಕಟ್ಟಿದ ನೇಣು ಹಗ್ಗ ಪ್ರದರ್ಶಿಸುವ ಮೂಲಕ ವಿಶಿಷ್ಟ ರೀತಿಯಲ್ಲಿ ಪ್ರತಿಭಟನೆ ನಡೆಸಲಾಯಿತು.


ಪ್ರತಿಭಟನೆಯನ್ನುದ್ದೇಶಿಸಿ ಬಂದರು ಶ್ರಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್, ಮಂಗಳೂರು ಬಂದರಿಗೆ ಈರುಳ್ಳಿ ಬಾರದೆ ಇರುವುದರಿಂದ ಕಾರ್ಮಿಕರ ಕೆಲಸ ಬಹಳಷ್ಟು ಕಡಿಮೆಯಾಗಿದ್ದು, ಅದು ಅವರ ಆದಾಯವನ್ನು ಬಾಧಿಸುತ್ತಿದೆ. ಈರುಳ್ಳಿ ರೈತರ ಹಾಗೂ ಕಾರ್ಮಿಕರ ರಕ್ಷಣೆಗೆ ಸರಕಾರ ಶೀಘ್ರ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಂದರು ಶ್ರಮಿಕರ ಸಂಘದ ಅಧ್ಯಕ್ಷ ವಿಲ್ಲಿ ವಿಲ್ಸನ್, ಉಪಾಧ್ಯಕ್ಷ ಹಸನ್ ಮೋನು, ಖಜಾಂಚಿ ಹರೀಶ್ ದೇರೆಬೈಲ್, ಡಿವೈಎಫ್‌ಐ ಮಂಗಳೂರು ನಗರ ಅಧ್ಯಕ್ಷ ನವೀನ್ ಕೊಂಚಾಡಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ●

ಗಜೇಂದ್ರಗಡ: ಬೀದಿಬದಿ ಕಾರ್ಮಿಕರಿಂದ ಬೆಂಗಳೂರು ಚಲೋ

ಬೀದಿಬದಿ ವ್ಯಾಪಾರಸ್ಥರ ಸಂಘ (ಸಿಐಟಿಯು) ತಾಲೂಕಾ ಸಮಿತಿ ನೇತೃತ್ವದಲ್ಲಿ ಬುಧವಾರ ಮುಂಜಾನೆ 10–30 ಕ್ಕೆ ಸಹಕಾರಿ ಸಂಘ ಆವರಣದಲ್ಲಿ ಸಭೆ ನಡೆಸಲಾಯಿತು.

ಬೀದಿಬದಿ ವ್ಯಾಪಾರಸ್ಥರ ಸಂಘದ ಗೌರವಾಧ್ಯಕ್ಷರಾದ ಬಾಲು ರಾಠೋಡ ಮಾತನಾಡಿ ವ್ಯಾಪಾರಸ್ಥರ ಸ್ಥಳೀಯ ಸಮಸ್ಯೆಗಳ ಕುರಿತು ಸ್ಥಳೀಯ ಮತ್ತು ಜಿಲ್ಲಾಡಳಿತ ಗಮನಕ್ಕೆ ತಂದರೂ ಸೂಕ್ತ ಮಾರುಕಟ್ಟೆ ವ್ಯವಸ್ಥೆಯ ಮಾಡುವಲ್ಲಿ ವಿಫಲವಾಗಿದೆ. ಕಾರ್ಮಿಕರ ಬೇಡಿಕೆಗಳನ್ನು ರಾಜ್ಯ ಸರ್ಕಾರಕ್ಕೆ ಎಲ್ಲಾ ಅಸಂಘಟಿತ ಕಾರ್ಮಿಕರಿಗೂ ಕೂಡಲೇ ಅಂಬೇಡ್ಕರ್ ಸ್ಮಾರ್ಟ್ ಕಾರ್ಡ ವಿತರಿಸಬೇಕು. 2017 ರಲ್ಲಿ ಘೋಷಿಸಿದ ಭವಿಷ್ಯ ನಿಧಿಯನ್ನು ಯೋಜನೆಯನ್ನು ಕಾನೂನಾಗಿ ಪರಿವರ್ತಿಸಬೇಕು. ಕಾರ್ಮಿಕರಿಗೆ ಗುರುತಿನ ಚೀಟಿ ಪಡೆದವರಿಗೆ ಆಯುಷ್ಮಾನ್ ಭಾರತ್ ಕಾರ್ಡ ವಿತರಣೆ ಮತ್ತು ಕನಿಷ್ಠ ಮಾಸಿಕ 3000/– ರೂ ಪಿಂಚಣಿ ಮಕ್ಕಳಿಗೆ ವಿದ್ಯಾರ್ಥಿ ವೇತನ, ಮರಣ ಪರಿಹಾರ, ಗುಂಪು ಮನೆ ವಸತಿ ಯೋಜನೆ ಜಾರಿಗೊಳಿಸಬೇಕು ಎಂದು ರಾಜ ಸರ್ಕಾರಕ್ಕೆ ಕಾನೂನು ಜಾರಿ ಮಾಡಲು ಹಾಗೂ ಪ್ರಸ್ತುತ ಬಜೆಟ್‌ನಲ್ಲಿ 500 ಕೋಟಿ ಹಣ ಘೋಷಿಸಲು ಆಗ್ರಹಿಸಿ ಕಾರ್ಮಿಕರಿಂದ ವಿಧಾನ ಸೌಧ ಚಲೋವನ್ನು ಡಿಸೆಂಬರ್ 12 ರಂದು ಹಮ್ಮಿಕೊಳ್ಳಲಾಗಿದೆ. ಹಾಗಾಗಿ ನೂರಾರು ಸಂಖ್ಯೆಯಲ್ಲಿ ಬೀದಿಬದಿ ವ್ಯಾಪಾರಸ್ಥರು ಭಾಗವಹಿಸಬೇಕೆಂದು ಅಧ್ಯಕ್ಷರಾದ ಅಲ್ಲಾಭಕ್ಷಿ ಮುಚ್ಚಾಲಿ ಮಾತನಾಡಿ ಗಜೇಂದ್ರಗಡ ವ್ಯಾಪಾರಸ್ಥರ ಸ್ಥಳೀಯ ಸಮಸ್ಯೆಗಳು ಜಲ್ವಂತವಾಗಿವೆ. ಇದಕ್ಕೆ ಪುರಸಭೆ ಹಲವಾರು ಬಾರಿ ಪ್ರತೇಕ ಮಾರುಕಟ್ಟೆಯಾಗಬೇಕು, ಬೀದಿ ದನಗಳ ಹಾವಳಿ ತಪ್ಪಿಸಬೇಕು. ವ್ಯಾಪಾರಸ್ಥರಿಗೆ ತಕ್ಷಣಕ್ಕೆ ಸೂಕ್ತ ಸಂಚಾರ ನಿಯಮ ಪಾಲನೆಗೆ ಸ್ಥಳ, ಸಂಚಾರಿ ಶೌಚಾಲಯ, ಕುಡಿಯುವ ನೀರು, ಒದಗಿಸದೇ ಇರುವುದರಿಂದ ಜೋಡು ರಸ್ತೆಯಲ್ಲಿ ಹಲವಾರು ರೀತಿಯಲ್ಲಿ ಕಿರುಕುಳ ಹಿಂಸೆದೊಂದಿಗೆ ವ್ಯಾಪಾರ ನಡೆಸಬೇಕಾಗಿದೆ. ಇದಕ್ಕೆ ಸ್ಥಳೀಯ ಆಡಳಿತ ಯಾವುದೇ ಮುಂಜಾಗೃತ ಕ್ರಮ ವಹಿಸದೇ ಇರುವುದು ಮೂಲ ಕಾರಣವಾಗಿದೆ. ಆದರೆ ಪೋಲಿಸ್ ಇಲಾಖೆಯವರು ಸಾರಿಗೆ ಸಂಪರ್ಕ ಪಾಲನೆಗೆ ಜೋಡು ರಸ್ತೆ ಒಂದು ಭಾಗದಲ್ಲಿ ವ್ಯಾಪಾರಸ್ಥರಿಗೆ ಲೈನ್ ಮಾರ್ಕ ಮಾಡಿ ವ್ಯಾಪಾರಕ್ಕೆ ಅನುವು ಮಾಡಿದ್ದಾರೆ. ಅದು ಈಗ ಸ್ವಲ್ಪ ನಿರಾಳ ಆದರೂ ಕಷ್ಟಕರವಾಗಿದೆ. ಆದ್ದರಿಂದ ಎಲ್ಲರೂ ಅಸಂಘಟಿತರಾಗಿ ಹೋರಾಟ ಮಾಡಿದಾಗ ಮಾತ್ರ ನ್ಯಾಯ ಸಿಗುತ್ತದೆ. ಹಾಗಾಗಿ ಬೀದಿಬದಿ ವ್ಯಾಪಾರಸ್ಥರ ಕಾಯ್ದೆ–2009 ಜಾರಿಗೆ ಬರಲು ಹೋರಾಟ ಅನಿವಾರ್ಯ ಎಂದು ಹೇಳಿದರು.



ಮಹಿಳೆಯರು, ವೃದ್ಧರು, ಇತರೆ ಸಣ್ಣ ವ್ಯಾಪಾರಸ್ಥರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಕೆಲವು ಸಣ್ಣ–ಪುಟ್ಟ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಯಿತು.

ಈ ಸಭೆಯಲ್ಲಿ ಕಾಯಿಪಲ್ಲೆ ಮಾರುಕಟ್ಟೆ ಅಧ್ಯಕ್ಷರಾದ ರಾಜಣ್ಣ ಶೇಡಜಿ, ಪೀರು ರಾಠೋಡ, ರಾಘು ಹೂಗಾರ, ಬಾಬುಸಾಬ ಗಣಿ, ಭೀಮವ್ವ ರಾಠೋಡ, ನಾಗಪ್ಪ ಅಜಮೀರ, ಮುತ್ತುರಾಜ ದಿಂಡವಾಡ, ಮುಸ್ತಾಕ ಅಕ್ಕಿ, ಅಲ್ಲಾಸಾಬ ಕಂಠಿ, ಭೀಮವ್ವ ರಾಠೋಡ, ದಾವಲಸಾಬ ಗಣಿ, ರಾಜಾಸಾಬ ಚಾಮಲಾಪೂರ, ದಾವಲಸಾಬ ಚಿನ್ನೂರ, ಸುಮಾ ಬೇಂದ್ರೆ, ಗೀತಾ ಬೇಂದ್ರೆ, ಸಂಜವ್ವ ಮುದಗಲ್ಲ ಮುಂತಾದರವರು ಪಾಲ್ಗೊಂಡಿದ್ದರು. ●

ಅಂಗನವಾಡಿ ನೌಕರರಿಂದ ಮನವಿ ಸಲ್ಲಿಕೆ

ವಿಜಯಪುರ: ಅಂಗನವಾಡಿ ಕೇಂದ್ರಗಳಲ್ಲಿ ಪಾಲನೆಯೊಟ್ಟನಗೆ ಎಲ್.ಕೆ.ಜಿ – ಯು.ಕೆ.ಜಿ ಶಿಕ್ಷಣ ನೀಡಿ ಸಮಾಜ ಬದಲಾವಣೆಯನ್ನು ಬಯಸುತ್ತಿದೆ ಆದರೆ ಅಂಗನವಾಡಿ ಕೇಂದ್ರಗಳು ಮಾತ್ರ ಹಳೆಯ ರೀತಿಯಲ್ಲಿಯೇ ಕಾರ್ಯಚರಿಸುತ್ತೇವೆ. ಬದಲಾದ ಸಮಾಜದ ರೀತಿಯಲ್ಲಿ ಅಂಗನವಾಡಿ ಕೇಂದ್ರಗಳು ಮಕ್ಕಳನ್ನು ಆಕರ್ಷಿಸುವ ಕೇಂದ್ರಗಳಾಗಬೇಕು. ಆದ್ದರಿಂದ ಅಂಗನವಾಡಿ ಕೇಂದ್ರಗಳನ್ನು ಪಾಲನಾ ಮತ್ತು ಕಲಿಕೆಯ ಕೇಂದ್ರಗಳನ್ನಾಗಿಸಬೇಕು. ಈಗಿರುವ ಅಂಗನವಾಡಿ ಕೇಂದ್ರ ವೇಳಾಪಟ್ಟಿಯಲ್ಲಿ 3 ಗಂಟೆ ಶಾಲಾಪೂರ್ವ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಅಂಗನವಾಡಿ ಕೇಂದ್ರಗಳಲ್ಲಿ ಮಾತೃಪೂರ್ಣ ಯಶಸ್ವಿ ಮಾಡಲು ಹೆಚ್ಚುವರಿ ಸಹಾಯಕಿಯನ್ನು ಕೊಡಬೇಕು. ಅಂಗನವಾಡಿ ಕೇಂದ್ರಗಳಿಗೆ ಎಲ್ಲಾ ರೀತಿಯ ಗುಣಾತ್ಮಕ ಮೂಲಭೂತ ಸೌಲಭ್ಯಗಳನ್ನೊದಗಿಸಬೇಕು. 1995 ರಿಂದ ಪ್ರಾರಂಭವಾಗಿರುವ ಎಲ್ಲಾ ಯೋಜನೆಗಳಲ್ಲಿ ಆಯ್ಕೆಯಾಗಿರುವ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಎಸ್.ಎಸ್.ಎಲ್.ಸಿ. ಪಾಸಾದವರು ಅನೇಕರು ಪಧವೀದರರು ಆಗಿರುವುದರಿಂದ ಅವರಿಗೆ ತರಭೇತಿಯನ್ನು ಕೊಟ್ಟು, ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ – ಯು.ಕೆ.ಜಿ ಯನ್ನು ಪ್ರಾರಂಭಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ, ಜಿಲ್ಲಾ ಸಮಿತಿ ವತಿಯಿಂದ ಗುರುವಾರ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ ಅವರಿಗೆ ಮನವಿ ಸಲ್ಲಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಸಭೆ ಮಾರ್ಪಟ್ಟು ನಂತರ ಗಾಂಧಿವೃತ್ತ ಸಂಚರಿ ಮರಳಿ ಅಂಬೇಡ್ಕರ್ ವೃತ್ತಕ್ಕೆ ಆಗಮಿಸಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಭಾರತಿ ವಾಲಿ ಮಾತನಾಡಿ, ಈಗಾಗಲೇ ಸರ್ಕಾರಿ ಶಾಲೆಗಳಲ್ಲಿ ಪ್ರಾರಂಭವಾಗಿರುವ ಮತ್ತು ಪ್ರಾರಂಭವಾಗುತ್ತಿರುವ ಎಲ್.ಕೆ.ಜಿ. – ಯು.ಕೆ.ಜಿಯನ್ನು ಪ್ರಾರಂಭಿಸದಂತೆ ಇಲಾಖೆಯಿಂದ ತಡೆಯೊಡ್ಡಬೇಕು. ಅದಕ್ಕೆ ಬೇಕಾದ ಎಲ್ಲಾ ರೀತಿಯ ಕ್ರಮಗಳನ್ನು ಕೂಡಲೇ ವಹಿಸಬೇಕು. ಐಸಿಡಿಎಸ್ 6 ಉದ್ದೇಶಗಳಿಗೆ ಬಿಟ್ಟು ಉಳಿದ ಯಾವುದೇ ಕೆಲಸವನ್ನು ಅಂಗನವಾಡಿ ನೌಕರರಿಂದ ಕಡ್ಡಾಯವಾಗಿ ಮಾಡಿಸಬಾರದು. ಹೊಸ ಶಿಕ್ಷಣ ನೀತಿಯ ಶಿಫಾರಸ್ಸಿನಲ್ಲಿರುವ 3 ರಿಂದ 9 ವರ್ಷದ ವರ್ಗೀಕರಣವನ್ನು ವಿರೋಧಿಸಬೇಕು. ಈಗಿರುವ ನಿವೃತ್ತಿ ಸೌಲಭ್ಯವನ್ನು ಬದಲಾಯಿಸಿ. ಎಲ್.ಐ.ಸಿ ಆಧಾರಿತ ಪೆನ್ಷನ್ ನೀಡಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ ಕೊಡುವ ಎನ್.ಪಿ.ಎಸ್ ಮಾನದಂಡದಂತೆ ವೇತನ ವಂತಿಕೆ ಆಧಾರಿತ ಪಿಂಚಣಿ ಯೋಜನೆ ಜಾರಿ ಮಾಡಬೇಕು. ನಿವೃತ್ತಿ ಆದ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಗೆ ಇಡುಗಂಡು ತಕ್ಷಣ ಬಿಡುಗಡೆ ಆಗಬೇಕು. ಇಲಾಖೆಯ ಲೋಪದೋಷಗಳಿಂದ ಪ್ರಾನ್ ಕಾರ್ಡು ನೀಡದವರಿಗೆ – ಹಣ ಕಡಿತ ಆಗದವರಿಗೂ ನಿವೃತ್ತಿ ಸೌಲಭ್ಯ ಬಿಡುಗಡೆ ಮಾಡಬೇಕು. ಕಾರ್ಯಕರ್ತೆ–ಸಹಾಯಕಿಯರಿಗೆ ಪ್ರಾನ್ ಕಾರ್ಡು ನೀಡದವರಿಗೆ ತಕ್ಷಣ ನೀಡಬೇಕು. 2016 ಏಪ್ರಿಲ್ ನಿಂದ ಆಯ್ಕೆ ಆದ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಖಾಯಂ ನಿವೃತ್ತಿ ಸೌಲಭ್ಯದಡಿ ತರಬೇಕು. ಈಗಾಗಲೇ ನಿವೃತ್ತಿ ಆದವರಿಗೆ ಕನಿಷ್ಠ 6000/– ರೂ ಪಿಂಚಣಿ ನೀಡಬೇಕು ಎಂದು ಒತ್ತಾಯಿಸಿದರು.



ಜಿಲ್ಲಾ ಅಧ್ಯಕ್ಷರಾದ ಸುನಂದಾ ಬಿ. ನಾಯಿಕ ಮಾತನಾಡಿ, ಅಂಗನವಾಡಿ ಸಹಾಯಕಿ ಕಾರ್ಯಕರ್ತೆಯಾಗಿ ಮುಂಬಡ್ತಿ ಪಡೆಯಲು ಇರುವ ವಯಸ್ಸಿನ ಭೌಗೋಳಿಕ ವಿಸ್ತೀರ್ಣದ ಮಿತಿಯನ್ನು ಸಡಿಲಿಸಬೇಕು. ಅನುಕಂಪದ ಆಧಾರದಲ್ಲಿರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹೆಣ್ಣು ಮಕ್ಕಳಿಗೆ ಮಾತ್ರ ವಲ್ಲದೆ ಕುಟುಂಬದವರಿಗೆ ಎಂದು ತಿದ್ದುಪಡಿಯಾಗಬೇಕು. ಖಾಲಿಯಿರುವ ಸಹಾಯಕಿ ಮತ್ತು ಕಾರ್ಯಕರ್ತೆಯರ ಹುದ್ದೆಗಳನ್ನು ತುಂಬಬೇಕು. ಹಲವು ಯೋಜನೆಗಳಿಗೆ ಡಿಡಿ, ಪಿಓ, ಸಿಡಿಪಿಓ, ಎಸಿಡಿಪಿಓ ಮೇಲ್ವಿಚಾರಕಿಯರನ್ನು ಖಾಯಂ ಆಗಿ ನೇಮಕ ಮಾಡಬೇಕು. ಅಂಗನವಾಡಿ ಕಾರ್ಯಕರ್ತೆಯರಿಗೆ ಸೇವಾ ನಿಯಾಮಾವಳಿ ರಚಿಸಬೇಕು. ಕೇಂದ್ರ ಸರ್ಕಾರ ಕಡಿತ ಮಾಡಿರುವ ಅನುದಾನ ವಾಪಸ್ಸು ಆಗಬೇಕು. ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಯನ್ನು ಸೂಚನೆಯನ್ನು ರಾಜ್ಯ ಸರ್ಕಾರ ಒಪ್ಪಬಾರದು. ವರ್ಷಗಳನ್ನು ಪೂರೈಸಿದ ಮೇಲ್ವಿಚಾರಕಿಯರನ್ನು ಕಡ್ಡಾಯ ವರ್ಗಾವನೆ ಮಾಡಬೇಕು ಎಂದರು.



ಜಿಲ್ಲಾ ಸಂಘಟನಾ ಕಾರ್ಯದರ್ಶಿ ಅಶ್ವಿನಿ ತಳವಾರ ಮಾತನಾಡಿ, ಫಿರಿಯಾಡಿಕಲ್ ಲೇಬರ್ ಫೋರ್ಸ್ ಸರ್ವೇ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಮಹಿಳಾ ನಿರುದ್ಯೋಗ ಹೆಚ್ಚುತ್ತಿದೆ. ಮಾತ್ರವಲ್ಲದೇ ನಿಗದಿತ ಸಂಬಳ ತೆಗೆದು ಕೊಳ್ಳುವವರು 26% ಮಾತ್ರ ಉಳಿದವರು, ಸ್ವಯಂ ಉದ್ಯೋಗ, ಅರೆಕಾಲಿಕ, ಸಾಂಧಾರ್ಭಿಕ, ಗುತ್ತಿಗೆ ಇತರೆ ಉದ್ಯೋಗಿಗಳಾಗಿದ್ದಾರೆ. ಅಂಗನವಾಡಿ ನೌಕರರು ಇಂತಹ ಉದ್ಯೋಗಿಗಳು ಅರೆಕಾಲಿಕ ಪಡೆಗೆ ಸೇರಿದವರು ಆದರೆ ಇಂದು ಉದಾರೀಕರಣ ನೀತಿಗಳನ್ನು ಅಪ್ಪಿಕೊಂಡು ಮುದ್ದಾಡುತ್ತಿರುವ ಸರ್ಕಾರ ಎಲ್ಲಾ ಕ್ಷೇತ್ರಗಳನ್ನು ಖಾಸಗಿ ಮಾಡುತ್ತಿದೆ. ಆಹಾರ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗಾಗಿ ಇರುವ ಯೋಜನೆಗಳ ಪ್ರಮುಖ ಜವಬ್ದಾರಿಗಳನ್ನು ಬೇರೆಡೆಗೆ ವರ್ಗಾಯಿಸುವ ಮುಖಾಂತರ ಬಲಹೀನಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದರಿಂದ ಸಾವಿರಾರು ಮಹಿಳೆಯರು ಕೆಲಸ ಕಳೆದು ಕೊಳ್ಳುವುದಲ್ಲದೇ ಐಸಿಡಿಎಸ್ ಯೋಜನೆ ತನ್ನ ಉದ್ದೇಶ ಕಳೆದು ಕೊಳ್ಳಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಿಜಯಪುರ ಗೌರವ ಅಧ್ಯಕ್ಷರಾದ ಸರಸ್ವತಿ ಮಠ, ತಾಲೂಕಾ ಅಧ್ಯಕ್ಷರಾದ ಆರತಿ ಜಾನಕರ, ಸುವರ್ಣ ಹಲಗಣಿ, ಗೀತಾ ಜಾಧವ, ಶೋಭಾ ಕಬಾಡೆ, ಉಷಾ ಕುಲಕರ್ಣಿ, ದಾನಮ್ಮ ಗುಗ್ಗರಿ, ಶೋಭಾ ಕುಂಬಾರ, ಪ್ರತಿಭಾ ಕುರಡೆ, ಶಾರದಾ ತಾಂಬೆ, ದಾಕ್ಷಾಯಿಣಿ ಅವಟಿ, ಸರೋಜಿನಿ ಸಿಂಪಿಗೇರ, ಸಾವಿತ್ರಿ ಭೈರಗೊಂಡ, ಸತ್ಯಮ್ಮ ಹಡಪದ, ಕಮಲಾ ಹಳ್ಳದಮನಿ, ಸೈರಾಬಾನು ಜಮಾದಾರ, ಜರೀನಾ ಸಂಖದ, ಲೈಲಾಬಿ ನದಾಫ, ಪದ್ಮಾವತಿ ಬಿರಾದಾರ ಸೇರಿದಂತೆ ಎಲ್ಲ ತಾಲೂಕಿನ ಅಂಗನವಾಡಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಗದಗ ನಿಂದ ಆಗಮಿಸಿ ಅಂಗನವಾಡಿ ಜಾಥಾವನ್ನು ಜಿಲ್ಲಾ ಸಮಿತಿವತಿಯಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಇದೇ ಸಂದರ್ಭ ಜಾಥಾ ಸಂಚಾಲಕರಾದ ಮಾರುತಿ ಚಿಟಕಿ ಹಾಗೂ ಗದಗದಿಂದ ಆಗಮಿಸಿ ಸಿಐಟಿಯು ಅಧ್ಯಕ್ಷರಾದ ಹಿರೇಮಠ ಅವರು ಮಾತನಾಡಿ, ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ ಇತ್ತೀಚೆಗೆ ಮಾಡಿರುವ ಶಿಫಾರಸ್ಸಿನಲ್ಲಿ 3 ರಿಂದ 8 ವರ್ಷದ ಒಂದು ವರ್ಗೀಕರಣ ಮಾಡಿ ಮಾಧ್ಯಮವನ್ನು ಶಿಕ್ಷಣ ಇಲಾಖೆಯಡಿಯಲ್ಲಿ ತೆರೆಯಬೇಕೆಂಬ ಶಿಫಾರಸ್ಸು ಮಾಡಿದೆ. ಮಾತ್ರವಲ್ಲದೆ ರಾಜ್ಯದಲ್ಲಿ 2019 ಮೇ ತಿಂಗಳಲ್ಲಿ 3 1/2 ವರ್ಷ ಮೇಲ್ಪಟ್ಟ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಎಲ್.ಕೆ.ಜಿ– ಯು.

ಪುಟ 6 ಕ್ಕೆ

ರಾಮದುರ್ಗ: ಅನದೀಕೃತ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಲು ಒತ್ತಾಯಿಸಿ ರೈತರ ಪ್ರತಿಭಟನೆ

ಸರಕಾರಿ ಭೂಮಿಯಲ್ಲಿ ಸಾಗುವಳಿ ಮಾಡಿದ ಅತಿಕ್ರಮ ರೈತರಿಗೆ ಕೂಡಲೇ ಹಕ್ಕು ಪತ್ರ ವಿತರಿಸಬೇಕು ಹಾಗೂ ಭೂಮಂಜೂರಾತಿ ಸಮಿತಿ ರಚಿಸಬೇಕೆಂದು ಒತ್ತಾಯಿಸಿ ವೆಂಕಟೇಶ್ವರ ದೇವಸ್ಥಾನದಿಂದ ಮೆರವಣಿಗೆ ಮೂಲಕ ತಾಲೂಕಿನ ಅತಿಕ್ರಮ ಸಾಗುವಳಿ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಿ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿದರು.

ತಾಲೂಕಿನಲ್ಲಿ ನೂರಾರು ರೈತರು ತಮ್ಮ ಬೆವರನ್ನು ಸುರಿಸಿ ಭೂಮಿಯನ್ನು ಹಸನು ಮಾಡಿ ಹಲವಾರು ವರ್ಷಗಳಿಂದ ಸರಕಾರಿ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಫಾರ್ಮ ನಂ:57 ನ್ನು ತುಂಬಲು ಸರಕಾರವೇ ಹೇಳಿದ ಪ್ರಕಾರ ರೈತರೆಲ್ಲರೂ ಫಾರ್ಮನ್ನು ತುಂಬಿಕೊಟ್ಟು ಒಂಬತ್ತು ತಿಂಗಳು ಗತಿಸಿದರು ಸ್ಥಳಿಯ ತಾಲೂಕಾ ಆಡಳಿತ ಯಾವುದೇ ಕ್ರಮ ಜರುಗಿಸಿಲ್ಲ. ಕೂಡಲೇ ಭೂಮಂಜೂರಾತಿ ಸಮಿತಿ ರಚಿಸಿ ರೈತರ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ರೈತರಿಗೆ ಹಕ್ಕು ವಿತರಿಸಬೇಕೆಂದು ರೈತ ಮುಖಂಡರಾದ ವ್ಹಿ.ಪಿ. ಕುಲಕರ್ಣಿರವರು ಸರಕಾರಕ್ಕೆ ಒತ್ತಾಯಿಸಿದರು.

ಭೂಮಿಗಾಗಿ ನಮ್ಮ ಹೋರಾಟ ಪ್ರಾರಂಭವಾಗಿದೆ. ಹಕ್ಕು ಪತ್ರ ಸಿಗುವವರೆಗೆ ನಮ್ಮ ಹೋರಾಟ ಮುಂದವರೆಯುವದು. ಭೂಮಂಜೂರಾತಿ ಸಮಿತಿ ರಚನೆ ಆಗದೆ ಇದ್ದರ್ರೆ ಅನಿರ್ಧಿಷ್ಟ ಹೋರಾಟಕ್ಕೆ ಹೋಗಬೇಕಾಗುತ್ತದೆ ಎಂದು ಸರಕಾರಕ್ಕೆ ಎಚ್ಚರಿಕೆ ನೀಡಿದರು.

ದೇಶದಲ್ಲಿ ದೊಡ್ಡ ದೊಡ್ಡ ಬಂಡವಾಳಶಾಹಿಗಳಿಗೆ ಸಾವಿರಾರು ಎಕರೆ ಭೂಮಿ ನೀಡುತ್ತಿರುವ ಸರಕಾರಗಳು ತಮ್ಮ ಉಪಜೀವನಕ್ಕೆ 2–3 ಎಕರೆ ಸಾಗುವಳಿ ಮಾಡಿದ ಬಡ ರೈತರಿಗೆ ಹಕ್ಕು ಪತ್ರ ನೀಡಲು ಮುಂದಾಗುತ್ತಿಲ್ಲ ಎಂದು ಕಾರ್ಮಿಕ ಮುಖಂಡರಾದ ಜಿ.ಎಂ. ಜೈನೆಖಾನ್ ರವರು ಸರಕಾರ ನೀತಿಯನ್ನು ಖಂಡಿಸಿದರು.

ದಾದಾಸಾಬ ಪಾಗದ, ಲೋಕಣ್ಣ ಮುದೇನೂರ, ಹನಮಂತ ಕಾಮನ್ನವರ, ಸುಲೇಮಾನ್ ಪೈಲವಾನ್ ಸೇರಿದಂತೆ ನೂರಾರು ರೈತರು ಉಪಸ್ಥಿತರಿದ್ದರು. ಕಾರ್ಮಿಕ ಮುಖಂಡ ನಾಗಪ್ಪ ಸಂಗೊಳ್ಳಿ ಸ್ವಾಗತಿಸಿ, ವಂದಿಸಿದರು.





ವಿಜಯಪುರ: ಗ್ರಾಮ ಪಂಚಾಯತ್ ನೌಕರರ ಪ್ರತಿಭಟನೆ

ಇ.ಎಫ್.ಎಂ.ಎಸ್. ನಿಂದ ಹೊರಗುಳಿದ ಸಿಬ್ಬಂದಿಗಳ ಮಾಹಿತಿ ಅಳವಡಿಸಲು ಪಿಡಿಓ ರವರಿಗೆ ಸೂಕ್ತ ನಿರ್ದೇಶನ ನೀಡಬೇಕು. ಇದರಲ್ಲಿ ಸಾಕಷ್ಟು ಕಸಗೂಡಿಸುವವರಿದ್ದು, ದಲಿತ ವರ್ಗಕ್ಕೆ ಸೇರಿದವರಾಗಿದ್ದು, ಇದರಿಂದ ವೇತನಕ್ಕೆ ತೊಂದರೆಯಾಗಿರುತ್ತದೆ. ಶೀಘ್ರದಲ್ಲಿ ಇ,ಎಫ್. ಎಂ.ಎಸ್.ನಲ್ಲಿ ಮಾಹಿತಿ ಅಳವಡಿಸಬೇಕು. ಸಿಬ್ಬಂದಿಗಳ ಅನುಮೊದನೆ ನೀಡಲು 2 ವರ್ಷದ ಹಿಂದೆ ಕಡತ ಪರಿಶೀಲನೆ ಮಾಡಿದ್ದು ಅದು ಜಾರಿಗೆಯಾಗಿರುವುದಿಲ್ಲ. ಆದರೆ ಇಲ್ಲಿಯವರೆಗೆ ಆದೇಶದ ದಿನಾಂಕ 23-07-2019 ಪ್ರಕಾರ ಎಲ್ಲರಿಗೂ ಅನುಮೋದನೆ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘ ಸಿಐಟಿಯು ವತಿಯಿಂದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಗೋವಿಂದ ರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಮಧ್ಯಾಹ್ನ 12ಗಂಟೆಗೆ ಬೃಹತ್ ಮೆರವಣಿಗೆಯೊಂದಿಗೆ ವಿಶೇಷವಾಗಿ ಹಲಗಿ ಹಾಗೂ ಕಹಳೆ ಬಾರಿಸುವ ಮೂಲಕ ಜಿಲ್ಲಾ ಪಂಚಾಯತ ಚಲೋ ಪ್ರತಿಭಟನಾ ರ್‍ಯಾಲಿಯು ನಗರದ ಗಾಂಧಿವೃತ್ತ, ಬಸವೇಶ್ವರ ವೃತ್ತದ ಮೂಲಕ ಜಿಲ್ಲಾ ಪಂಚಾಯತ ಹೆಬ್ಬಾಲುಗೆ ತೆರಳಿ ಬೃಹತ್ ಸಭೆಯಾಗಿ ಮಾರ್ಪಟ್ಟಿತ್ತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ರಾಜ್ಯಾಧ್ಯಕ್ಷರಾದ ಕಾಂ. ಮಾರುತಿ ಮಾನ್ಪಡೆ ಮಾತನಾಡಿ, ಗ್ರಾಮ ಪಂಚಾಯತಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂಧಿಗಳಿಗೆ ಇ.ಎಫ್. ಎಂ.ಎಸ್. ಮೂಲಕ ವೇತನ ಪಾವತಿಸಲು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ. ಅದರಲ್ಲಿ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯಾಗಿದೆ. ಬಾಕಿ ಉಳಿದ ಸಿಬ್ಬಂಧಿಗಳ ಮಾಹಿತಿಯನ್ನು ಮತ್ತೊಮ್ಮೆ ಇ.ಎಫ್. ಎಂ.ಎಸ್.ನಲ್ಲಿ ಅಳವಡಿಸಲು ಸಂಘದ ಮೂಲಕ ಹೋರಾಟ ಮಾಡಿ ಅವಕಾಶ ಕಲ್ಪಿಸಲಾಗಿದೆ. ಆದರೆ ವಿಜಯಪುರ ಜಿಲ್ಲೆಯಲ್ಲಿ ಅದರಲ್ಲಿ ಮುಖ್ಯವಾಗಿ ಇಂಡಿ, ಸಿಂದಗಿ, ಮುದ್ದೇಬಿಹಾಳ, ಬಸವನಬಾಗೇವಾಡಿ, ವಿಜಯಪುರ, ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಕೆಲವು ದಾಖಲೆಗಳು ಪಂಚಾಯತನಲ್ಲಿ ಲಭ್ಯವಿರುವುದಿಲ್ಲವೆಂದು ದಾಖಲಾತಿ ನೇಪ ಒಡ್ಡಿ ಸಿಬ್ಬಂಧಿಗಳ ಮಾಹಿತಿಯನ್ನು ಲಾಗಿನ್‌ನಲ್ಲಿ ಅಳವಡಿಸದೇ, ಕೆಲವು ಸಿಬ್ಬಂದಿ ವೇತನ ಖಾತೆಗೆ ಹಣ ಜಮಾವಾಗಿ ಎರಡು ತಿಂಗಳಾದರೂ ಜಿಲ್ಲೆಯ ಕೆಲವು ಗ್ರಾಮ ಪಂಚಾಯತಗಳಲ್ಲಿ ವೇತನ ಪಾವತಿಸದೇ ಸಿಬ್ಬಂಧಿಗಳಿಗೆ ಸತಾಯಿಸುತ್ತಿದ್ದಾರೆ. ಮತ್ತು ಸಿಬ್ಬಂಧಿ ವೇತನ ಖಾತೆಗೆ ಹಣ ಜಮಾವಾಗಿ ಎರಡು ತಿಂಗಳಾದರೂ ಜಿಲ್ಲೆಯ ಕೆಲವು ಗ್ರಾಮ ಪಂಚಾಯತಗಳಲ್ಲಿ ವೇತನ ಪಾವತಿಸದೇ ಸಿಬ್ಬಂದಿಗಳಿಗೆ ಸತಾಯಿಸುತ್ತಿದ್ದಾರೆ. ಹಾಗೂ 14ನೇ ಹಣಕಾಸಿನಲ್ಲಿ 10% ಆಡಳಿತ ವೆಚ್ಚದಲ್ಲಿ ಸಿಬ್ಬಂಧಿ ವೇತನ ಪಾವತಿಸ ಮಾಡಲು ಆದೇಶವಿದ್ದರೂ ಇನ್ನೂವರೆಗೂ ಜಿಲ್ಲೆಯ ಪಿಡಿಒ ರವರು ವೇತನ ಪಾವತಿ ಮಾಡುತ್ತಿಲ್ಲ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾಂ. ಭೀಮಶಿ ಕಲಾದಗಿ ಮಾತನಾಡಿ, ಇ.ಎಫ್.ಎಂ.ಎಸ್. ನಿಂದ ಹೊರಗುಳಿದ ಸಿಬ್ಬಂದಿಗಳ ಮಾಹಿತಿ ಅಳವಡಿಸಲು ಪಿಡಿಓ ರವರಿಗೆ ಸೂಕ್ತ ನಿರ್ದೇಶನ ನೀಡಬೇಕು. ಇದರಲ್ಲಿ ಸಾಕಷ್ಟು ಕಸಗೂಡಿಸುವವರಿದ್ದು, ದಲಿತ ವರ್ಗಕ್ಕೆ ಸೇರಿದವರಾಗಿದ್ದು, ಇದರಿಂದ ವೇತನಕ್ಕೆ ತೊಂದರೆಯಾಗಿರುತ್ತದೆ. ಶೀಘ್ರದಲ್ಲಿ ಇ,ಎಫ್. ಎಂ.ಎಸ್.ನಲ್ಲಿ ಮಾಹಿತಿ ಅಳವಡಿಸಬೇಕು. ಸಿಬ್ಬಂದಿಗಳ ಅನುಮೊದನೆ ನೀಡಲು 2 ವರ್ಷದ ಹಿಂದೆ ಕಡತ ಪರಿಶೀಲನೆ ಮಾಡಿದ್ದು ಅದು ಜಾರಿಗೆಯಾಗಿರುವುದಿಲ್ಲ. ಆದರೆ ಇಲ್ಲಿಯವರೆಗೆ ಆದೇಶದ ದಿನಾಂಕ 23-07-2019 ಪ್ರಕಾರ ಎಲ್ಲರಿಗೂ ಅನುಮೋದನೆ ನೀಡಬೇಕು. ಪಂಪ ಆಪರೇಟರ್, ಸಿಪಾಯಿ, ಕಸಗುಡಿಸುವವರು ಹಾಗೂ ಇತರೆ ಸಿಬ್ಬಂದಿಗಳಿಂದ ಖಾಲಿ ಇದ್ದ ಬಿಲ್‌ಕಲೆಕ್ಟರ್ ಹುದ್ದೆ ಜೇಷ್ಠತೆ ಆಧಾರದ ಮೇಲೆ ಭರ್ತಿ ಮಾಡಬೇಕು. ಕಸವಸೂಲಿಯಲ್ಲಿ 40% ಹಾಗೂ 14ನೇ ಹಣಕಾಸಿನಲ್ಲಿ 10% ಹಣವನ್ನು ಸಿಬ್ಬಂದಿಗಳ ಬಾಕಿ ಉಳಿದಿರುವ ವೇತನ ನೀಡಲು ಕ್ರಮ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಕಾಂ. ಅಣ್ಣಾರಾಯ ಈಳಗೇರ ಮಾತನಾಡಿ, ಸರ್ಕಾರದ ಆದೇಶ ಹೊಸ ವೇತನ ಜಾರಿಯಾದರೂ ಇನ್ನು ಹಲವಾರು ಗ್ರಾ.ಪಂ. ಗಳಲ್ಲಿ ಕಡಿಮೆ ವೇತನ ನೀಡುತ್ತಿದ್ದಾರೆ, ಅದನ್ನು ತಕ್ಷಣ ಪರಿಗಣಿಸಬೇಕು. ಸಿಬ್ಬಂಧಿಗಳ ಸೇವಾ ಪುಸ್ತಕ ತೆರೆಯಬೇಕು. ಗ್ರೇಡ್ -1 ಕಾರ್ಯದರ್ಶಿಯಿಂದ ಪಿಡಿಒ ಆಗಿ ಬಡ್ತಿ, ಗ್ರೇಡ್-2 ಕಾರ್ಯದರ್ಶಿ ಗ್ರೇಡ್-1 ಕಾರ್ಯದರ್ಶಿಯಾಗಿ ಬಡ್ತಿ ಹಾಗೂ ಕರವಸೂಲಿಗಾರರಿಂದ ಗ್ರೇಡ್-2 ಕಾರ್ಯದರ್ಶಿ ಬಡ್ತಿ ಮಾಡುವುದು. ನಿವೃತ್ತಿ ಹೊಂದಿದ ಸಿಬ್ಬಂದಿಯವರಿಗೆ 15 ತಿಂಗಳ ನಿವೃತ್ತಿ ವೇತನ ಮತ್ತು ಬಾಕಿ ಉಳಿದ ವೇತನ ನೀಡಬೇಕು ಎಂದರು.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ರಾಜ್ಯ ಸಮಿತಿ ಸದಸ್ಯರಾದ ವಿಠ್ಠಲ ಹೊನಮೋರೆ ಮಾತನಾಡಿ, ಬಾಕಿ ಉಳಿದ ಬಿಲ್ ಕಲೆಕ್ಟರ್‌ನ್ನು ಬಡ್ತಿ ನೀಡಬೇಕು. ಇ.ಎಫ್.ಎಂ.ಎಸ್. ಮೂಲಕ ವೇತನ ಪಾವತಿಸುವಲ್ಲಿ ತೊಂದರೆಯಾಗುತ್ತಿದ್ದು, 3 ತಿಂಗಳಿಗೆ ಆಗುವ ಅನುದಾನ ಬರುತ್ತಿಲ್ಲ ಆದ್ದರಿಂದ ಸಿಬ್ಬಂದಿಗಳಿಗೆ ತಕ್ಕಂತೆ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡಬೇಕು. ಜಿಲ್ಲೆಯ ಕೆಲವು ಗ್ರಾ. ಪಂ.ಗಳಲ್ಲಿ ಅಕ್ರಮ ನೇಮಕಾತಿ ನಡೆಯುತ್ತಿದ್ದು, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದು. ಗ್ರಾ.ಪಂ.ಸಿಬ್ಬಂದಿಗಳಿಗೆ ವೇತನ ಶ್ರೇಣಿ ನಿಗಧಿಪಡಿಸುವಕಡತ ಹಣಕಾಸು ಇಲಾಖೆ ಮುಂದೆ ಇದ್ದು, ಸೂಕ್ತ ಕ್ರಮ ಕೈಗೊಳ್ಳುವುದು. ಬಿಲ್‌ಕಲೆಕ್ಟರ್ ಮತ್ತು ಡೇಟಾ ಎಂಟ್ರಿ ಆಪರೇಟರ್‌ಗಳಿಗೆ ಸಿ.ದರ್ಜೆ ವೇತನ ಶ್ರೇಣಿ, ಪಂಪ್ ಆಪರೇಟರ್, ಜವಾನ, ಕಸಗೂಡಿಸುವವರಿಗೆ ಡಿ.ದರ್ಜೆ ವೇತನ ಶ್ರೇಣಿ ನಿಗಧಿಪಡಿಸಿ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು. ಗ್ರಾ. ಪಂ. ಎಲ್ಲಾ ನೌಕರರಿಗೆ ಪೆನ್ಸನ್ ಹಾಗೂ ಗ್ರಾಚೂಯಿಟ್ ಕೊಡಬೇಕು. ಸಂಬಳಕ್ಕಾಗಿ 900 ಕೋಟಿ ಹಣ ಅವಶ್ಯಕತೆ ಇದ್ದು, 518 ಕೋಟಿ ಮಾತ್ರ ಹಿಂದಿನ ಸರ್ಕಾರ ಮಂಜೂರಿ ಮಾಡಿದ್ದು, ಸಂಬಳಕ್ಕಾಗಿ ಬೇಕಾಗಿರುವುದು 390 ಕೋಟಿ ರೂ. ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ರಾಜು ಜಾಧವ ಮಾತನಾಡಿದರು.

ಈ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘದ ಮುಖಂಡರಾದ ಸುರೇಖಾ ರಜಪೂತ, ಅಬ್ದುಲ ರಜಾಕ ತಮದಡ್ಡಿ, ಕುಮಾರ ರಾಠೋಡ, ಶೇಖು ಲಮಾಣಿ, ಶಿವಾನಂದ ನಾಲ್ಕಮಕ್ಕಳ, ಯಲ್ಲನಗೌಡ ಬಿರಾದಾರ, ಮಲ್ಲಿಕಾರ್ಜುನ ಮಾದರ, ತುಕಾರಾಮ ಮಾರನೂರ, ಎಂ.ಕೆ.ಚಳ್ಳಗಿ, ಎಂ.ಎಸ್. ಕೊಂಡಗೂಳಿ, ನಾಗಪ್ಪ ತೆಲಸಂಗ, ಬಾಳು ದಶವಂತ, ಲಲಿತಾ ಎಂಟಮಾನ, ಸೋಮಯ್ಯ ಸಂಬಳ, ಹಳ್ಳಪ್ಪ ಸಾಲೋಟಗಿ, ರಾಮಚಂದ್ರ ಕುಂಬಾರ, ಅಜೀಜ ಮುದ್ದೇಬಿಹಾಳ, ರಾಜು ಬನ್ನಟ್ಟಿ, ಅಯ್ಯನಗೌಡ ಬಿರಾದಾರ, ಭೀಮಾಬಾಯಿ ಬಾಣಿ, ಗಂಗಾಧರ ಪಾಟೀಲ, ಸುವರ್ಣ ಸಾವಳಸಂಗ, ಮೇಲವ್ವ ಹರಿಜನ, ಮಲ್ಲಪ್ಪ ಹೊಸಕೇರಿ, ಶಂಕರ ಶಿಂಥೆ, ಲಾಲಹಮ್ಮದ ಶೇಖ, ಮಲಕಾರಿ ನರಳೆ, ಸಂಜೀವ ರಾಠೋಡ, ಸೇರಿದಂತೆ ಸಾವಿರಕ್ಕೂ ಹೆಚ್ಚು ನೌಕರರು ಉಪಸ್ಥಿತರಿದ್ದರು.

– ವಿಠ್ಠಲ ಹೊನಮೋರೆ

ವಲಸೆ – ಉದ್ಯೋಗ ಖಾತ್ರಿ ವಿಚಾರ ಸಂಕಿರಣ...... ಪುಟ 3 ರಿಂದ

ಭಾರತದಿಂದ ಕೃಷಿಕೂಲಿಕಾರ್ಮಿಕ ಭಾರತವಾಗಿ ಬಿಟ್ಟಿದೆ. ಇದರಿಂದಾಗಿ ವಲಸೆಯು ಅಗಾಧವಾಗಿ ಹೆಚ್ಚುತ್ತಿದೆ. ವಲಸೆಯಿಂದಾಗಿ ಕುಟುಂಬಗಳು ಹೆಚ್ಚು ಸಂಕಟಕ್ಕೆ ಒಳಗಾಗುತ್ತಿವೆ. ಆದ್ದರಿಂದ ವಲಸೆ ಕಾರ್ಮಿಕರ ಕಾಯ್ದೆಯನ್ನು ಪರಿಷ್ಕರಿಸಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ವಲಸೆ ತಡೆಗಟ್ಟುವವರೆಗೂ ಕೂಲಿಕಾರರಿಗಾಗಿ ರೈಲು ಕಲಬುರಗಿಯಿಂದ ಬೆಂಗಳೂರುವರೆಗೂ ರೈಲು ಆಗಬೇಕು. ಅತ್ಯಂತ ಕಡಿಮೆ ದರದಲ್ಲಿ ಟಿಕೇಟು ಸಿಗುವಂತಾಗಬೇಕು' ಎಂದು ಆಗ್ರಹಿಸಿದರು.

ಕೃಷಿ ಕೂಲಿಕಾರ್ಮಿಕರಾದ ಮಲ್ಲಮ್ಮ ಕೋಡ್ಲಿ, ಲವಕುಶ ಪಾಳಾ, ಚಂದಪ್ಪ ಪೂಜಾರಿ, ಸಪ್ನಾ ಭೂಪಾಲ ತೆಗನೂರು, ಇವರು ಕೃಷಿ ಕೂಲಿಕಾರ್ಮಿಕರ ಹಕ್ಕೊತ್ತಾಯ ಪಟ್ಟಿ ಬಿಡುಗಡೆ ಮಾಡಿದರು.

ಹಕ್ಕೊತ್ತಾಯಗಳು.

1. ವಲಸೆ ಕಾರ್ಮಿರ ಕಾಯ್ದೆಯನ್ನು ಪರಿಷ್ಕರಿಸಿ ಕಟ್ಟುನಿಟ್ಟಾಗಿ ಜಾರಿ ಮಾಡಬೇಕು.
2. ವಲಸೆ ಸಂಪೂರ್ಣ ತಡೆಯುವವರೆಗೂ ಕೂಲಿಕಾರರಿಗೆ ರೈಲು ಆರಂಭಿಸಬೇಕು.
3. ವಲಸೆ ಹೋದ ಪಟ್ಟಣಗಳಲ್ಲಿ ವಾಸಕ್ಕೆ ಮನೆ, ಕೆಲಸದ ಭದ್ರತೆ ಇತ್ಯಾದಿ ಸೌಲಭ್ಯ ಬೇಕು
4. ಮನರೇಗಾದಡಿ 250 ದಿನಗಳ ಕೆಲಸ ಮತ್ತು ರೂ.600 ಕೂಲಿ ದಿನಕ್ಕೆ ಹೆಚ್ಚಿಸಬೇಕು
5. ದಲಿತರಿಗೆ, ಒಂಟಿ ಮಹಿಳೆಯರಿಗೆ, ಅಂಗವಿಕಲರಿಗೆ, ಮತ್ತು ದೇವದಾಸಿಯರಿಗೆ, ವೃದ್ಧರಿಗೆ ಕೇಳಿದಷ್ಟು ದಿನಗಳ ಕೆಲಸ ಒದಗಿಸಬೇಕು
6. ವಲಸೆ ಹೋದ ಕುಟುಂಬಗಳ ವೃದ್ಧರು ಮತ್ತು ಮಕ್ಕಳನ್ನು ನೋಡಿಕೊಳ್ಳಲು ಗ್ರಾಮ ಪಂಚಾಯತ ಮೂಲಕ ಯೋಜನೆಯೊಂದನ್ನು ಜಾರಿಗೊಳಿಸಬೇಕು.

ನಂದಾದೇವಿ ಮಂಗೊಂಡಿ ಮತ್ತು ಜಯಶ್ರೀ ಬೆಣ್ಣೂರ ಇವರು ವಲಸೆ ಕೂಲಿ ಕಾರ್ಮಿಕರ ಸಂಕಟಗಳ ಬಗ್ಗೆ ಮಾತನಾಡಿದರು.

ಭೀಮಶೆಟ್ಟಿ ಯಂಪಳ್ಳಿ ಸ್ವಾಗತಿಸಿದರು. ಮೇಘರಾಜ ಕಠಾರೆ ಇವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶ್ರೀಮಂತ ಬಿರಾದಾರ ವಂದಿಸಿದರು. ಪವಿತ್ರಾ ವಸ್ತ್ರದ ವಿಚಾರ ಸಂಕಿರಣದ ನಿರ್ವಹಣೆ ಮಾಡಿದರು. ಗೆಲುವು ನಮ್ಮದು ಹಾಡಿನೊಂದಿಗೆ ವಿಚಾರ ಸಂಕಿರಣ ಮುಕ್ತಾಯಗೊಂಡಿತು.

ಅಂಗನವಾಡಿ ನೌಕರರಿಂದ ಮನವಿ ಸಲ್ಲಿಕೆ..... ಪುಟ 5 ರಿಂದ

ಕೆ.ಜಿ ಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಶಿಕ್ಷಣ ಇಲಾಖೆ ತಂದಿರುವ ಈ ಸುತ್ತೋಲೆ ಐಸಿಡಿಎಸ್ ಯೋಜನೆಯ ಮತ್ತೊಂದು ತದ್ರೂಪಿ (ಡ್ಯೂಪ್ಲಿಕೇಟ್) ಕಾರ್ಯಕ್ರಮವೇ ಹೊರತು ಬೇರೇನಲ್ಲ ಏಕೆಂದರೆ ಇದರ ಪ್ರಾಸ್ತಾಪಿತ ಕಲಿಕೆಯ ಸ್ವರೂಪವೂ ಈಗಗಲೇ ಅಂಗನವಾಡಿ ಕೇಂದ್ರಗಳಲ್ಲಿ ಕೊಡಲಾಗುತ್ತಿದೆ. ಈಗಾಗಲೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 4200 ಕೋಟಿ ರೂಗಳನ್ನು ಪೂರಕ ಪೌಷ್ಠಿಕ ಆಹಾರ, ಪೂರ್ವಪ್ರಾರ್ಥಮಿಕ ಶಿಕ್ಷಣವನ್ನೊಳಗೊಂಡಂತೆ ಖರ್ಚು ಮಾಡಲಾಗುತ್ತಿದೆ. ಆದರೆ ಸರ್ಕಾರ ಈ ಹಣವನ್ನು ಸದ್ಬಳಿಕೆ ಮಾಡುವ ಬದಲಿಗೆ ಶಿಕ್ಷಣ ಇಲಾಖೆಯ ಮುಖಾಂತರ ಒಂದೇ ಮಗುವಿಗೆ ಡಬಲ್ ಹಣವನ್ನು ಖರ್ಚುಮಾಡಲು ಹೊರಟಿರುವುದು ನ್ಯಾಯವೇ? ಆದ್ದರಿಂದ ನಮ್ಮ ಸಂಘಟನೆ ಕೆಳಕಂಡ ಬೇಡಿಕೆಗಳನ್ನಿಟ್ಟು ಈಗಾಗಲೇ ಹಲವು ಭಾರಿ ಸಂಬಂಧಿಸಿದವರೊಡನೆ ಚರ್ಚೆಗಳನ್ನು ಮಾಡಿ. ಮನವಿಗಳನ್ನು ಕೊಟ್ಟಿದೆ. ಆದರೆ ಅಧಿಕಾರಸ್ಥರ ಉದಾಸೀನತೆ. ಮುಂದುವರೆದಿರುವುದನ್ನು ಖಂಡಿಸಿ ಅನಿವಾರ್ಯವಾಗಿ ನಮ್ಮ ಸಂಘಟನೆ ಈ ಅನಿರ್ಧಿಷ್ಟವಾಧಿಯ ಹೋರಾಟದ ತೀರ್ಮಾನಕ್ಕೆ ಬಂದಿದೆ. ರಾಜ್ಯದಲ್ಲಿ ಸಾರ್ವಜನಿಕ, ಪೋಷಕರ ಸಹಿಸಂಗ್ರಹ ಮಾಡಿಸಲಾಗಿದೆ ಮತ್ತು 30 ಜಿಲ್ಲೆಗಳನ್ನೊಳಗೊಂಡ 6 ಜಾಥಗಳನ್ನು ನಡೆಸಲಾಗಿದೆ. ನಮ್ಮ ಸಂಘಟನೆ ಮುಂದಿಟ್ಟಿರುವ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ಪ್ರಾಂಥ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ, ಸಿಐಟಿಯು ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರ ಮಾತನಾಡಿ, ಸಂಘಟನೆಯನ್ನುದ್ದೇಶಿಸಿ ಮುಂದಿನ ದಿನಗಳಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದಿನಾಂಕ: 10-12-2019 ರಂದು ತುಮಕೂರಿನಿಂದ ಬೆಂಗಳೂರುವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಕೂಡಲೆ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು. ಸುರೇಖಾ ರಜಪೂತ ಮಾತನಾಡಿದರು.

ವರದಿ: ಭಾರತೀ ಸಿ. ವಾಲಿ

ಜನವಾದಿ ಮಹಿಳಾ ಮುಖಂಡರ ಬಂಧನ – ಖಂಡನೆ



ಹಿಂಸೆ ಮುಕ್ತ ಭಾರತಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ತಮಿಳ್ನಾಡು ಮುಖಂಡರು ಮತ್ತು ಮಹಿಳೆಯರನ್ನ ಚೆನ್ನೈನಲ್ಲಿ ಬಂದನ ಮಾಡಿರುವುದನ್ನು ಖಂಡಿಸಿ.

ಹಿಂಸೆ ಮುಕ್ತ ಭಾರತ ಎಂಬ ಘೋಷಣೆ ಅಡಿಯಲ್ಲಿ ತಮಿಳುನಾಡಿನ ಜನವಾದಿ ಮಹಿಳಾ ಸಂಘಟನೆಯ ಮುಖಂಡರು ಹಾಗು ಕಾರ್ಯಕರ್ತರು 400 ಕಿಮೀ ಪಾದಯಾತ್ರೆ ಮಾಡುವುದನ್ನು ತಡೆದು ಅವರನ್ನು ಬಂಧಿಸಿರುವ ತಮಿಳು ನಾಡು ಸರ್ಕಾರ ಹಾಗು ಪೋಲಿಸ್ ವರ್ತನೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ.

ದೇಶದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲಿನ ಅತ್ಯಾಚಾರ, ದೌರ್ಜನ್ಯ ಹಿಂಸೆಗಳು ಜಾಸ್ತಿ ಯಾಗುತ್ತಿರುವುದರ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ವಿಶ್ವಸಂಸ್ಥೆಯು ಕರೆ ನೀಡಿರುವ 'ನವಂಬರ್ 25 ಮಹಿಳೆಯರ ಮೇಲಿನ ಹಿಂಸಾ ನಿರ್ಮೂಲನಾ ದಿನ' ದಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ತಮಿಳು ನಾಡು ರಾಜ್ಯ ಸಮಿತಿ ಹಿಂಸೆ ಮುಕ್ತ ಭಾರತಕ್ಕಾಗಿ ಹೆಸರಿನಲ್ಲಿ ಪಾದಯಾತ್ರೆ ಯನ್ನು ಆಯೋಜಿಸಿತ್ತು.



ಜನರಲ್ಲಿ ಮಹಿಳೆಯರ ಮೇಲೆ ನಡೆಯುವ ಹಿಂಸೆಯ ವಿರುದ್ದ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ 400 ಕಿಲೋಮೀಟರ್ ಮಹಿಳೆಯರು ಪಾದಯಾತ್ರೆ ಯನ್ನು ಮಾಡಿ ಚೆನ್ನೈ ತಲುಪಿದ ಐತಿಹಾಸಿಕ ಸಂದರ್ಭದಲ್ಲಿ ಅವರ ಮೇಲೆ ಪೋಲೀಸ್ ದೌರ್ಜನ್ಯ ನಡೆಸಲಾಗಿದೆ.

ತಿರುವಣ್ಣಾಮಲೈ ನಿಂದ ಒಂದು ಪಾದ ಯಾತ್ರೆ ಹಾಗು ಕಡಲೂರಿನಿಂದ ಇನ್ನೊಂದು ಕಳೆದ 9 ದಿನಗಳಿಂದ ಜಿಲ್ಲೆಗಳಲ್ಲಿ ಸಂಚಾರ ಮಾಡುತ್ತಾ ದಾರಿಯುದ್ದಕ್ಕೂ ಸಭೆ ಮಾಡಿದಾಗ ಜನರಿಂದ ಮಹಿಳೆಯರಿಂದ ಅಭೂತಪೂರ್ವ ಸ್ವಾಗತ, ಬೆಂಬಲ ವ್ಯಕ್ತವಾಗಿದೆ.

ಯಶಸ್ವಿಯಾದ 9 ದಿನದ ಪಾದಯಾತ್ರೆ ನಿನ್ನೆಗೆ ಕೊನೆಗೊಂಡಿದೆ. ರಾಜ್ಯದ ಮಹಿಳೆಯರ ಸಮಸ್ಯೆಗಳ ಮನವಿಯನ್ನು ಸಲ್ಲಿಸಲು ಮುಖ್ಯ ಮಂತ್ರಿಯವರ ಬೇಟಿ ಮಾಡಲು ಮುಂದಾದಾಗ 300 ಮಹಿಳೆಯರನ್ನು ತಮಿಳು ನಾಡು ಸರ್ಕಾರ ಬಂಧಿಸಿ ಪೋಲಿಸ್ ಠಾಣೆಯಲ್ಲಿಟ್ಟಿರುವುದನ್ನು ನಮ್ಮ ಸಂಘಟನೆ ತೀವ್ರವಾಗಿ ಖಂಡನೆ ಮಾಡುತ್ತದೆ.

ಸುತ್ತಲೂ ಹಿಂಸೆಯೇ ತಾಂಡವವಾಡುತ್ತಿರುವಾಗ ಅದರ ವಿರುದ್ಧ ಕಾರ್ಯಾಚರಣೆ ಯಲ್ಲಿ ಸರಕಾರಗಳು ವಿಫಲವಾಗಿವೆ. ಅಂತಹ ಸಂದರ್ಭದಲ್ಲಿ ಜನರಲ್ಲಿ ಜಾಗೃತಿ ಮೂಡಿಸಿ ಪಾದಯಾತ್ರೆ ಯಲ್ಲಿ ಬಂದ ಮಹಿಳೆಯರನ್ನು ತಮಿಳುನಾಡಿನ ಸರಕಾರ ಸ್ವಾಗತಿಸಿದ ಬಗೆ ನಾಚಿಕೆಗೇಡು. ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸುತ್ತದೆ. ಬಂಧಿಸಿದವರನ್ನು ಬೇಷರತ್ತಾಗಿ ಬಿಡುಗಡೆ ಮಾಡಲು ಆಗ್ರಹಿಸುತ್ತೇವೆ. ಈ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಚುರ ಪಡಿಸಬೇಕಾಗಿ ವಿನಂತಿ.

ಗೌರಮ್ಮ, ಪ್ರಧಾನ ಕಾರ್ಯದರ್ಶಿ

ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಅತ್ಯಾಚಾರಗಳ ಖಂಡನೆ

ದೇಶದಲ್ಲಿ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳಿಂದ ನಾಗರೀಕ ಸಮಾಜವು ತಲೆ ತಗ್ಗಿಸುವಂತಾಗಿದೆ. ದೆಹಲಿಯ ನಿರ್ಭಯ ಪ್ರಕರಣವು ಇನ್ನೂ ಮನಃಪಟಲದಿಂದ ಮಾಸಿಲ್ಲ. ಇದೇ ಹೊತ್ತಿನಲ್ಲಿ ದೇಶದಗಲಕ್ಕೂ ಮಹಿಳೆಯರ ಮೇಲೆ, ಯುತಿಯರ ಮೇಲೆ,ಹಸುಗೂಸುಗಳ ಮೇಲೆ ಅತ್ಯಾಚಾರ ಕೊಲೆಗಳು ನಡೆಯುತ್ತಿದ್ದು ಈಗ ಆಂದ್ರ ಪ್ರದೇಶದ ಪಶು ವೈದ್ಯೆಯ ಮೇಲೆ ನಾಲ್ವರು ದುಷ್ಟ ಯುವಕರು ಅತ್ಯಾಚಾರ ಎಸಗಿ ಬಾರ್ಬರಿಕವಾಗಿ ಸುಟ್ಟು ಕೊಲೆ ಮಾಡಿರುವ ಪ್ರಕರಣವು ಬೆಚ್ಚಿ ಬೀಳಿಸುವಂತಾಗಿದೆ. ಲಾರಿ ಚಾಲಕರುಗಳಾದ ನವೀನ ಪಾಶಾ ಕೇಶವಲು ಮತ್ತು ಶಿವ ಎಂಬ ಈ ದುಷ್ಕರ್ಮಿಗಳು ಯುವತಿಯನ್ನು ಅತ್ಯಾಚಾರಗೈದು ಕೊಲೆ ಮಾಡಿದವರು. ಅತ್ಯಾಚಾರಿಗಳನ್ನು ಶಿಕ್ಷಿಸುವಲ್ಲಿನ ಮಂದಗತಿಯ ಕ್ರಮ ಮತ್ತು ಅತ್ಯಂತ ಕಡಿಮೆ ಪ್ರಮಾಣದ ಶಿಕ್ಷೆಯು ಇಂತಹ ಬೆಳವಣಿಗೆಗಳಿಗೆ ಕುಮ್ಮಕ್ಕು ಕೊಡುವಂತಹದ್ದಾಗಿದೆ.

ವರ್ಮಾ ಸಮಿತಿಯ ಶಿಫಾರಸ್ಸುಗಳನ್ನು ಗಾಳಿಗೆ ತೂರಲಾಗಿದೆ. ಇಡೀ ಸಮಾಜವನ್ನೇ ಅಪರಾಧದತ್ತ ವಾಲುವಂತೆ ಮಾಡುವಲ್ಲಿ ರಾಜಕೀಯ ಅಪರಾಧೀಕರಣ ಸಹ ಒಂದು ಕಾರಣವಾಗಿದೆ. ಚಿನ್ಮಯಾನಂದನಂತಹ ಅತ್ಯಾಚಾರದ ಆರೋಪಿಯನ್ನು ಬಂಧಿಸುವ ಬದಲು ದೂರುದಾರಳನ್ನೇ ತಪ್ಪಿತಸ್ಥಳಂತೆ ಬಿಂಬಿಸಿ ಬಂಧಿಸಲಾಗಿದೆ. ಆ ಯುವತಿಗೆ ಪರೀಕ್ಷೆ ಬರೆಯಲೂ ಆಸ್ಪದ ಕೊಡದ ಸ್ಥಿತಿ ನಿರ್ಮಾಣವಾಗಿದೆ. ಅಪರಾಧಿಗಳು ತಮಗಿರುವ ಅಧಿಕಾರದ ದುರ್ಬಳಕೆ ಮಾಡಿಕೊಳ್ಳುವಂತ ವಾತಾವರಣ ದೇಶದಲ್ಲಿ ಇದೆ. ಇಡೀ ಸಮಾಜವೇ ಕ್ರಿಮಿನಲ್ ಮನಃಸ್ಥಿತಿಗೆ ಹೊರಳುತ್ತಿದ್ದು ಅದಕ್ಕೆ ಮಹಿಳೆಯರು, ಮಕ್ಕಳು ಮತ್ತು ದಲಿತ ಸಮುದಾಯ ಬಲಿ ಆಗುತ್ತಿರುವುದು ಕಾಣುತ್ತಿದ್ದೇವೆ. ಉತ್ತರ ಪ್ರದೇಶದ ಬಿಜೆಪಿ ಶಾಸಕ ಕುಲದೀಪ್ ಸಿಂಗ್ ಸೇಂಗರ್ ಆರೋಪಿಯಾಗಿರುವ ಉನ್ನಾವೋ ಅತ್ಯಾಚಾರದ ಪ್ರಕರಣದ ಸಂತ್ರಸ್ತೆಯನ್ನು ಕೊಲೆ ಮಾಡುವ ಪ್ರಯತ್ನ ನಡೆದಿರುವುದನ್ನು ನಾವು ಮರೆಯಲು ಸಾಧ್ಯವಿಲ್ಲ. ಜನವಾದಿ ಮಹಿಳಾ ಸಂಘಟನೆ ಈ ಎಲ್ಲ ಘಟನೆಗಳನ್ನು ತೀವ್ರವಾಗಿ ಖಂಡಿಸುತ್ತದೆ.

ಪಶುವೈದ್ಯೆಯ ಮೇಲೆ ಅತ್ಯಾಚಾರ ಎಸಗಿ ಸುಟ್ಟು ಹಾಕಿದ ಕೊಲೆಗಡುಕರನ್ನು ಫಾಸ್ಟ್ ಟ್ರ್ಯಾಕ್ ಕೋರ್ಟು ಮೂಲಕ ಪ್ರಕರಣವನ್ನು ಕೈಗೆತ್ತಿಕೊಂಡು ತ್ವರಿತ ಮತ್ತು ತೀವ್ರ ಶಿಕ್ಷೆ ನೀಡಬೇಕೆಂದು ಆಗ್ರಹಿಸುತ್ತೇವೆ. ಮತ್ತು ಇಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇವೆ.

ಈ ಪ್ರಕರಣವನ್ನು ಕೀಳು ಮನೋಭಾವದ ಧರ್ಮದ ಬಣ್ಣ ಬಳಿದು ಮೂರಲ್ಲಿ ಒಬ್ಬನಾದ ಪಾಶಾ ಎಂಬ ಯುವಕ ಮಾತ್ರ ಅತ್ಯಾಚಾರ ಮಾಡಿದ್ದು ಎಂದು ಸಾಮಾಜಿಕ ಜಾಲ ತಾಣದಲ್ಲಿ ಬರೆದ ಮೋದಿ ಯುವ ಬ್ರಿಗ್ರೇಡ್‌ನ ಚಕ್ರವರ್ತಿ ಸೂಲಿಬೆಲೆಯ ಮನಸ್ಥಿತಿಯು ಅತ್ಯಂತ ಹೇಯದ್ದಾಗಿದೆ. ಇನ್ನುಳಿದ ಮೂವರು

ಹಿಂದೂ ಹೆಸರುಳ್ಳವರೆಂಬ ಕಾರಣಕ್ಕೆ ಅವರು ಮಾಡಿದ ಅತ್ಯಾಚಾರ ಕೊಲೆಯನ್ನು ಮುಚ್ಚಿಡುವುದೆಂದರೆ ಕೊಲೆ ಮತ್ತು ಅತ್ಯಾಚಾರಕ್ಕೆ ಪ್ರೇರಕವಾದ ನಿಲುವೇ ಆಗಿದೆ ಎಂದು ನಾವು ಅಭಿಪ್ರಾಯ ಪಡುತ್ತೇವೆ. ಸಮಾಜವನ್ನು ಒಡೆಯಲು ಇಂತಹ ತಪ್ಪು ಸಂದೇಶ ದಾಖಲಿಸುವುದು ಅತ್ಯಾಚಾರ ಕೊಲೆಗೆ ಸಮಾನವಾದದ್ದು. ಮತ್ತು ಸಮಾಜವನ್ನು ಕೋಮು ನೆಲೆಯಲ್ಲಿ ಒಡೆಯಲು ಪಶುವೈದ್ಯೆಯ ಮೇಲಿನ ಅತ್ಯಾಚಾರ ಕೊಲೆ ಪ್ರಕರಣ ಬಳಸಿಕೊಂಡಿರುವುದು ಅಕ್ಷಮ್ಯವಾದದ್ದು. ಆದ್ದರಿಂದ ಚಕ್ರವರ್ತಿ ಸೂಲಿಬೆಲೆ ಎಂಬ ವ್ಯಕ್ತಿಯನ್ನು ಸಹ ಬಂಧಿಸಿ ಅತ್ಯಾಚಾರ ಮತ್ತ ಕೊಲೆಗೆ ಪ್ರಚೋದನೆ ನೀಡುವವರೆಂದು ಪರಿಗಣಿಸಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತೇವೆ.

ದೇವಿ
ಅಧ್ಯಕ್ಷರು



ಹೈದರಾಬಾದ್ ನಲ್ಲಿ ಪಶುವೈದ್ಯೆ ಮೇಲೆ ನಡೆದ ಅತ್ಯಾಚಾರ, ಕೊಲೆ ಪ್ರಕರಣ ಹಾಗೂ ತಮೀಳುನಾಡಿನ ಚೆನ್ನೈನಲ್ಲಿ ಹಿಂಸೆಮುಕ್ತ ಭಾರತಕ್ಕಾಗಿ ಜನವಾದಿ ಮಹಿಳಾ ಸಂಘಟನೆ ನಡೆಸುತ್ತಿದ್ದ ಪಾದಯಾತ್ರೆ ತಡೆದು ಸಂಘಟನೆಯ ಮುಖಂಡರು ಮತ್ತು 300 ಕಾರ್ಯಕರ್ತೆಯರನ್ನು ಪೋಲೀಸರು ಬಂಧಿಸಿರುವುದನ್ನು ಖಂಡಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಹಗರಿಬೊಮ್ಮನಹಳ್ಳಿ ತಾಲೂಕು ಸಮಿತಿಯ ನಿಯೋಗವು ಮಾನ್ಯ ತಹಶೀಲ್ದಾರರು ಹಗರಿಬೊಮ್ಮನಹಳ್ಳಿ ಮೂಲಕ ಮಾನ್ಯ ಪ್ರಧಾನಮಂತ್ರಿಗೆ ಮನವಿ ಸಲ್ಲಾಲಿಸಲಾಯಿತು. ಗ್ರೇಡ್–2 ತಹಶೀಲ್ದಾರ್ ಶ್ರೀ ಮಂಜುನಾಥರವರು ಮನವಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಜನವಾದಿಯ ಜಿಲ್ಲಾ ಕಾರ್ಯದರ್ಶಿ ಜಿ.ಸರೋಜ, ಮುಖಂಡರಾದ ಎಸ್.ಹುಲಿಗೆಮ್ಮ, ಬಿ.ರೇಣುಕ, ಪಾಯಲ್ ಬಾನು, ಶಮೀಮ್ ಬಾನು, ಮಮತಾಜ್ ಬೇಗಂ, ನಸ್ರೀನ್ ಬಾನು ಇದ್ದರು.
ಜಿ.ಸರೋಜ, ಜಿಲ್ಲಾ ಕಾರ್ಯದರ್ಶಿ, ಜೆ.ಎಂ.ಎಸ್.



ಮಹಿಳೆಯರ ಮೇಲೆ ದೌರ್ಜನ್ಯಗಳನ್ನು ತಡೆಯುವುದು ಹೇಗೆ?

ಪ್ರಕಾಶ ಕಾರಟ್

ಹೈದರಾಬಾದ್ ಅಪರಾಧದಂತಹ ಬೀಭತ್ಸ ಪ್ರಕರಣದಲ್ಲಿ ಸಾರ್ವಜನಿಕ ಆಕ್ರೋಶ ಮತ್ತು ಅಸಹನೆ ಕಟ್ಟೊಡೆದು ಬರುವುದು ಸ್ವಾಭಾವಿಕ ಮತ್ತು ಸಕಾರಣವೇ ಆಗಿದೆ. ಆದರೆ ಮಹಿಳೆಯರ ಮೇಲೆ ಇಂಥ ಭೀಕರ ಅಪರಾಧಗಳು ಜರುಗದಂತೆ, ಹಾಗೂ ಮಹಿಳೆಯರು ಮತ್ತು ಮಕ್ಕಳ ಸುರಕ್ಷಿತತೆ ಖಾತ್ರಿಗೊಳಿಸಲು ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಬೇಕಾಗಿದೆ. ಮಹಿಳೆಯರ ವಿರುದ್ಧ ಲೈಂಗಿಕ ಹಿಂಸಾಚಾರದ ವಿರುದ್ಧ ಹೋರಾಟಗಳನ್ನು ಈ ರೀತಿ ಬಹು ಆಯಾಮಗಳಲ್ಲಿ ನಡೆಸಬೇಕಾಗಿದೆ. ಪುರುಷಪ್ರಾಧಾನ್ಯ ಮತ್ತು ಸ್ರೀದ್ವೇಷದ ವಿರುದ್ಧ, ಮಹಿಳೆಯರನ್ನು ಸರಕಾಗಿ ಬಿಂಬಿಸುವುದರ ವಿರುದ್ಧ ಹೋರಾಟಗಳು, ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಹಕ್ಕು ಮತ್ತು ಚಟುವಟಿಕೆಗಳನ್ನು ವಿಸ್ತರಿಸುವ ಸತತ ಹೋರಾಟಗಳನ್ನು ನಡೆಸಬೇಕಾಗಿದೆ. ತಕ್ಷಣದ ಕಾರ್ಯಭಾರ ವಂತೂ ಮಹಿಳೆಯರ ವಿರುದ್ಧ ಎಲ್ಲಾ ಅಪರಾಧದ ಪ್ರಕರಣಗಳಲ್ಲಿ ತ್ವರಿತ ವಿಚಾರಣೆ ಮತ್ತು ಶಿಕ್ಷೆಯನ್ನು ಖಾತ್ರಿಪಡಿಸುವುದು ಆಗಿದೆ.

ಹೈದರಾಬಾದಿನ ಹೊರವಲಯದಲ್ಲಿ ಪಶುವೈದ್ಯೆಯಾಗಿರುವ 27 ವರ್ಷದ ಮಹಿಳೆಯ ಗ್ಯಾಂಗ್ ರೇಪ್ ಮತ್ತು ಕೊಲೆ, ನಮ್ಮ ದೇಶದಲ್ಲಿ ಮಹಿಳೆಯರು ಪ್ರತಿದಿನ ಎದುರಿಸುತ್ತಿರುವ ಹಿಂಸಾಚಾರವದ ಭೀಕರತೆಯನ್ನು ಮತ್ತೆ ಚಿತ್ರಿಸಿದೆ. ಈ ಅಪರಾಧದಲ್ಲಿ ಕಂಡು ಬಂದ ಮೃಗೀಯತೆ ಮತ್ತು ಕ್ರೌರ್ಯದ ವಿರುದ್ಧ ದೇಶದಾದ್ಯಂತ ತೀವ್ರ ಆಕ್ರೋಶ ಮತ್ತು ಪ್ರತಿಭಟನೆ ಕಟ್ಟೊಡೆದು ಬಂದಿದೆ.

ಹೈದರಾಬಾದ್ ಪ್ರಕರಣದ ನಂತರ ಮತ್ತು ಮೊದಲು ,’ಗಳ ಪ್ರಕರಣಗಳ ವರದಿಗಳಿಂದ, ಇದೊಂದು ಪ್ರತ್ಯೇಕ ಪ್ರಕರಣವಲ್ಲ ಎಂಬುದು ಸ್ಪಷ್ಟವಾಗಿದೆ. ರಾಂಚಿಯಲ್ಲಿ ತನ್ನ ಸ್ನೇಹಿತೆಯೊಂದಿಗಿದ್ದ ಕಾಲೇಜು ವಿದ್ಯಾರ್ಥಿನಿಯನ್ನು ಅಪಹರಿಸಿ ಗ್ಯಾಂಗ್ ರೇಪ್ ಮಾಡಲಾಗಿದೆ. ರಾಜಸ್ಥಾನದ ಟೊಂಕ್‌ನಲ್ಲಿ ಶಾಲೆಯಿಂದ ಮರಳುತ್ತಿದ್ದ 6 ವರ್ಷದ ಬಾಲಕಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯವೆಸಗಿ, ಅವಳ ಶಾಲಾ ಯುನಿಫೋರ್ಮಿನ ಬೆಲ್ಟ್‌ನಿಂದ ಕತ್ತು ಹಿಸುಕಿ ಕೊಲೆ ಮಾಡಲಾಗಿದೆ. ಇವು ಹೈದರಾಬಾದ್ ಪ್ರಕರಣದ ಮೊದಲ ಘಟಿಸಿದರೆ, ಅದರ ಮರುದಿನ ಕೊಯಂಬತ್ತೂರಿನಲ್ಲಿ 11ನೇ ತರಗತಿಯ ವಿದ್ಯಾರ್ಥಿನಿಯನ್ನು ಅಪಹರಿಸಿ ಗ್ಯಾಂಗ್ ರೇಪ್‌ಗೆ ಗುರಿ ಮಾಡಲಾಗಿದೆ. ದೇಶದಾದ್ಯಂತ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ಇಂತಹ ಭೀಕರ ದಾಳಿಗಳು ವ್ಯಾಪಕವಾಗಿ ನಡೆಯುತ್ತಿವೆ.

ಹೈದರಾಬಾದ್ ಪ್ರಕರಣವು ಡಿಸಂಬರ್ 2012ರ ದೆಹಲಿಯ ದಂಗು ಬಡಿಸಿದ ನಿರ್ಭಯಾ ಪ್ರಕರಣವನ್ನು ನೆನಪಿಸುವಂತಿದೆ. ಏಳು ವರ್ಷಗಳ ನಂತರವೂ ಮಹಿಳೆಯರ ಸುರಕ್ಷಿತತೆಯ ಅಭಾವದ ಭಯಾನಕ ಸ್ಥಿತಿ ಕಿಂಚಿತ್ತೂ ಉತ್ತಮಗೊಂಡಂತಿಲ್ಲ.

ಹೈದರಾಬಾದ್ ಅಪರಾಧ ಎಬ್ಬಿಸಿರುವ ಆಕ್ರೋಶ ಮತ್ತು ಸಿಟ್ಟಿನಲ್ಲಿ, ಪಾರ್ಲಿಮೆಂಟಿನಲ್ಲಿ ಮತ್ತು ಹೊರಗೂ ಅತ್ಯಾಚಾರದ ಅಪರಾಧಿಗಳಿಗೆ ಇನ್ನೂ ಸಾರ್ವಜನಿಕ ನೇಣು, ನಿರ್ಬೀಜೀಕರಣ ಮುಂತಾದ ಇನ್ನೂ ಹೆಚ್ಚಿನ ಕಠಿಣ ಶಿಕ್ಷೆ ಕೊಡಬೇಕು ಎಂಬ ಒತ್ತಾಯಗಳು ಕೇಳಿ ಬಂದಿವೆ. ಇಂತಹ ಬೀಭತ್ಸ ಪ್ರಕರಣದಲ್ಲಿ ಸಾರ್ವಜನಿಕ ಆಕ್ರೋಶ ಮತ್ತು ಅಸಹನೀಯತೆ ಕಟ್ಟೊಡೆದು ಬರುವುದು ಸ್ವಾಭಾವಿಕ ಮತ್ತು ಸಕಾರಣವೇ ಆಗಿದೆ. ಆದರೆ ಮಹಿಳೆಯರ ಮೇಲೆ ಇಂಥ ಭೀಕರ ಅಪರಾಧಗಳು ಜರುಗದಂತೆ, ಹಾಗೂ ಮಹಿಳೆಯರು ಮತ್ತು ಮಕ್ಕಳ ಸುರಕ್ಷಿತತೆ ಖಾತ್ರಿಗೊಳಿಸಲು ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಬೇಕಾಗಿದೆ.

ಲೋಕಸಭೆಯಲ್ಲಿ ರಕ್ಷಣಾ ಮಂತ್ರಿ ರಾಜನಾಥ ಸಿಂಗ್ ಮತ್ತು ರಾಜ್ಯಸಭೆಯ ಮುಖ್ಯಸ್ಥ, ಮಹಿಳೆಯರ ಮೇಲೆ ಜರುಗುವ ಅಪರಾಧಗಳಿಗೆ ಇನ್ನಷ್ಟು ಕಠಿಣ ಶಿಕ್ಷೆ ವಿಧಿಸುವ ಎಲ್ಲಾ ಸಲಹೆ-ಸೂಚನೆಗಳನ್ನು ಪರಿಶೀಲಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಆದರೆ ನಮ್ಮ ಸಮಾಜವನ್ನು ಬಾಧಿಸುತ್ತಿರುವ ಈ ಭೀಕರ ಸಮಸ್ಯೆಗೆ ಇದು ಪರಿಹಾರವೇ? ನಿರ್ಭಯಾ ಪ್ರಕರಣದ ನಂತರ, ಅತ್ಯಾಚಾರ ಮತ್ತು ಕೊಲೆಯ ಪ್ರಕರಣಗಳಲ್ಲಿ ಗಲ್ಲು ಶಿಕ್ಷೆಯನ್ನು ಈಗಾಗಲೇ ವಿಧಿಸಲಾಗಿದೆ. 12 ವರ್ಷದ ಕೆಳಗಿನ ಮಕ್ಕಳ ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆ ವಿಧಿಸುವ ಬದಲಾವಣೆಗಳನ್ನು ಮೋದಿ ಸರಕಾರ ತಂದಿದೆ. ಆದರೆ ಸಮಸ್ಯೆಯಿರುವುದು ಕಾನೂನಿನಲ್ಲಿ ಎಷ್ಟು ಕಠಿಣ ಶಿಕ್ಷೆ ವಿಧಿಸಲಾಗಿದೆ ಎಂಬುದರಲ್ಲಿ ಅಲ್ಲ. ಬದಲಾಗಿ ನ್ಯಾಯ ವ್ಯವಸ್ಥೆ ಎಷ್ಟು ತ್ವರಿತವಾಗಿ ಅಪರಾಧದ ತನಿಖೆ, ವಿಚಾರಣೆ ನಡೆಸಿ ಶಿಕ್ಷೆಯ ತೀರ್ಪುಕೊಡಬಲ್ಲುದು ಎಂಬುದರಲ್ಲಿದೆ. ರಾಷ್ಟ್ರೀಯ ಅಪರಾಧ ಸಂಶೋಧನೆ ಬ್ಯೂರೊದ 2017ರ ವರದಿಯ ಪ್ರಕಾರ, ಮಕ್ಕಳ ಮೇಲೆ ಅತ್ಯಾಚಾರ ಸೇರಿದಂತೆ ಅತ್ಯಾಚಾರದ ಪ್ರಕರಣಗಳು ತೀವ್ರ ವಿಳಂಬ ಎದುರಿಸುತ್ತಿವೆ. ಹಿಂದಿನ ವರ್ಷಗಳ 1.17 ಲಕ್ಷ ಪ್ರಕರಣಗಳು ಇತ್ಯರ್ಥವಾಗಿಲ್ಲ. 2017ರಲ್ಲಿ ತೀರ್ಪು ಬಂದ 18,099 ಪ್ರಕರಣಗಳಲ್ಲಿ ಕೇವಲ 5,822 ಅಂದರೆ ಶೇ. 32.2 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ.

ಅಪರಾಧ’ಕ್ಕೆ ತ್ವರಿತ ಮತ್ತು ಖಾತ್ರಿ ಶಿಕ್ಷೆಯಾಗುತ್ತದೆ ಎಂಬುದು ಮಾತ್ರ ಅಪರಾಧವನ್ನು ತಡೆಯಬಲ್ಲುದು. ಕಾನೂನು ಪುಸ್ತಕಗಳಲ್ಲಿ ಕಠಿಣ ಶಿಕ್ಷೆ ಸೇರಿಸುತ್ತಾ ಹೋಗುವುದರಿಂದ ಅಪರಾಧಗಳನ್ನು ತಡೆಯಲಾಗುವುದಿಲ್ಲ.

ಅತ್ಯಾಚಾರ ಸಂಸ್ಕೃತಿ ಮತ್ತು ಮಹಿಳೆಯರ ವಿರುದ್ಧ ಅಪರಾಧಗಳ ಬಗ್ಗೆ ನಿರ್ಭಯಗಳ ಮೂಲ, ಭಾರತೀಯ ಸಮಾಜದಲ್ಲಿ ಬೇರು ಬಿಟ್ಟಿರುವ ಪುರುಷಪ್ರಧಾನ ಮತ್ತು ಸ್ತ್ರೀದ್ವೇಷದ ಸಾಮಾಜಿಕ ಮೌಲ್ಯಗಳಲ್ಲಿದೆ. ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಯನ್ನು ಅಡಿಯಾಳಾಗಿರಿಸುವುದ ಜತೆಗೆ, ನಮ್ಮ ಸಮೂಹ ಮಾಧ್ಯಮ ಮತ್ತು ಮನೋರಂಜನಾ ಉದ್ಯಮಗಳಲ್ಲಿ ಮಹಿಳೆಯರನ್ನು ಕಾಮದ ಗೊಂಬೆಯಾಗಿ ಚಿತ್ರಿಸುವ ಮಾರುಕಟ್ಟೆ ಮತ್ತು ಉಪಭೋಗ ಮೌಲ್ಯಗಳು ಇದನ್ನು ಬೆಳೆಸುತ್ತಿವೆ. ಮಹಿಳೆಯರ ಸಮಾನತೆ ಮತ್ತು ಸ್ವಾಯತ್ತತೆಯನ್ನು ಮನ್ನಿಸಲು ನಿರಾಕರಣೆಯು, ನಮ್ಮ ಸಾಮಾಜಿಕ, ಧಾರ್ಮಿಕ ಮತ್ತು ಕೌಟುಂಬಿಕ ಕಟ್ಟು-ಕಟ್ಟಳೆಗಳಲ್ಲಿ ಆಳವಾಗಿ ಹುದುಗಿದೆ.

ಮಹಿಳೆಯರ ವಿರುದ್ಧ ಅಪರಾಧಗಳು ಜಗತ್ತಿನಾದ್ಯಂತ – ಅದರಲ್ಲೂ ವಿಶೇಷವಾಗಿ ಭಾರತದಂತಹ ಪರಿಸ್ಥಿತಿ ಇರುವ ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ – ಹೆಚ್ಚುತ್ತಿವೆ. ಪುರುಷಪ್ರಾಧಾನ್ಯ ಮತ್ತು ಪುರುಷಯಜಮಾನಿಕೆಗಳು ಅತಿಯಾಗಿದ್ದು, ಜತೆಗೆ ಜನಾಂಗೀಯ ಮತ್ತು ಜಾತಿ ಶ್ರೇಣಿಗಳು ಈ ಮೂರೂ ಪ್ರಮುಖ ವಿಕಾಸಶೀಲ ದೇಶಗಳಲ್ಲಿ ಸೇರಿಕೊಂಡಿವೆ. ಲೂಟಿಕೋರ ಬಂಡವಾಳಶಾಹಿಯಿಂದಾಗಿ ಆರ್ಥಿಕವಾಗಿಯೂ ಇವು ಅತ್ಯಂತ ಅಸಮಾನ ಸಮಾಜಗಳು. ದಕ್ಷಿಣ ಆಫ್ರಿಕಾದಲ್ಲಿ 3000 ಮಹಿಳೆಯರು ಕೊಲೆಯಾಗಿದ್ದಾರೆ. ಹೆಚ್ಚಿನ ಪ್ರಕರಣಗಳಲ್ಲಿ ಅವರ ಮೇಲೆ ಕೊಲೆಯ ಮೊದಲು ಭೀಕರ ದಾಳಿ ಅಥವಾ ಅತ್ಯಾಚಾರ ನಡೆದಿದೆ. ಇದೇ ಸೆಪ್ಟೆಂಬರಿನಲ್ಲಿ ಕೇಪ್ ಟೌನಿನ 19 ವರ್ಷದ ವಿ.ವಿ. ವಿದ್ಯಾರ್ಥಿನಿಯ ರೇಪ್ ಮತ್ತು ಕೊಲೆಯ ವಿರುದ್ಧ, ದೇಶದಾದ್ಯಂತ ಪ್ರತಿಭಟನೆ ನಡೆದಿತ್ತು. ಮಹಿಳೆಯ ವಿರುದ್ಧ ಅಪರಾಧಗಳು ಒಂದು ರಾಷ್ಟ್ರೀಯ ಬಿಕ್ಕಟ್ಟು ಆಗಿದೆ ಎಂದು ಅಧ್ಯಕ್ಷ ರಾಮಫೋಸ ಒಪ್ಪಿಕೊಳ್ಳಬೇಕಾಗಿ ಬಂದಿತ್ತು.

ಬ್ರೆಜಿಲಿನಲ್ಲಿ ಮಹಿಳೆಯರ ವಿರುದ್ಧ ಅಪರಾಧ ಎಷ್ಟು ವ್ಯಾಪಕವಾಗಿದೆಯೆಂದರೆ, ಸಾರ್ವಜನಿಕ ಸುರಕ್ಷಿತತೆಗಾಗಿ ಬ್ರೆಜಿಲ್ ವೇದಿಕೆ ನಡೆಸಿದ ಸಮೀಕ್ಷೆಯಲ್ಲಿ ಪ್ರತಿ ಗಂಟೆಯಲ್ಲಿ 13 ವರ್ಷದ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳು ರೇಪ್ ಗೆ ಒಳಗಾಗುತ್ತಾರೆ ಎಂಬ ಭೀಕರ ವಾಸ್ತವವನ್ನು ಹೊರಗೆಡಹಿದೆ. ಭಾರತ ಮತ್ತು ದಕ್ಷಿಣ ಆಫ್ರಿಕಾಗಳಂತೆ ಬ್ರೆಜಿಲ್ ಸಹ ಅತ್ಯಂತ ಅಸಮಾನ ಸಮಾಜವಾಗಿದೆ. ಅಲ್ಲಿ ಪುರುಷಪ್ರಾಧಾನ್ಯ ಮತ್ತು ಪುರುಷ-ಹೆಚ್ಚುಗಾರಿಕೆಯ ಭಾವನೆ ಅತ್ಯಂತ ತೀವ್ರ ರೂಪದಲ್ಲಿದೆ. ಮಹಿಳೆಯರ ಬಗ್ಗೆ ಹಿಂದುತ್ವದ ಪುರುಷಪ್ರಾಧಾನ್ಯ ಮತ್ತು ಗೋಸುಂಬೆತನದಂತೆ, ಅಧ್ಯಕ್ಷ ಬೊಲ್ಸೆನಾರೊ ಅವರ ಬಲಪಂಥೀಯ ಸರಕಾರ ಮಹಿಳೆಯರ ಹಕ್ಕುಗಳ ಬಗ್ಗೆ ಅತ್ಯಂತ ಪ್ರತಿಗಾಮಿ ಧೋರಣೆ ಹೊಂದಿದೆ. ಮಹಿಳೆಯರ ಮೇಲೆ ದಾಳಿಗಳನ್ನು ವಿಶ್ಲೇಷಿಸುವಾಗ ಅವುಗಳನ್ನು ಇನ್ನಷ್ಟು ಉದ್ರೇಕಿಸುವ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಗಮನಿಸಬೇಕು.

ಹೆಣ್ಣುಮಕ್ಕಳು ಮತ್ತು ಮಹಿಳೆಯರನ್ನು ಸಮಾನರಾಗಿ ಕಾಣುವಂತೆ ಮತ್ತು ಅವರ ಸ್ವಾಯತ್ತತೆಯನ್ನು ಗೌರವಿಸುವಂತೆ, ಶಿಕ್ಷಣ ಸಂಸ್ಥೆಗಳಲ್ಲಿ ಹುಡುಗರು ಮತ್ತು ಗಂಡಸರಿಗೆ ಶಿಕ್ಷಣ ನೀಡಲು ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇದರಿಂದ ಮಾತ್ರವೇ ಮಹಿಳೆಯರ ವಿರುದ್ಧ ಹಿಂಸಾಚಾರವನ್ನು ಪೋಷಿಸುವ ಪ್ರತಿಗಾಮಿ ಮೌಲ್ಯಗಳನ್ನು ಬದಲಾಯಿಸಲು ಸಾಧ್ಯ. ಆಗ ಮಾತ್ರ ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಲಿಂಗ ಸಮಾನತೆ ಖಾತ್ರಿಗೊಳಿಸಬಹುದು.

ನಿರ್ಭಯಾ ಪ್ರಕರಣದ ನಂತರ ನೇಮಿಸಲಾದ ನ್ಯಾಯಮೂರ್ತಿ ವರ್ಮಾ ಸಮಿತಿಯ ಹೆಚ್ಚಿನ ಶಿಫಾರಸುಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಾರಿ ಮಾಡುವುದರಲ್ಲಿ ವಿಫಲವಾಗಿರುವುದು ಸಹ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಅಸುರಕ್ಷಿತತೆಗೆ ಕಾರಣವಾಗಿದೆ. ಸುರಕ್ಷಿತ ಸಾರ್ವಜನಿಕ ಸಾಗಾಣಿಕೆ, ಬೀದಿ ದೀಪಗಳ ನಿರ್ವಹಣೆ, ಅಸುರಕ್ಷಿತ ಸ್ಥಳಗಳನ್ನು ಗುರುತಿಸಿ ಹೆಚ್ಚಿನ ಪೋಲಿಸ್ ಗಸ್ತು ಒದಗಿಸುವುದು ಮುಂತಾದ ಕ್ರಮಗಳನ್ನು ಆ ಸಮಿತಿ ಶಿಫಾರಸು ಮಾಡಿತ್ತು.

ಹಲವು ಸರಕಾರಗಳ ಸಚಿವರು, ಚುನಾಯಿತ ಪ್ರತಿನಿಧಿಗಳು ಮಹಿಳೆಯರನ್ನು ಕೀಳಾಗಿ ಕಾಣುವ ಅಥವಾ ಮಹಿಳೆಯರ ವಿರುದ್ಧ ಅಪರಾಧಗಳನ್ನು ಕ್ಷುಲ್ಲಕಗೊಳಿಸುವ ಹೇಳಿಕೆಗಳನ್ನು ಪದೇ ಪದೇ ಮಾಡುತ್ತಿದ್ದಾರೆ. ಮಹಿಳೆಯರ ಮೇಲೆ ಹಲವು ಹಂತಗಳಲ್ಲಿ ಭೀಕರ ದಾಳಿಗಳನ್ನು ನೆಪವಾಗಿಟ್ಟುಕೊಂಡು, ಸಾಂಪ್ರದಾಯಿಕ ಶಕ್ತಿಗಳು ಮಹಿಳೆಯರನ್ನು ಸಾರ್ವಜನಿಕ ಸ್ಥಳಗಳಿಗೆ ಹೊಗದಂತೆ ನಿರ್ಬಂಧಗಳನ್ನು ಹೇರಬೇಕು ಮತ್ತು ಮನೆಗೆ ಸೀಮಿತಗೊಳಿಸಬೇಕು ಎಂದು ವಾದಿಸುತ್ತಿದ್ದಾರೆ. ಈ ವಲಯಗಳಲ್ಲಿ ಅತ್ಯಾಚಾರ ಸಂತ್ರಸ್ತೆಯ ಉಡುಪು ಅಥವಾ ಜೀವನ ವಿಧಾನಗಳೇ ಅವಳ ವಿರುದ್ಧ ಅಪರಾಧಕ್ಕೆ ಕಾರಣ ಎಂದು ಅಪರಾಧಿ ಸ್ಥಾನದಲ್ಲಿರಿಸಲಾಗುತ್ತಿದೆ.

ಮಹಿಳೆಯರ ವಿರುದ್ಧ ಲೈಂಗಿಕ ಹಿಂಸಾಚಾರದ ವಿರುದ್ಧ ಹೋರಾಟಗಳನ್ನು ಈ ರೀತಿ ಬಹು ಆಯಾಮಗಳಲ್ಲಿ ನಡೆಸಬೇಕಾಗಿದೆ. ಪುರುಷಪ್ರಾಧಾನ್ಯ ಮತ್ತು ಸ್ರೀದ್ವೇಷದ ವಿರುದ್ಧ, ಮಹಿಳೆಯರನ್ನು ಸರಕಾಗಿ ಬಿಂಬಿಸುವುದರ ವಿರುದ್ಧ ಹೋರಾಟಗಳು, ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಹಕ್ಕು ಮತ್ತು ಚಟುವಟಿಕೆಗಳನ್ನು ವಿಸ್ತರಿಸುವ ಸತತ ಹೋರಾಟಗಳನ್ನು ನಡೆಸಬೇಕಾಗಿದೆ. ತಕ್ಷಣದ ಕಾರ್ಯಭಾರವಂತೂ ಮಹಿಳೆಯರ ವಿರುದ್ಧ ಎಲ್ಲಾ ಅಪರಾಧದ ಪ್ರಕರಣಗಳಲ್ಲಿ ತ್ವರಿತ ವಿಚಾರಣೆ ಮತ್ತು ಶಿಕ್ಷೆಯನ್ನು ಖಾತ್ರಿಪಡಿಸುವುದು ಆಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷಿತತೆಗೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರಕಾರಗಳ ಮೇಲೆ ಒತ್ತಡ ಹೇರುವುದು ಸಹ ತಕ್ಷಣದ ಆದ್ಯತೆಯಾಗಬೇಕು.



ಸಂತ್ರಸ್ತೆಯರ ಕೊಲೆ, ಸುಟ್ಟು ಹಾಕುವ ಪ್ರಯತ್ನ ಮತ್ತು ಆರೋಪಿಗಳ ‘ಎನ್‌ಕೌಂಟರ್’

ನ್ಯಾಯದಾನ ವ್ಯವಸ್ಥೆಯ ಸಂಪೂರ್ಣ ವಿಫಲತೆಯನ್ನು ಪ್ರದರ್ಶಿಸುತ್ತಿದೆ

– ಎಐಡಿಡಬ್ಲ್ಯುಎ

ಪುಟ 14 ನೋಡಿ



ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನಾ ದಿನದ ಕುರಿತ ಜಿಜ್ಞಾಸೆ

ತಾಷ್ಕೆಂಟ್ ಮೊದಲ ಹೆಜ್ಜೆಯಾದರೆ, ಕಾನ್ಪುರ ಸಮ್ಮೇಳನ ನಂತರದ ಹೆಜ್ಜೆ

ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯವು ಸ್ಥಾಪನೆಯಾಗಿದ್ದು ಮಾರ್ಚ್ 1919ರಲ್ಲಿ. ಈ ಕಾಮಿಂಟರ್ನ್‌ನ ಮಾರ್ಗದರ್ಶನದಲ್ಲಿ ಹಲವಾರು ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಸ್ಥಾಪಿಸಲ್ಪಟ್ಟವು. ಶ್ರಮಿಕ ವರ್ಗದ ಅಂತರ್‍ರಾಷ್ಟ್ರೀಯತೆಯು ಕಮ್ಯುನಿಸ್ಟ್ ಚಳುವಳಿಯ ಹಿಂದಿನ ಚಾಲನಾ ಶಕ್ತಿಯಾಗಿದ್ದ ಯುಗವಾಗಿತ್ತು ಅದು. ಅಂತರ್‍ರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿಯನ್ನು ಬೆಳೆಸಲು ಕಮ್ಯುನಿಸ್ಟರು ರಾಷ್ಟ್ರೀಯ ಗಡಿಗಳನ್ನು ಮೀರಿ ನಿಂತರು. ಆದಕಾರಣ, ತಾಷ್ಕೆಂಟಿನಲ್ಲಿ ಸಿಪಿಐ ಸ್ಥಾಪನೆಯನ್ನು ಅದೊಂದು "ವಿದೇಶ"ದಲ್ಲಿ ಘಟಿಸಿದ್ದು ಎಂದು ನೋಡುವುದು ತಪ್ಪಾಗುತ್ತದೆ. 1925 ರ ಕಾನ್ಪುರ್ ಸಮ್ಮೇಳನದಂತೆ ರಾಷ್ಟ್ರೀಯ ಗಡಿಯೊಳಗೆ ಸ್ಥಾಪನೆಯಾದ ಪಕ್ಷದ ಘಟಕ ಮಾತ್ರವೇ ಅಪ್ಪಟವಾದದ್ದು ನಿಜವಾದದ್ದು ಎನ್ನುವುದು ಸಂಕುಚಿತ ರಾಷ್ಟ್ರೀಯತೆಯ ನೋಟವಾಗುತ್ತದೆ.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್



ಅಕ್ಟೋಬರ್ 17, 1920 ರಂದು ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ 100ನೇ ವರ್ಷಾಚರಣೆಯನ್ನು ವರ್ಷವಿಡೀ ಆಚರಿಸಲು ಸಿಪಿಐ(ಎಂ) ಮುಂದಾಗುತ್ತಿರುವಾಗ ಪಕ್ಷದ ಸ್ಥಾಪನೆಯ ನಿಜವಾದ ದಿನದ ಬಗ್ಗೆ ಜಿಜ್ಞಾಸೆ ಮತ್ತೆ ಎದ್ದಿದೆ. ಡಿಸೆಂಬರ್ 26, 1925 ರಂದು ನಡೆದ ಕಾನ್ಪುರ್ ಕಮ್ಯುನಿಸ್ಟ್ ಸಮ್ಮೇಳನದ ದಿನವನ್ನೇ ಭಾರತದ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ದಿನವೆಂದು ಸಿಪಿಐ ಪರಿಗಣಿಸುತ್ತದೆ ಎಂಬ ಸಂಗತಿ ಎಲ್ಲರಿಗೂ ತಿಳಿದೇ ಇದೆ.

ಈ ಅಂಕಣದಲ್ಲಿ, ಅಕ್ಟೋಬರ್ 17, 1920 ರಲ್ಲಿನ ತಾಷ್ಕೆಂಟ್ ಸಭೆ, ಭಾರತದಲ್ಲಿ ಕಮ್ಯುನಿಸ್ಟ್ ಗುಂಪುಗಳ ರಚನೆ ಮತ್ತು ಅವುಗಳ ನಡುವಿನ ಸಂಬಂಧಗಳ ಕುರಿತು ನಾವೀಗಾಗಲೇ ಹೇಳಿದ್ದೇವೆ. ಹಿಂದಿನ ಸಂಚಿಕೆಯಲ್ಲಿ 1925 ರ ಕಾನ್ಪುರ್ ಕಮ್ಯುನಿಸ್ಟ್ ಸಮ್ಮೇಳನದ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದೇವೆ.

ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ದಿನಗಳ ಒಂದು ಸಂಕ್ಷಿಪ್ತ ನೋಟವನ್ನು ನಮ್ಮ ಓದುಗರು ಪಡೆದಿದ್ದಾರೆ. 1920 ರಲ್ಲಿ ಸಿಪಿಐ ಸ್ಥಾಪನೆಯ ಕುರಿತು ಸಿಪಿಐ(ಎಂ)ನ 100ನೇ ವರ್ಷಾಚರಣೆಯ ಬಗ್ಗೆ ಸಿಪಿಐ ಪ್ರತಿಕ್ರಿಯೆ ನೀಡಿ 1925 ರ ಸ್ಥಾಪನಾ ದಿನವನ್ನೇ ಏಕೆ ಪರಿಗಣಿಸಬೇಕೆಂಬ ತನ್ನ ನಿಲುವನ್ನು ಪುನರುಚ್ಚರಿಸಿದೆ.

ನ್ಯೂ ಏಜ್ ಪತ್ರಿಕೆಯಲ್ಲಿನ ಲೇಖನವೊಂದರಲ್ಲಿ, ಅದರ ಸಂಪಾದಕ ಹಾಗೂ ಸಿಪಿಐನ ಕಾರ್ಯದರ್ಶಿ ಬಿನಯ್ ವಿಶ್ವಂ ಈ ಕುರಿತು ತಮ್ಮ ವಾದಗಳನ್ನು ಪ್ರತಿಪಾದಿಸಿದ್ದಾರೆ. ಹೇಗೆ ಅವಿಭಜಿತ ಸಿಪಿಐ ಪಕ್ಷವು ತನ್ನ ಸ್ಥಾಪನಾ ದಿನದ ಬಗ್ಗೆ ನಿರ್ಧಾರಕ್ಕೆ ಬಂತು ಎನ್ನುವುದನ್ನು ಸವಿಸ್ತಾರವಾಗಿ ನಿರೂಪಿಸಿದ್ದಾರೆ. ಸಿಪಿಐನ ಸ್ಥಾಪನಾ ದಿನವು ಡಿಸೆಂಬರ್ 26, 1925 ಎಂದು ಪಕ್ಷದ ಕಾರ್ಯದರ್ಶಿ ಮಂಡಳಿಯು ಆಗಸ್ಟ್ 1959 ರಲ್ಲಿ ತೀರ್ಮಾನ ಮಾಡಿತು. ತದನಂತರದಲ್ಲಿ ಈ ಕುರಿತು ಪ್ರಶ್ನೆಗಳು ಎದ್ದಾಗಲೆಲ್ಲಾ ಆ ದಿನವನ್ನೇ ಸ್ಥಾಪನಾ ದಿನವೆಂದು ಪುನರುಚ್ಚರಿಸಲಾಗಿದೆ.

ಡಿಸೆಂಬರ್ 1925ರ ಕಾನ್ಪುರ್ ಸಮ್ಮೇಳನವು ಪಕ್ಷದ ಸ್ಥಾಪನಾ ದಿನವೆಂದು ಅವಿಭಜಿತ ಸಿಪಿಐ ತೀರ್ಮಾನ ಮಾಡಿದ್ದು ನಿಜ. ಆದರೆ 1964 ರಲ್ಲಿ ಸಿಪಿಐ(ಎಂ) ಸ್ಥಾಪನೆಯಾದ ನಂತರ, ಆಗ ಪ್ರಸ್ತುತವಾಗಿ ಸ್ಪಷ್ಟ ಅಭಿಪ್ರಾಯಕ್ಕೆ ಮತ್ತು ಅಂತಿಮ ಇತ್ಯರ್ಥಕ್ಕೆ ಬರಬೇಕಾಗಿದ್ದ ಇನ್ನೂ ಅನೇಕ ರಾಜಕೀಯ ಹಾಗೂ ಸೈದ್ಧಾಂತಿಕ ವಿಷಯಗಳಂತೆಯೇ ಈ ತೀರ್ಮಾನವನ್ನು ಪುನರ್ವಿಮರ್ಶೆ ಮಾಡಲಾಯಿತು. ಉದಾಹರಣೆಗೆ, ಪಕ್ಷದ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಒಂದು ನಿರ್ಣಾಯಕ ಕಾರ್ಯಕ್ರಮವನ್ನು ಸಿಪಿಐ(ಎಂ) 1964 ರ ತನ್ನ 7ನೇ ಮಹಾಧಿವೇಶನದಲ್ಲಿ ಅಂಗೀಕರಿಸಿತು. ಅದೇ ವರ್ಷ ಸಿಪಿಐ ಕೂಡ ತನ್ನ 7 ನೇ ಮಹಾಧಿವೇಶನದಲ್ಲಿ ತನ್ನದೇ ಆದ ಕಾರ್ಯಕ್ರಮವೊಂದನ್ನು ಅಂಗೀಕರಿಸಿತು.

ಭಾರತ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರಾಗಿ ಚುನಾಯಿತರಾದ ಕಾಂ.ಮುಜಾಫರ್ ಅಹಮದ್ ಅವರ ಪ್ರಯತ್ನಗಳಿಂದಾಗಿ ಪ್ರಥಮತಃ ಸಿಪಿಐನ ಸ್ಥಾಪನಾ ದಿನದ ಪ್ರಶ್ನೆಯನ್ನು ಮತ್ತೆ ಎತ್ತಲಾಯಿತು.

ಈ ಪುನರ್ವಿಮರ್ಶೆಯ ಇತಿಹಾಸದ ಆಳಕ್ಕೆ ಹೋಗದೆ, ತಾಷ್ಕೆಂಟ್ ಸಭೆಯ ಸಾಕ್ಷ್ಯಾಧಾರಿತ ದಾಖಲೆಗಳ ಶೋಧನೆಯು ಆ ದಿನದ ಪುನರ್ವಿಮರ್ಶೆಗೆ ವೇಗ ನೀಡಿತು ಎಂಬುದನ್ನು ಮಾತ್ರ ಇಲ್ಲಿ ತಿಳಿಸುವುದು ಅಗತ್ಯ. ಕುರುಕ್ಷೇತ್ರ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ.ದೇವೇಂದ್ರ ಕೌಶಿಕ್‌ರವರು ಈ ಸಂಶೋಧನೆಗಾಗಿ ತಾಷ್ಕೆಂಟಿನಲ್ಲಿ ಮೂರು ವರ್ಷ ತಂಗಿದ್ದರು. ಉಜ್ಬೆಕಿಸ್ತಾನದ ರಾಜಧಾನಿಯಾಗಿರುವ ತಾಷ್ಕೆಂಟಿನಲ್ಲಿ ಉಜ್ಬೆಕಿಸ್ತಾನ್ ಕಮ್ಯುನಿಸ್ಟ್ ಪಕ್ಷದ ಪತ್ರಾಗಾರದಲ್ಲಿ ಸಿಪಿಐ ಸ್ಥಾಪನೆಗೆ ಸಂಬಂಧಪಟ್ಟ ದಾಖಲೆಗಳು ಅವರ ಸಂಶೋಧನೆಯ ಸಂದರ್ಭದಲ್ಲಿ ಸಿಕ್ಕವು.

ಅಲ್ಲಿಯ ತನಕ, ತಾಷ್ಕೆಂಟಿನಲ್ಲಿ ಸಭೆ ನಡೆದಿತ್ತು ಎಂದಷ್ಟೇ ತಿಳಿದಿತ್ತು, ಅದರ ದಿನಾಂಕ ಸ್ಪಷ್ಟವಿರಲಿಲ್ಲ. ಎಂ.ಎನ್.ರಾಯ್ ಕೂಡ ತಮ್ಮ ಆತ್ಮಕಥೆಯಲ್ಲಿ ನಿರ್ದಿಷ್ಟವಾಗಿ ದಿನಾಂಕವನ್ನು ನಮೂದಿಸಿರಲಿಲ್ಲ. ತಾಷ್ಕೆಂಟ್ ಸಭೆಯ ಆ ದಾಖಲೆಗಳ ಮತ್ತು ಅದರ ಕಾರ್ಯಕಲಾಪಗಳ ಆವಿಷ್ಕಾರವು ಸಿಪಿಐನ ಮೊದಲ ಘಟಕವು ಹೇಗೆ ಸ್ಥಾಪನೆಯಾಯಿತು ಎನ್ನುವುದರ ಸುಸಂಗತ ಚಿತ್ರಣವನ್ನು ನೀಡಿತು. ಆ ಗುಂಪಿನ ಕಮ್ಯುನಿಸ್ಟ್ ಗುಣದ ವಿಶ್ವಾಸಾರ್ಹತೆ ಪ್ರಶ್ನಾತೀತವಾಗಿತ್ತು. ಆ ಘಟಕದ ಸ್ಥಾಪನೆಗೆ ಆರಂಭದ ಶ್ರಮ ಹಾಕಿದ್ದ ಎಂ.ಎನ್.ರಾಯ್ ಅವರು ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯದ ಎರಡನೇ ಮಹಾಧಿವೇಶನದಲ್ಲಿ ಮೆಕ್ಸಿಕನ್ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಆದರೆ, ರಾಷ್ಟ್ರೀಯ ಹಾಗೂ ವಸಾಹತು ಪ್ರಶ್ನೆಗಳ ಮೇಲಿನ ಚರ್ಚೆಯಲ್ಲಿ ಅವರು ವಹಿಸಿದ ಪ್ರಮುಖ ಪಾತ್ರದಿಂದಾಗಿ ಮಹಾಧಿವೇಶನದ ನಂತರ ಅವರನ್ನು ಸೆಂಟ್ರಲ್ ಏಶಿಯಾಟಿಕ್ ಬ್ಯೂರೋದ ಸದಸ್ಯರನ್ನಾಗಿ ಮಾಡಲಾಯಿತು, ಅದರ ಕೇಂದ್ರ ತಾಷ್ಕೆಂಟ್ ಆಗಿತ್ತು. ಅವರ ಈ ಹೊಣೆಗಾರಿಕೆಯಿಂದಾಗಿ ಅವರು ತಮ್ಮ ಪತ್ನಿ ಇವೆಲಿನ್ ಟ್ರೆಂಟ್ ರಾಯ್ ಅವರ ಜತೆ ತಾಷ್ಕೆಂಟಿಗೆ ತೆರಳಿದರು. ಇವೆಲಿನ್ ಟ್ರೆಂಟ್ ಕೂಡ ತಮ್ಮ ಸಾಧನೆಯಿಂದಲೇ ಕಮ್ಯುನಿಸ್ಟರಾಗಿದ್ದವರು. ಎರಡು ಮಹಾಧಿವೇಶನಗಳ ನಡುವಿನ ಕಾಮಿಂಟರ್ನ್‌ನ ಎಲ್ಲಾ ಕೆಲಸಕಾರ್ಯಗಳನ್ನು ನಿಭಾಯಿಸುತ್ತಿದ್ದ ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯದ ಕಾರ್ಯಕಾರಿ ಸಮಿತಿ(ಎಕ್ಸೆಕ್ಯುಟಿವ್ ಕಮಿಟಿ ಆಫ್ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ – ಇಸಿಸಿಐ)ಯ ಸದಸ್ಯರನ್ನಾಗಿ ಎಂ.ಎನ್.ರಾಯ್ ಅವರನ್ನು ತದನಂತರ ಚುನಾಯಿಸಲಾಯಿತು. ಕಾಮಿಂಟರ್ನ್‌ನಲ್ಲಿ ಅಂತಹ ಅಧಿಕಾರ ಹೊಂದಿದ್ದ ವ್ಯಕ್ತಿ ತಾಷ್ಕೆಂಟಿನಲ್ಲಿ ಮುಹಾಜಿರರ ನಡುವೆ ಕೆಲಸ ಮಾಡಲು ಆರಂಭಿಸಿ, ಅವರನ್ನು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿಸಿಕೊಂಡರು.

1921 ರಲ್ಲಿ ಬರ್ಲಿನ್‌ನಲ್ಲಿದ್ದ ಭಾರತೀಯ ಕ್ರಾಂತಿಕಾರಿಗಳ ಗುಂಪೊಂದು ಮಾಸ್ಕೋಗೆ ಭೇಟಿ ನೀಡಿತು. ಅದರ ನೇತೃತ್ವವನ್ನು ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದ ಸರೋಜಿನಿ ನಾಯ್ಡು ಅವರ ಸೋದರ ವೀರೇಂದ್ರನಾಥ್ ಚಟ್ಟೋಪಾಧ್ಯಾಯ ಅವರು ವಹಿಸಿದ್ದರು. ಅವರು ಮತ್ತು ಅವರ ಗುಂಪು ಭಾರತ ಸ್ವಾತಂತ್ರ್ಯ ಗಳಿಸುವುದಕ್ಕಿಂತ ಮುಂಚೆ ಕಮ್ಯುನಿಸ್ಟ್ ಪಕ್ಷ ಸ್ಥಾಪನೆ ಮಾಡುವುದರ ಪರವಾಗಿ ಇರಲಿಲ್ಲ. ಅದರ ಬದಲಾಗಿ ಅವರು ಭಾರತದ ಕ್ರಾಂತಿಕಾರಿ ಮಂಡಳಿ(ಇಂಡಿಯನ್ ರೆವಲ್ಯೂಷನರಿ ಬೋರ್ಡ್)ಯೊಂದಕ್ಕೆ ಕಾಮಿಂಟರ್ನ್ ಬೆಂಬಲ ನೀಡಬೇಕೆಂದು ಬಯಸಿದ್ದರು. ತಾಷ್ಕೆಂಟ್ ಪಕ್ಷವನ್ನು ವಿಸರ್ಜಿಸಬೇಕೆಂದು ಅವರು ಒತ್ತಾಯಿಸಿದರು ಮತ್ತು

ಪುಟ 10 ಕ್ಕೆ

ಭಾರತದ ಕಮ್ಯುನಿಸ್ಟ್ ಪಕ್ಷದ ಶತಮಾನೋತ್ಸವ –ಮೊದಲ ಪುಸ್ತಕ ಬಿಡುಗಡೆ

ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಾಗಿ ಅಕ್ಟೋಬರ್ 2020ಕ್ಕೆ ನೂರು ವರ್ಷಗಳಾಗುತ್ತವೆ. ಸಿಪಿಐ(ಎಂ) ಕೇಂದ್ರ ಸಮಿತಿ ಅಕ್ಟೋಬರ್ 2019ರಿಂದ ಅಕ್ಟೋಬರ್ 2020ರ ವರೆಗೆ ಈ ಶತಮಾನೋತ್ಸವವನ್ನು ಆಚರಿಸಲು ಕರೆ ನೀಡಿದೆ. ಇದರ ಭಾಗವಾಗಿ ಇಂಗ್ಲೀಷಿನಲ್ಲಿ ಮೊದಲ ಕಿರು ಪುಸ್ತಕವನ್ನು ಡಿಸೆಂಬರ್ 4ರಂದು ನವದೆಹಲಿಯಲ್ಲಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಬಿಡುಗಡೆ ಮಾಡಿದರು. ಇದು ಪಕ್ಷದ ಸ್ಥಾಪನೆಯಾದಂದಿನಿಂದ ದೇಶ ಸ್ವತಂತ್ರವಾಗುವ ವರೆಗಿನ ಅವಧಿಯ ಪಕ್ಷದ ಇತಿಹಾಸವನ್ನು ಕುರಿತಾದ್ದು– "ಜನರೊಂದಿಗೆ, ಸ್ವಾತಂತ್ರ್ಯಕ್ಕಾಗಿ 1920–1947" ಇದರ ಶಿರೋನಾಮೆ.



ಈ ಸಂದರ್ಭದಲ್ಲಿ ಮಾತಾಡುತ್ತ ಯೆಚುರಿಯವರು, ಕಮ್ಯುನಿಸ್ಟರು ಸವಾತಂತ್ರ್ಯ ಹೋರಾಟದಲ್ಲಿ ಒಂದು ಭವ್ಯ ಪಾತ್ರವನ್ನು ವಹಿಸಿದ್ದು ಮಾತ್ರವಲ್ಲದೆ, ನಾಲ್ಕು ಪ್ರಮುಖ ಅಜೆಂಡಾಗಳನ್ನು ದೇಶದ ಮುಂದಿಡುವುದು ಅವರಿಗೆ ಸಾಧ್ಯವಾಯಿತು ಎಂದರು.

ಇದರಲ್ಲಿ ಮೊದಲನೆಯದು ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ. ಇದನ್ನು 1920ರ ದಶಕದಲ್ಲೇ ಮೊದಲ ಬಾರಿಗೆ ಎತ್ತಿದವರು ಕಮ್ಯುನಿಸ್ಟರು. ಗಾಂಧೀಜಿ ಮೊದಲಿಗೆ ಇದನ್ನು ಸ್ವೀಕರಿಸಲಿಲ್ಲ. ಆದರೆ ಕಮ್ಯುನಿಸ್ಟರು ಇದನ್ನು ಎತ್ತುತ್ತಲೇ ಇದ್ದು, ಕೊನೆಗೂ 1931ರಲ್ಲಿ ಕರಾಚಿ ಅಧಿವೇಶನದಲ್ಲಿ ಇದನ್ನು ಕಾಂಗ್ರೆಸ್ ಅಂಗೀಕರಿಸಿತು.

ಎರಡನೆಯದ್ದು ಕೋಮುವಾದವನ್ನು ಎದುರಿಸುವುದು. 1924ರಲ್ಲಿ ದೇಶದಲ್ಲಿ ಕೋಮು ಗಲಭೆಗಳು ನಡೆದವು. ಆಗ ಕಮ್ಯುನಿಸ್ಟರು ಒಂದು ನಿರ್ಣಯ ಅಂಗೀಕರಿಸಿ ಕೋಮುವಾದಕ್ಕೆ ಪ್ರತ್ಯೌಷಧಿಯೆಂದರೆ ಶ್ರಮಜೀವಿ ಜನಗಳ ಐಕ್ಯತೆ ಎಂದು ಹೇಳಿದರು. ಇಂದೂ ಕೂಡ ಅದು ಪ್ರಸ್ತುತವಾಗಿದೆ.

ಮೂರನೆಯದ್ದು ಭೂಸುಧಾರಣೆಯ ಪ್ರಶ್ನೆ. ಸ್ವಾತಂತ್ರ್ಯ ಹೋರಾಟದೊಂದಿಗೆ ನಡೆದ ಎಲ್ಲ ಪ್ರಮುಖ ರೈತ ಹೋರಾಟಗಳ, ಅಂದರೆ ತೆಲಂಗಾಣ, ವಾರಲೀ, ತೆಭಾಗ ಇತ್ಯಾದಿ ಹೋರಾಟಗಳಿಗೆ ನೇತೃತ್ವ ನೀಡಿದವರು ಕಮ್ಯುನಿಸ್ಟರು. ಈ ಹೋರಾಟಗಳ ಪರಿಣಾಮವಾಗಿ ಜಮೀಂದಾರಿ ನಿರ್ಮೂಲನಾ ಕಾಯ್ದೆ ಬಂತು.

ನಾಲ್ಕನೆಯದ್ದು ದೇಶದ ಭಾಷಾವಾರು ಪುನರ್ರಚನೆ. ಇದನ್ನೂ ಮೊದಲು ಎತ್ತಿದವರು, ಮುಖ್ಯವಾಗಿ ಕೇರಳ, ಮತ್ತು ಆಂಧ್ರಪ್ರದೇಶದಲ್ಲಿ ಕಮ್ಯುನಿಸ್ಟರು. ಕರ್ನಾಟಕ ಮತ್ತು ಮಹಾರಾಷ್ಟ್ರ ರಚನೆಯಲ್ಲೂ ಕಮ್ಯುನಿಸ್ಟರು ಪ್ರಮುಖ ಪಾತ್ರ ವಹಿಸಿದರು.

ಬೃಂದಾ ಕಾರಟ್ ಮಾತಾಡುತ್ತ, ಕಮ್ಯುನಿಸ್ಟರ ಸಾವನ್ನೂ ಕೆಣಕುವ ದೇಶಪ್ರೇಮದಿಂದಾಗಿ ಬ್ರಿಟಿಶರಿಮದ ತೀವ್ರ ದಮನವನ್ನು ಎದುರಿಸಬೇಕಾಗಿ ಬಂತು ಎಂದರು. ಕಮ್ಯುನಿಸ್ಟ್ ಪಕ್ಷದ ಮೊದಲ ಮಹಾಧಿವೇಶನದ ಪ್ರತಿನಿಧಿಗಳ ವಿವರವನ್ನು ನೋಡಿದಾಗ, 18 ಪ್ರತಿನಿಧಿಗಳ ಒಟ್ಟು ಜೈಲುವಾಸ 414 ವರ್ಷಗಳು ಎಮದು ಕಾಣ ಬಂತು. ಬ್ರಿಟಿಶರಿಗೆ ಇದಕ್ಕೆ ಸರಿಸಾಟಿಯಾದ ಪ್ರತಿರೋಧವನ್ನು ಬೇರೆ ಯಾರೂ ಒಡ್ಡಿಲ್ಲ.

ಮಹಿಳಾ ಕಮ್ಯುನಿಸ್ಟರ ಪಾತ್ರವೂ ಬಹಳ ಮುಖ್ಯವಾದದ್ದು ಎನ್ನುತ್ತ ಅವರು ಅವನ್ನು ಚೆನ್ನಾಗಿ ದಾಖಲಿಸಿಲ್ಲ ಎಂದರು. ಅವರು ಕಮ್ಯುನಿಸ್ಟರು ಕಟ್ಟಿದ ಜಾತಿ–ವಿರೋಧಿ ಹೋರಾಟಗಳನ್ನು ಪ್ರಸ್ತಾಪಿಸಿದರು.

ತಾಷ್ಕೆಂಟ್ ಮೊದಲ ಹೆಜ್ಜೆಯಾದರೆ, ಕಾನ್ಪುರ ಸಮ್ಮೇಳನ ನಂತರದ ಹೆಜ್ಜೆ

ಪುಟ 9 ರಿಂದ

"ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಪಟ್ಟಿಯಿಂದ ಅದನ್ನು ಕಿತ್ತುಹಾಕಬೇಕೆಂದು" ಕೇಳಿಕೊಂಡರು.

ಕಾಮಿಂಟರ್ನ್‌ನ ಆಯೋಗವೊಂದು ಅವರ ಮತ್ತು ಎಂ.ಎನ್.ರಾಯ್ ಅವರ ಅಭಿಪ್ರಾಯಗಳನ್ನು ಆಲಿಸಿತು. ಕಾಮಿಂಟರ್ನ್ ಆಯೋಗವು ಬರ್ಲಿನ್ ಗುಂಪಿನ ಬೇಡಿಕೆಯನ್ನು ಒಪ್ಪಲಿಲ್ಲ; ಏಕೆಂದರೆ, ವಸಾಹತು ದೇಶಗಳಲ್ಲಿ ರಾಷ್ಟ್ರೀಯ ವಿಮೋಚನೆಗಾಗಿ ಸಂಯುಕ್ತ ರಂಗದ ಜತೆ ಸೇರಿಕೊಳ್ಳುತ್ತಲೇ ಕಮ್ಯುನಿಸ್ಟ್ ಪಕ್ಷವು ತನ್ನ ಸ್ವತಂತ್ರ ಅಸ್ತಿತ್ವ ಹೊಂದಿರಲೇಬೇಕು ಎಂಬ ನಿರ್ಧಾರವನ್ನು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯವು ಹೊಂದಿತ್ತು. ಕಾಮಿಂಟರ್ನ್ ತಾಷ್ಕೆಂಟ್ ಗುಂಪನ್ನು(ಅದಾಗಲೇ ವಿಸ್ತಾರ ಪಡೆದಿತ್ತು) "ಭಾರತೀಯ ಕಮ್ಯುನಿಸ್ಟ್ ಗುಂಪು", ಅಥವಾ, ವಲಸಿಗ ಭಾರತ ಕಮ್ಯುನಿಸ್ಟ್ ಪಕ್ಷ ಎಂದು ಮಾನ್ಯ ಮಾಡುವ ತನ್ನ ನಿಲುವನ್ನು ಮುಂದುವರಿಸಿತು.

ಅದು ಭಾರತದ ಹೊರಗೆ ಸ್ಥಾಪನೆಯಾದ ಘಟಕ, ಆದ್ದರಿಂದಲೇ, ಅದನ್ನು ಸಿಪಿಐನ ಸ್ಥಾಪನೆ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂಬ ವಾದವು ಸಮರ್ಥನೀಯವಲ್ಲದ್ದು ಮತ್ತು ಸಂಕುಚಿತ ಮನೋಭಾವದ್ದು. 1920ರಲ್ಲಿ ತಾಷ್ಕೆಂಟ್ ಘಟಕ ಸ್ಥಾಪನೆಯಾದಾಗ, ಭಾರತದಲ್ಲಿ ಎಲ್ಲಿಯೂ ಕಮ್ಯುನಿಸ್ಟ್ ಗುಂಪುಗಳು ಅಸ್ತಿತ್ವದಲ್ಲಿ ಇರಲಿಲ್ಲ. 1922ರಲ್ಲಿ ಮಾತ್ರವೇ ಕೆಲವು ಗುಂಪುಗಳು ಅಸ್ತಿತ್ವಕ್ಕೆ ಬಂದವು, ಆದರೆ ಒಂದು ಕಮ್ಯುನಿಸ್ಟ್ ಪಕ್ಷವು ಹೇಗೆ ಕಾರ್ಯನಿರ್ವಹಿಸಬೇಕೆಂಬ ರಾಜಕೀಯ ಅಥವಾ ಸಂಘಟನಾತ್ಮಕ ಸ್ಪಷ್ಟತೆಯನ್ನು ಅವು ಪಡೆಯಲಾಗಿರಲಿಲ್ಲ. ಆಗಷ್ಟೆ ಗರಿಗೆದರುತ್ತಿದ್ದ ಕಮ್ಯುನಿಸ್ಟ್ ಗುಂಪುಗಳು ಮತ್ತು ಅವುಗಳ ಮುಖಂಡರ ಜತೆ ಸಂಪರ್ಕವನ್ನು ತಾಷ್ಕೆಂಟ್ ಘಟಕ ಸಾಧಿಸಿತ್ತು. 1921 ಮತ್ತು 1922ರಲ್ಲಿ ನಿರಂತರ ಪತ್ರಗಳನ್ನು ಮತ್ತು ಸಂದೇಶಗಳನ್ನು ಎಸ್.ಎ.ಡಾಂಗೆ(ಬೊಂಬಾಯಿ), ಮುಜಾಫರ್ ಅಹಮದ್(ಕಲ್ಕತ್ತಾ) ಮತ್ತು ಸಿಂಗಾರವೇಲು ಚೆಟ್ಟಿಯಾರ್(ಮದ್ರಾಸ್) ಅವರುಗಳಿಗೆ ಕಳಿಸಲಾಗಿತ್ತು.

1922 ರಲ್ಲಿ ಎಂ.ಎನ್.ರಾಯ್ ಮತ್ತು ತಾಷ್ಕೆಂಟಿನ ಘಟಕ ಬರ್ಲಿನ್ನಿಗೆ, ಅಲ್ಲಿಂದ ಕೆಲಸ ಮಾಡಲು ಸ್ಥಳಾಂತರಗೊಂಡಿತು. ತಾಷ್ಕೆಂಟಿನ ಅಷ್ಟು ದೂರದಿಂದ ಭಾರತದ ವಿವಿಧ ಪ್ರದೇಶಗಳಲ್ಲಿದ್ದ ಆಗತಾನೇ ರೂಪುಗೊಳ್ಳುತ್ತಿದ್ದ ಕಮ್ಯುನಿಸ್ಟರನ್ನು ಸಂಪರ್ಕಿಸುವುದು ಕಷ್ಟವಾಗುತ್ತದೆ ಎಂದು ಕಂಡುಕೊಂಡು ಬರ್ಲಿನ್ನಿಗೆ ಸ್ಥಳಾಂತರಿಸಬೇಕಾಯಿತು. ಮೇ 1922 ರಲ್ಲಿ, **ವ್ಯಾನ್‌ಗಾರ್ಡ್ ಆಫ್ ಇಂಡಿಯನ್ ಇಂಡಿಪೆಂಡೆನ್ಸ್(ಭಾರತದ ವಿಮೋಚನೆಯ ನೇತಾರ)** ಎಂಬ ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ಪತ್ರಿಕೆಯನ್ನು ಬರ್ಲಿನ್ನಿನಿಂದ ಹೊರತರಲಾಯಿತು. ಬ್ರಿಟಿಷ್ ಸರ್ಕಾರದ ಕಣ್ತಪ್ಪಿಸಲು ಅದರ ಶೀರ್ಷಿಕೆಯಲ್ಲಿ ಅದು ಭಾರತ ಕಮ್ಯುನಿಸ್ಟ್ ಪಕ್ಷದೊಂದಿಗೆ ಸಂಬಂಧ ಹೊಂದಿದೆ ಎಂದು ಮುದ್ರಿಸಿರಲಿಲ್ಲ. ಬ್ರಿಟಿಷ್ ಸರ್ಕಾರದ ನಿಷೇಧದ ಹೊರತಾಗಿಯೂ ಆ ಪತ್ರಿಕೆಯ ಪ್ರತಿಗಳು ಕಮ್ಯುನಿಸ್ಟರನ್ನು ತಲುಪುತ್ತಿದ್ದವು ಮತ್ತು ರಾಜಕೀಯವಾಗಿ ಹಾಗೂ ಸೈದ್ಧಾಂತಿಕವಾಗಿ ಕಮ್ಯುನಿಸ್ಟ್ ಪಕ್ಷದ ಗುರಿ ಸಾಧನೆಗಾಗಿ ಅವರನ್ನು ಅಣಿನೆರೆಸಿಕೊಳ್ಳಲು ಸಹಾಯಕವಾಗಿತ್ತು. ಕೆಲವು ಸಂಚಿಕೆಗಳ ನಂತರ ಅದರ ಹೆಸರನ್ನು **ಅಡ್ವಾನ್ಸ್ ಗಾರ್ಡ್** ಎಂದು ಬದಲಾಯಿಸಲಾಯಿತು. ಒಂದು ವರ್ಷದ ನಂತರ ಅದು **ವ್ಯಾನ್‌ಗಾರ್ಡ್** ಆಗಿ ಹೊರಬರಲು ಪ್ರಾರಂಭಿಸಿತು. ಈ ಸಂಚಿಕೆಯ ನಂತರ ಪತ್ರಿಕೆಯು ಭಾರತ ಕಮ್ಯುನಿಸ್ಟ್ ಪಕ್ಷದ ಮುಖವಾಣಿ ಎಂದು ಘೋಷಿಸಲಾಯಿತು ಎಂಬ ಸಂಗತಿ ಮಹತ್ವಪೂರ್ಣವಾದದ್ದು ಎಂಬುದನ್ನು ಗಮನಿಸಬೇಕು.

ಆದ್ದರಿಂದಲೇ, ಬರ್ಲಿನ್ನಿನಿಂದ ಹೊರಬರುತ್ತಿದ್ದ **ವ್ಯಾನ್‌ಗಾರ್ಡ್** ನ ಮೊದಲ ವರ್ಷಾಚರಣೆಯಂದು ಇಸಿಸಿಐ ನ ಅಧ್ಯಕ್ಷೀಯ ಮಂಡಳಿಯಿಂದ ಪತ್ರಿಕೆಗೆ ಬಂದ ಶುಭಾಶಯದ ಘೋಷಣೆ ಹೀಗಿತ್ತು: **"ಸ್ವತಂತ್ರ ಭಾರತ ಚಿರಾಯುವಾಗಲಿ ! ಭಾರತ ಕಮ್ಯುನಿಸ್ಟ್ ಪಕ್ಷ ಚಿರಾಯುವಾಗಲಿ ! ವ್ಯಾನ್‌ಗಾರ್ಡ್ ಚಿರಾಯುವಾಗಲಿ !"**

ತಾಷ್ಕೆಂಟ್ ಗುಂಪಿನ ಮುಖಂಡರು ನಡೆಸಿದ ಸೈದ್ಧಾಂತಿಕ ಕೆಲಸವನ್ನು ಕಡಿಮೆ ಅಂದಾಜು ಮಾಡಬಾರದು. ಇ.ಎಂ.ಎಸ್.ನಂಬೂದಿರಿಪಾಡ್ ಅವರ ಪ್ರಕಾರ, ಎಂ.ಎನ್.ರಾಯ್ ಅವರ 'ಇಂಡಿಯಾ ಇನ್ ಟ್ರಾನ್ಸಿಷನ್'(ಸಂಕ್ರಮಣದಲ್ಲಿ ಭಾರತ) ಪುಸ್ತಕವು "ವಾಸ್ತವದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿನ ಭಾರತದ ಆರ್ಥಿಕತೆ, ಸಮಾಜ ವ್ಯವಸ್ಥೆ ಮತ್ತು ಸಿದ್ಧಾಂತಗಳ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ವಿಶ್ಲೇಷಣೆಯ ಮೊದಲ ಆರಂಭ." ಸೈದ್ಧಾಂತಿಕ ಕೆಲಸಗಳ ಈ ಪರಂಪರೆಯನ್ನು ಮತ್ತು ಭಾರತೀಯ ಪರಿಸ್ಥಿತಿಗೆ ಅನುಗುಣವಾಗಿ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ತತ್ವದ ಅಳವಡಿಕೆಯನ್ನು 1934 ರಲ್ಲಿ ಉದಿಸಿದ ಕೇಂದ್ರೀಕೃತ ಮುಖಂಡತ್ವದ ಸಂಘಟಿತ ಭಾರತ ಕಮ್ಯುನಿಸ್ಟ್ ಪಕ್ಷವು ನಂತರದಲ್ಲಿ ಮುಂದುವರಿಸಿತು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ 1921 ರ ಅಹಮದಾಬಾದ್ ಅಧಿವೇಶನಕ್ಕೆ ಮೊಟ್ಟ ಮೊದಲ ಬಾರಿಗೆ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ ಎತ್ತಿದ್ದ ಪ್ರಣಾಳಿಕೆಯನ್ನು ತಾಷ್ಕೆಂಟ್ ಗುಂಪು ಕಳಿಸಿತ್ತು. ಹಸ್ರತ್ ಮೊಹಾನಿಯವರು ಅಧಿವೇಶನದಲ್ಲಿ ಆ ಬೇಡಿಕೆಯನ್ನು ಮಾರ್ದನಿಸಿದರು.

ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯವು ಸ್ಥಾಪನೆಯಾಗಿದ್ದು ಮಾರ್ಚ್ 1919ರಲ್ಲಿ. ಈ ಕಾಮಿಂಟರ್ನ್‌ನ ಮಾರ್ಗದರ್ಶನದಲ್ಲಿ ಹಲವಾರು ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಸ್ಥಾಪಿಸಲ್ಪಟ್ಟವು. ಶ್ರಮಿಕ ವರ್ಗದ ಅಂತರ್ರಾಷ್ಟ್ರೀಯತೆಯು ಕಮ್ಯುನಿಸ್ಟ್ ಚಳುವಳಿಯ ಹಿಂದಿನ ಚಾಲನಾ ಶಕ್ತಿಯಾಗಿದ್ದ ಯುಗವಾಗಿತ್ತು ಅದು. ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿಯನ್ನು ಬೆಳೆಸಲು ಕಮ್ಯುನಿಸ್ಟರು ರಾಷ್ಟ್ರೀಯ ಗಡಿಗಳನ್ನು ಮೀರಿ ನಿಂತರು. ಆದಕಾರಣ, ತಾಷ್ಕೆಂಟಿನಲ್ಲಿ ಸಿಪಿಐ ಸ್ಥಾಪನೆಯನ್ನು ಅದೊಂದು "ವಿದೇಶ"ದಲ್ಲಿ ಘಟಿಸಿದ್ದು ಎಂದು ನೋಡುವುದು ತಪ್ಪಾಗುತ್ತದೆ. 1925 ರ ಕಾನ್ಪುರ್ ಸಮ್ಮೇಳನದಂತೆ ರಾಷ್ಟ್ರೀಯ ಗಡಿಯೊಳಗೆ ಸ್ಥಾಪನೆಯಾದ ಪಕ್ಷದ ಘಟಕ ಮಾತ್ರವೇ ಅಪ್ಪಟವಾದದ್ದು ನಿಜವಾದದ್ದು ಎನ್ನುವುದು ಸಂಕುಚಿತ ರಾಷ್ಟ್ರೀಯತೆಯ ನೋಟವಾಗುತ್ತದೆ.


THE VANGUARD
CENTRAL ORGAN COMMUNIST PARTY OF INDIA
BOMBAY CALCUTTA MADRAS
ONE YEAR
TELEGRAM
THE ADVANCE-GUARD


THE VANGUARD
OF INDIAN INDEPENDENCE

ಈ ವಿಷಯದಲ್ಲಿ, ಬಿನಯ್ ವಿಶ್ವಂ ಅನಗತ್ಯವಾದ ಅಂಶವನ್ನು ಎಳೆದು ತಂದಿದ್ದಾರೆ. "ವರ್ಗ ಶತ್ರುಗಳು ವಿದೇಶಿ ಬಣ್ಣ ಹಚ್ಚುವ ಹಾನಿಕಾರಕ ಪ್ರಚೋದಿತ ಯತ್ನಗಳ ಬಗ್ಗೆ ನೆನಪಿಡಬೇಕು. ತಾಷ್ಕೆಂಟ್ ಸಭೆಯಲ್ಲಿ ಪಾಲ್ಗೊಂಡ ಏಳು ಜನರಲ್ಲಿ ಇಬ್ಬರು ವಿದೇಶಿಯರು ಎಂಬ ಆಧಾರದಲ್ಲಿ ಶತ್ರುಗಳು ನಮ್ಮ ಮೇಲೆ ತೀವ್ರ ದಾಳಿ ಮಾಡಬಹುದು." ಎಂದು ಅವರು ಟಿಪ್ಪಣಿ ಮಾಡಿದ್ದಾರೆ.

ಜಗತ್ತಿನ ಎಲ್ಲಾ ಕಡೆಗಳಲ್ಲಿಯೂ ಆಳುವ ವರ್ಗಗಳು ಕಮ್ಯುನಿಸ್ಟರನ್ನು ಮತ್ತು ಬೋಲ್ಶೆವಿಕರನ್ನು ವಿದೇಶಿ ಏಜಂಟರೆಂದು ಪರಿಗಣಿಸುತ್ತಿರುವಾಗ ಅವರ ಈ ಧೋರಣೆ ಅಚ್ಚರಿ ಉಂಟುಮಾಡುತ್ತಿದೆ. ಮಾರ್ಕ್ಸ್‌ವಾದಕ್ಕೆ 'ರಾಷ್ಟ್ರೀಯ' ತತ್ವವಿಲ್ಲದೆ ಇರುವುದರಿಂದ ಅದಕ್ಕೆ ಯಾವಾಗಲೂ ವಿದೇಶಿ ಬಣ್ಣ ಬಳಿಯುವುದುಂಟು. ತಮ್ಮ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ದೃಷ್ಟಿಕೋನ ಕುರಿತು ಕಮ್ಯುನಿಸ್ಟರಿಗೆ ಹೆಮ್ಮೆ ಇದೆ. ತಾಷ್ಕೆಂಟ್ ಸಭೆಯಲ್ಲಿ ಭಾಗವಹಿಸಿದ ಇಬ್ಬರು "ವಿದೇಶಿಯರು" ಇವೆಲಿನ್ ಟ್ರೆಂಟ್ ರಾಯ್ ಮತ್ತು ರೋಸಾ ಫಿತಿಂಗೋಫ್. ಇಬ್ಬರೂ ಕಮ್ಯುನಿಸ್ಟರಾಗಿದ್ದರು, ಒಬ್ಬರು ಅಮೆರಿಕಾ ಮೂಲದವರಾದರೆ ಮತ್ತೊಬ್ಬರು ರಷ್ಯಾದವರು. ಎಂ.ಎನ್.ರಾಯ್ ಅವರ ಮಡದಿಯಾಗಿದ್ದ ಇವೆಲಿನ್ ಟ್ರೆಂಟ್ ರಾಯ್ ಅವರ ಕೊಡುಗೆಯನ್ನು ಮರೆಯಲು ಸಾಧ್ಯವಿಲ್ಲ. ಭಾರತದಲ್ಲಿನ ಸನ್ನಿವೇಶವನ್ನು ವಿಶ್ಲೇಷಣೆ ಮಾಡುತ್ತಾ ಲೇಖನಗಳನ್ನು ಬರೆಯುವುದರಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ತಾಷ್ಕೆಂಟಿನಲ್ಲಿ ಮತ್ತು ನಂತರ ಬರ್ಲಿನ್ನಿನಲ್ಲಿ ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಭಾರತ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಿತ ಘಟಕದ ಏಳು ಜನರಲ್ಲಿ ಇಬ್ಬರು ಮಹಿಳೆಯರಾಗಿದ್ದರು ಎಂಬುದರ ಬಗ್ಗೆ ಭಾರತದಲ್ಲಿನ ಕಮ್ಯುನಿಸ್ಟರು ಹೆಮ್ಮೆಪಡಬೇಕು.


ಇತಿಹಾಸವನ್ನು ಪರಿಷ್ಕರಿಸುವಾಗ ಭಾರತದಲ್ಲಿನ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯಲ್ಲಿ ವಿದೇಶಿ ಕಮ್ಯುನಿಸ್ಟರ ಪಾತ್ರವನ್ನು ಅಳಿಸಿ ಹಾಕಲಾಗದು. ಮೀರತ್ ಪಿತೂರಿ ಪ್ರಕರಣದಲ್ಲಿನ 33 ಆರೋಪಿಗಳಲ್ಲಿ ಮೂರು ಬ್ರಿಟಿಷ್ ಕಮ್ಯುನಿಸ್ಟರಿದ್ದರು ಎಂಬುದನ್ನು ನಾವು ನೆನೆಯಬೇಕು. ಅವರು ಬೆನ್ ಬ್ರಾಡ್ಲಿ, ಫಿಲಿಪ್ ಸ್ಪ್ರಾಟ್ ಮತ್ತು ಹೆಚ್.ಎಲ್.ಹಚಿನ್ಸನ್. ಭಾರತದಲ್ಲಿನ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೆ ಸಹಾಯ ಮಾಡುವುದರಲ್ಲಿ ಬ್ರಿಟಿಷ್ ಪಕ್ಷದ ರಜನಿ ಪಾಮೆ ದತ್ ಮತ್ತು ಬೆನ್ ಬ್ರಾಡ್ಲಿ ಅವರ ಪಾತ್ರವನ್ನು ಭಾರತದ ಕಮ್ಯುನಿಸ್ಟರು ಮರೆಯಲು ಸಾಧ್ಯವಿಲ್ಲ.

ತಾಷ್ಕೆಂಟ್ ಕಮ್ಯುನಿಸ್ಟ್ ಪಕ್ಷದ ಘಟಕ ಹಾಗೂ ಕಾನ್ಪುರ್ ಕಮ್ಯುನಿಸ್ಟ್ ಸಮ್ಮೇಳನ ಎರಡೂ, ಪಕ್ಷದ ಕಾರ್ಯಕ್ರಮವನ್ನು ಅಂಗೀಕರಿಸಿಲ್ಲ. ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದೊಂದಿಗೆ ಒಂದು ಪೂರ್ಣಪ್ರಮಾಣದ ಕಮ್ಯುನಿಸ್ಟ್ ಪಕ್ಷವಾಗಿ ನೋಂದಾಯಿಸಲು ಒಂದು ಕಾರ್ಯಕ್ರಮವು ಅವರಿಗೆ ಆಧಾರವನ್ನು ಒದಗಿಸುತ್ತಿತ್ತು. ಆದ್ದರಿಂದ ಪಕ್ಷದ ಅಸಲಿ ಸ್ಥಾಪನೆಯನ್ನು ನಿರ್ಧರಿಸಲು ಇದು ಮಾನದಂಡವಾಗಲು ಸಾಧ್ಯವಿಲ್ಲ. ಕಾನ್ಪುರ್ ಸಮ್ಮೇಳನದ ನಂತರ ಕೂಡ ಅಲ್ಲಿ ಸ್ಥಾಪನೆಯಾದ ಪಕ್ಷದ ಘಟಕವು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ನೋಂದಾವಣೆಗೆ ಅರ್ಜಿ ಸಲ್ಲಿಸಲಿಲ್ಲ ಎಂಬುದನ್ನು ಗಮನಿಸಬೇಕು.

ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಲು ವಲಸಿಗ ಸಿಪಿಐ ತನ್ನ ಅನೇಕ ಸದಸ್ಯರುಗಳನ್ನು ಭಾರತಕ್ಕೆ ಕಳಿಸಿತು. ಅವರಲ್ಲಿನ ಅನೇಕರನ್ನು ಪೇಶಾವರ್ ಮತ್ತು ಕಾನ್ಪುರ್ ಪಿತೂರಿ ಪ್ರಕರಣಗಳಲ್ಲಿ ಬಂಧಿಸಿ ಜೈಲಿಗೆ ಕಳಿಸಲಾಯಿತು. ತಾಷ್ಕೆಂಟ್ ಮತ್ತು ಮಾಸ್ಕೋದಲ್ಲಿ ಕಮ್ಯುನಿಸ್ಟರಾದ ಫಿರೋಜುದ್ದಿನ್ ಮತ್ತು ಎಂ.ಎ.ಮಜೀದ್ ಅವರಂತಹ ಕೆಲವು ಮುಹಾಜಿರ್‌ಗಳು ಭಾರತದಲ್ಲಿನ ಪಕ್ಷದಲ್ಲಿ ಪ್ರಮುಖ ಪಾತ್ರ ವಹಿಸಿದರು.

ತಾಷ್ಕೆಂಟಿನಲ್ಲಿ ಸ್ಥಾಪನೆಯಾದ ಭಾರತ ಕಮ್ಯುನಿಸ್ಟ್ ಪಕ್ಷವು ಹೀಗೆ 1925 ರಲ್ಲಿ ಕಾನ್ಪುರದಲ್ಲಿ ನಡೆದ ಕಮ್ಯುನಿಸ್ಟ್ ಸಮ್ಮೇಳನದ ಜತೆ ತಾರ್ಕಿಕವಾದ ಸಂಬಂಧ ಹೊಂದಿದೆ. ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಲ್ಲಿ ತಾಷ್ಕೆಂಟ್ ಮೊದಲ ಹೆಜ್ಜೆಯಾದರೆ, ಕಾನ್ಪುರ್ ಸಮ್ಮೇಳನವು ಪಕ್ಷದ ಬೆಳವಣಿಗೆಯಲ್ಲಿ ನಂತರದ ಹೆಜ್ಜೆ.

ಭಾರತದಲ್ಲಿನ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೆ ಸಹಾಯ ಮಾಡಿದ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಮುಖಂಡ ರಜನಿ ಪಾಮೆ ದತ್



ಮೀರತ್ ಪಿತೂರಿ ಪ್ರಕರಣದಲ್ಲಿನ 33 ಆರೋಪಿಗಳಲ್ಲಿ ಮೂರು ಬ್ರಿಟಿಷ್ ಕಮ್ಯುನಿಸ್ಟರಿದ್ದರು ಎಂಬುದನ್ನು ನಾವು ನೆನೆಯಬೇಕು. ಅವರು ಬೆನ್ ಬ್ರಾಡ್ಲಿ(ಮೇಲಿನ ಫೋಟೋದಲ್ಲಿ ನಿಂತವರಲ್ಲಿ ಎಡದಿಂದ ಐದನೇಯವರು), ಫಿಲಿಪ್ ಸ್ಪ್ರಾಟ್(ಬಲದಿಂದ ಎರಡನೇಯವರು) ಮತ್ತು ಹೆಚ್.ಎಲ್.ಹಚಿನ್ಸನ್(ಎಡದಿಂದ ಮೂರನೇಯವರು).



ಕಾಮ್ರೇಡ್ ಕೆ.ಎಂ. ಶ್ರೀನಿವಾಸ್ ಕಳೆದ ಸೆಪ್ಟೆಂಬರ್ 24 ರಂದು ನಮ್ಮನ್ನು ಅಗಲಿದರು. ಅವರಿಗೆ 90 ವರ್ಷ ವಯಸ್ಸಾಗಿತ್ತು. ಅವರು ಶಿವಮೊಗ್ಗ ಜಿಲ್ಲೆಯ ಹಿರಿಯ ಕಮ್ಯೂನಿಸ್ಟ ನಾಯಕರು. ಅವರು ಹುಟ್ಟಿ ಬೆಳೆದದ್ದು ತೀರ್ಥಹಳ್ಳಿಯಲ್ಲಿ. ಅವರು ತಮ್ಮ ಬದುಕಿನ ಕೊನೆಯ ಕೆಲವು ವರ್ಷಗಳನ್ನು ಶಿವಮೊಗ್ಗದ ಗೋಪಾಲಗೌಡ ಬಡಾವಣೆಯಲ್ಲಿರುವ ಅವರ ಪುತ್ರ ರವಿಯವರ ಮನೆಯಲ್ಲಿ ಕಳೆದರು. ಅವರು ಶಾಂತವೇರಿ ಗೋಪಾಲಗೌಡರ ಜತೆ ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿಯನ್ನು ನಿರಾಕರಿಸಿ ಹೋರಾಟದ ಘನತೆಯನ್ನು ಎತ್ತಿಹಿಡಿದ್ದರು.

ಅವರು ಶಿವಮೊಗ್ಗದ ಸಮಾಜವಾದಿಗಳೊಂದಿಗೆ ಸೇರಿಕೊಳ್ಳಲಿಲ್ಲ. ಬದಲಾಗಿ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಲು ಶ್ರಮಿಸಿದರು. 1964 ರ ನಂತರ ಅವರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ (ಸಿಪಿಐ(ಎಂ)ದ ಜತೆಯಲ್ಲಿ ಗುರುತಿಸಿಕೊಂಡರು. ಕರ್ನಾಟಕ ಪ್ರಾಂತ ರೈತ ಸಂಘದ ಹಿರಿಯ ಮುಖಂಡರಲ್ಲಿ ಅವರೂ ಒಬ್ಬರಾಗಿದ್ದರು. ರೈತರ ಅನೇಕ ಹೋರಾಟಗಳಿಗೆ ಅವರು ನೇತೃತ್ವ ನೀಡಿದ್ದರು. ಚಕ್ರ, ವರಾಹಿ ವಿದ್ಯುತ್ ಯೋಜನೆಗಾಗಿ ಭೂಮಿ ಕಳೆದುಕೊಂಡ ರೈತರನ್ನು ಸಂಘಟಿಸಿ ಮುಳುಗಡೆ ರೈತ ಹೋರಾಟ ಸಮಿತಿ ರಚಿಸಿ ಹೋರಾಡಿದ್ದರು. ಅದಕ್ಕಾಗಿ ಜೈಲು ವಾಸವನ್ನೂ ಅನುಭವಿಸಿದ್ದರು. ಭದ್ರಾವತಿ ವಿಐಎಸ್‌ಎಲ್ ಮತ್ತು ಮೈಸೂರು ಕಾಗದ ಕಾರ್ಖಾನೆಯ ಕಾರ್ಮಿಕ ಮುಖಂಡರಾಗಿ ಹಲವು ವರ್ಷಗಳ ಕಾಲ ಹೋರಾಟ ಮಾಡಿದ್ದರು. ಈ ಬರಹದಲ್ಲಿ **ಡಾ. ರಾಜೇಗೌಡ ಹೊಸಹಳ್ಳಿ** ರವರು ಕಾಮ್ರೇಡ್ **ಕೆಎಂಎಸ್** ರವರ ಕೆಲವು ನೆನಪುಗಳನ್ನು ಅವರ ಮಾತುಗಳಲ್ಲೇ ಹಂಚಿಕೊಂಡಿದ್ದಾರೆ. – ಸಂ.

ಕಾಮ್ರೇಡ್ ಕೆ.ಎಂ. ಶ್ರೀನಿವಾಸ್ ಹೇಳಿದ ನೆನಪುಗಳು

1. ನಾನು ಲಾಯರ್ ಆಗಿ ಅದ್ಯಾಕೆ ಸೇರಿದೆನೋ ಕಾಣೆ! ಮಹಿಷಿ ನರಸಿಂಹಮೂರ್ತಿಗಳ ಶಿವಮೊಗ್ಗ ಆಫೀಸಿನಲ್ಲಿ ಜೂನಿಯರ್ ಲಾಯರ್ ಆಗಿ ಸೇರಿದ್ದೆ. ಅವರು ಕ್ರಿಮಿನಲ್ ಲಾಯರ್. ಮೈದುನನಾದವನು ಅತ್ತಿಗೆ ಜುಟ್ಟು ಕೊಯ್ದಿದ್ದ ಒಂದು ಕೇಸು, ಆಕೆ ದರ್ಜಿ ಹೆಣ್ಣುಮಗಳು. ಮೈದುನನ ಪರ ವಕಾಲತ್ ಹಾಕಿದ್ದ ನಮ್ಮ ಸೀನಿಯರ್ ಲಾಯರು ಇರಲಿಲ್ಲ. "ನೀವೆ ನಡೆಸ್ರಿ' ಅಂತಾ ಜಡ್ ಹೇಳಿದರು. ಸರಿ ವಾದ ಮಂಡಿಸಿದೆ. "ಅಮ್ಮಾ ನೀವು ಓದುವಾಗ. ಕ್ರಾಫ್ ಕಟ್ ಮಾಡಿಸ್ಕೊಳ್ತಾ ಇದ್ರಿ ಅಲ್ಲವೆ!" ಎಂದೆ. ಅವರು ಹೌದು ಅನ್ನಬೇಕೆನ್ನುವಷ್ಟರಲ್ಲಿ ಜಡ್ಜಿಗೆ ಸಿಟ್ಟುಬಂತು. ಏನ್ರೀ! ನೀವೇ ತಲೆ ಕಟ್ ಮಾಡಿಸ್ಕೊಂಡು ಸುಳ್ಳು ಕೇಸು ಹಾಕಿದಿರಿ ಅಂತಾ ಅಲ್ಲವೇ ನಿಮ್ಮ ವಾದ! ಅಂತಾ ಜಡ್ಜು ನನ್ನ ದಬಾಯಿಸಿದರು. ನಾನು ಫೈಲು ಪುಸ್ತಕವೆಲ್ಲ ಟೇಬಲ್ ಮೇಲೆ ಎಸೆದು ನಿಂತುಬಿಟ್ಟೆ. ತಕ್ಷಣ ಅಲ್ಲೆ ಇದ್ದ ಕಲ್ಲಯ್ಯ ಎನ್ನೋ ಕ್ರಿಮಿನಲ್ ಲಾಯರ್ ಬಂದು ಪರಿಸ್ಥಿತಿ ಸುಧಾರಿಸಿದರು ಅನ್ನಿ. ಅವೊತ್ತೆ ನನ್ನ ಲಾಯರ್‌ಗಿರಿ ಮುಗಿತು. ಸಮಾಜಸೇವೆ ಅಂತಾ ಹೊರಟೊನು ಹಿಂದಿರುಗಿ ನೋಡಲಿಲ್ಲ. ಆಗ ಅರಗದ ಸೀಮೆಲಿ ಏನೂ ಇರಲಿಲ್ಲ. ಸಹಕಾರ ಸಂಘ, ವೇರ್‌ಹೌಸ್, ದನದ ಆಸ್ಪತ್ರೆ ಹೈಸ್ಕೂಲು, ಗ್ರಾಮಪಂಚಾಯ್ತಿ, ಕಾರ್ಪೋರೇಷನ್ ಬ್ಯಾಂಕ್, ಟೆಲಿಫೋನ್ ಆಫೀಸುಗಳ ಎಲ್ಲ ತಂದಿವಿ. ಪ್ರಾಂತ ರೈತ ಸಂಘ ಕಟ್ಟಿದಿವಿ. ಇದಕ್ಕೆಲ್ಲಾ ಖಾದರ್‌ಸಾಬ್ ಅನ್ನೋರು ಸಹಾ ಸಹಕಾರ ನೀಡಿದರು. ಇದಿರಲಿ ಆ ನನ್ನ ಹೆತ್ತವ್ವನೇ ಇದಕ್ಕೆಲ್ಲ ಕಾರಣ ಅನ್ನಿ. ನಾನು ಅಪ್ಪನ ಮುಖ ನೋಡೋನ್ ಅಲ್ಲ. ಆಕೆ ಗಂಡನ ಕಳ್ಕೊಂಡವಳು, 19 ಮೊಳದ ಗೊಬ್ಬೆ ಸೀರೆ ಉಟ್ಟು ಗಂಡಸಿಗಿಂತ ಹೆಚ್ಚಾಗಿ ಜಮೀನು ಮನೆ ಮಾಡಿದ್ದಕ್ಕೇ ನಾನು ಇಂಥಾದನ್ನ ಮಾಡೋಕಾಯ್ತು. ಅವಳು ನನ್ನಂತವನನ್ನ ಹೇಗೆ ಸಹಿಸಿದಳೋ ಕಾಣೆ! ಆಕೆಯೋ ದೇವರು.

2) ನಾನು ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಲಿರೋ ಲಾ ಕಾಲೇಜು ಹಾಸ್ಟೆಲಿನಲ್ಲಿದ್ದೆ. 1956ರಲ್ಲಿ ಕೆಂಗಲ್ ಹನುಮಂತಯ್ಯನೋರು, ವಿಧಾನಸೌಧ ಕಟ್ಟಿದ ಕನಸು ನನಸುಗಳಲ್ಲಿ; 'ನಾಳೆ ಉದ್ಘಾಟನೆ' ಎನ್ನುವಾಗ ಅಧಿಕಾರ ಕಳ್ಕೊಂಡು, ಪಶ್ಚಿಮ ದ್ವಾರದ ಕಡೆಯಿಂದ ತಾನು ಕಟ್ಟಿದ ಸೌಧ ಹಿಂದಿರುಗಿ ನೋಡುತ್ತಲೇ; ನಮ್ಮಂತಾ, ನೋಡ್ತಾ ನಿಂತಿದ್ದವರ ಕಡೆಗೆ ಕೈ ಮುಗಿತಾ ಬಕ್ತಾ ಇದ್ರು, ಆತನ ಕಣ್ಣಲ್ಲಿ ನೀರು ಇಳಿತಾ ಇದ್ದು, ಆ ಸನ್ನಿವೇಶ ಬಿಡಿ! ನನ್ನಂತಾ ಕಡುಪಿನ ಮನುಷ್ಯನ ಕಣ್ಣಲ್ಲಿ ಸಹ ನೀರು ಬಂದ್ದು ಅನ್ನಿ. ಮನುಷ್ಯನ ಆಸೆ, ಜಾತಿ ಪ್ರೇಮ ಈ ದೇಶದ ದುರಂತ. ಇದಕ್ಕೆ ಕಡಿದಾಳ್ ಮಂಜಪ್ಪನವರು ಜವಾಬ್ದಾರೊ ಹೌದು.

3) ನನಗೆ ಆಗ ಆಡೋ ವಯಸ್ಸು. ನಮ್ಮ ತೀರ್ಥಳ್ಳಿ–ಆರಗ ಕಡೆ ಮಂಜಪ್ಪ ಅಂತಾ ಒಬ್ಬರು ಮಾಸ್ಟರು ಇದ್ದರು. ಗಾಂಧಿ ಹಿಂದೆ ಬಿದ್ದು ಇರೋ ಕೆಲಸ ಕಳ್ಕೊಂಡು, ಬಹಳ ಬಡತನಕ್ಕೆ ಸಿಕ್ಕಿಬಿದ್ದರು. ಅದಿರಲಿ! ಯಡೂರಲ್ಲಿ ಕಾಂಗ್ರೆಸ್ ಭಾಷಣ ಇಡಿಸಿದ್ದರು. ಅದಕ್ಕೆ ಸಾಹುಕಾರ್ ಶ್ರೀನಿವಾಸ್ ಜೋಯಿಸರನ್ನ ಅಧ್ಯಕ್ಷತೆ ಅಂತಾ ಪ್ರಚಾರ ಮಾಡಿದ್ದು ಇದನ್ನೆಲ್ಲಾ ಪೊಲೀಸಿನೋರು ಹೆಜ್ಜೆಹೆಜ್ಜೆಗೆ ಸುದ್ದಿ ಕೊಡೋ ಕಾಲ. ಇದೆಲ್ಲ ರಾಮಾಯಣ ಯಾಕೆ ಅಂತಾ ಜೋಯಿಸರು ಸಭೆಗೇ ಬರಲಿಲ್ಲ. ನಾನು ಎಂಟುಹತ್ತು ವರ್ಷದ ಹುಡುಗ, ಅಲ್ಲಿ ಅಜ್ಜಿ ಮನೆಗೆ ಹೋದೋನು! ನೋಡ್ತಾ ನಿಂತಿದ್ದೆ. ಮಂಜಪ್ಪನವರು ನನ್ನ ಊರ ಕಡೇರೇ ಹೌದು. ಇನ್ನೇನು ಸಭೆ ಪ್ರಾರಂಭವಾಗಬೇಕು. 'ಹೇ ಶ್ರೀನಿವಾಸ' ಅಂದವರೇ ಅನಾಮತ್ ನನ್ನ ಟೇಬಲ್ ಮೇಲೆ ನಿಲ್ಲಿಸಿ ಭಾಷಣ ಮಾಡು ಅಂದ್ರು. ಸಭೇಲಿ ಈ ಶ್ರೀನಿವಾಸನೇ ಭಾಷಣ ಮಾಡ್ತಾನೆ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಅಂದ್ರು, ಅದೇನು ಮಾಡಿದೆನೋ. ಅದೆಂತ ಹೇಳಿದೆನೋ ಕಾಣೆ.

ನಾನು ನನ್ನೂರಲ್ಲಿ ಆಡ್ತ ಇದ್ದಿವಿ. ಪೊಲೀಸಪ್ಪ ಬಂದು 'ಯಾರು ಶ್ರೀನಿವಾಸ' ಅಂದ. "ಇವನೇ ಇವನೇ' ಅಂತಾ ನನ್ನ ತೋರಿಸಿದರು. ಹೇ ತಮಾಷೆ



ಮಾಡ್ತಿರೇ; ಕಾಂಗ್ರೆಸ್ ಸಭೇಲಿ ಅಧ್ಯಕ್ಷತೆ ವಹಿಸಿದ, ಶ್ರೀನಿವಾಸ ಯಾತ್ರಿ ಅಂದ್ರು. ಪೊಲೀಸಿನವರಿಗೆ ಹೆದರೋ ಕಾಲ ಅಲ್ಲವೇ! ಅಲ್ಲಿ ಪಟ್ಟಮಕ್ಕಿಯವರು ಒಬ್ಬರು ಶ್ರೀನಿವಾಸ ಅಂತಾ ಇದ್ದರು. ಅವರೇ ಶ್ರೀನಿವಾಸ' ಅಂತಾ ಆತನನ್ನು ತೋರಿಸಿದ್ದು, ಏನೂ ಕಾಣದ ಅವನ ಹಿಡ್ಕೊಂಡು ಹೋದರು. ಹೀಗಿತ್ತು ನಾವು ನಮ್ಮ ಸಮಾಜ ಆಗಿನ ಕಾಲದಲ್ಲಿ ಅನ್ನಿ. ಮುಂದೆ 'ಮೈಸೂರ ಚಲೋ ಚಳುವಳಿ' ಇದೇ ಮಂಜಪ್ಪ ಮತ್ತು ನಾನು ಅಲ್ಲದೆ ಇನ್ನು ಎಲ್ಲ ಸೇರಿ ಜಾತಾ ಹೊರಟೆವು. ಕಡೂರು ಬಳಿ ನಮ್ಮನ್ನು ಬಂಧಿಸಿದರು.

4. ಜಯಚಾಮರಾಜ ಒಡೆಯರ ಕಾಲ 1942ರಲ್ಲಿ ತೀರ್ಥಹಳ್ಳಿ ತುಂಗಾನದಿಗೆ ಕಮಾನು ಸೇತುವೆ ಕಟ್ಟಿದ್ದು, ಅದೇ ನಮ್ಮ ಪುಟ್ಟಪ್ಪನವರದ್ದು 'ದೋಣಿಸಾಗಲಿ ಮುಂದೆ ಹೋಗಲಿ' ಅಂತಾ ಬರುತ್ತಲ್ಲಪ್ಪ ಅದೇ ಜಾಗ, ಆಚೆ ಕಾಡಲ್ಲಿ ಮಿಲಿಟರಿ ಕ್ಯಾಂಪಿತ್ತು. ಆಗ ಸ್ವಾತಂತ್ರ್ಯ ಹೋರಾಟದ ಕಾಲ. ಜನಾರ್ಧನ ನಾಯಕರು ಮುಂದಾಳು, ಕಾಳಿಂಗ ರಾಯರು, ಪುಟ್ಟರಾಯರು, ಉಡುಪಿ ಮಂಜಪ್ಪನವರು ಇಂತಹವರೆಲ್ಲ ತೀರ್ಥಹಳ್ಳಿ ಕಡೆ ಹೋರಾಟಗಾರರು. ನನಗೆ . ಇನ್ನು ವಯಸ್ಸು ಆಗಿರಲಿಲ್ಲ. ಅದು ಹೇಗೋ ನನ್ನ ಕಿವಿಗೆ ಕಮಾನು ಸೇತುವೆ ಉಡಾಯಿಸೋ ವಿಚಾರ ಸಿಕ್ಕು, ಓಡೋಗಿ ಇನ್ಸ್‌ಪೆಕ್ಟರ್‌ಗೆ ಹೇಳಿದೆ. ಅದೇನೋ ನನಗೆ ಗೊತ್ತಿಲ್ಲ! ಇಂಥ ಸೇತುವೆ ಒಡೆದರೆ ಹೇಗೆ! ಉಳಿಸಬೇಕು ಅಂತಾ ಮನಸಿಗೆ ಬಂದುಬಿಡು. ಉಳಿತು. * ಜೆ. ಶಾಂತವೇರಿ ಗೋಪಾಲಗೌಡರಿಗಿಂತ ನಾನು ವಯಸ್ಸಿನಲ್ಲಿ ಚಿಕ್ಕೋನು. ಆದರೂ ನಾವಾಗಲೇ ಈಚಲ ಮರ, ಕಡಿಯೋ ಕೆಲಸ, ಟೆಲಿಫೋನ್ ವೈರ್ ಕೀಳೋ ಕೆಲಸ ಇಂಥ ಉಲ್ಲಂಘನೆಗೆ ಕೈಹಾಕಿದ್ದೆವು. ಮುಂದೆ ದೇಶಕ್ಕೆ ಸ್ವತಂತ್ರ ಬಂದ ಮೇಲೆ ಕಾಂಗ್ರೆಸಿನ ಬದರಿ ನಾರಾಯಣ ವಿರುದ್ಧ ಸೋಷಲಿಸ್ಟ್ ಪಾರ್ಟಿಯಿಂದ ಗೋಪಾಲಗೌಡರು ನಿಂತರು. ನಾವು ಊರೂರು ಮೇಲೆ ಪ್ರಚಾರಕ್ಕೆ ನಡ್ಕೊಂತಾ ಹೋಗೋದು; ಅಲ್ಲಿ ಮನೆಮನೇಲಿ ಊಟ ತಿಂಡಿ ಮುಗಿಸೋದು. ಉಂಡವರೇ ವಲ್ಲಿ ಹಾಸಿ ಓಟಿಗೊಂದು ರೂಪಾಯಿನಂತೆ ನೀವು ಓಟು ಹಾಕೋರು ಕೊಡಬೇಕು ಅಂತಾ ಕುಳಿತುಬಿಟ್ಟಿದ್ದಿವಿ. ಅದನ್ನು ಒಟ್ಟು ಹಾಕಿ ಸಾಯಂಕಾಲ ವಲ್ಲಿ ಗಂಟು ಕೊಡವಿ ಗೌಡ್ರ ಖರ್ಚಿಗಂತಾ ಕೊಡೋದು. ಈಗಿನ ರಾಜಕೀಯ ನೋಡಿ! ಅಯ್ಯೋ ದೇವರೇ! ಏನಾಗೋಯ್ತು ಕಾಲ! ನಾನು ರೈತರಪರ ಕಾರ್ಮಿಕರ ಪರ ನಿಂತೋನು! ನಾನು ಕಮ್ಯುನಿಸ್ಟ್ ಪಾರ್ಟಿ ಬದಲಾಯಿಸಿದ್ರೆ ಎಂದೂ ಎಂ.ಎಲ್.ಎ, ಆಗಬಹುದಿತ್ತು. ನಾವು ಸೋವಿ ಅಂತಾನೇ ಸ್ಪರ್ಧೆಗೆ ಇಳಿತಿದ್ದಿವಿ. ಹಾಗೇ ನಾನು ಸೋತಿದ್ದು ಉಂಟು. ಅದು ಸೋಲು ಅಂತಾ ನಾನು ತಿಳಿದೇಯಿಲ್ಲ. –

6) ನಾನೆಂತಾ ಹೋರಾಟಗಾರ ಬಿಡ್ರಿ. ನನ್ನಂಥವರೆಷ್ಟು ಜನ ಈ ದೇಶದಲ್ಲಿಲ್ಲ! ಹಾಂ – ನನ್ನ ಹೋರಾಟದಲ್ಲಿ ನೆನಪುಳಿಯೋ ಅಂತಾದ್ದು – ವರಾಹಿ ಸಂತ್ರಸ್ತರ ಹೋರಾಟ ಸಮಿತಿ', ಅದಕ್ಕೆ ನನ್ನನ್ನ ಅಧ್ಯಕ್ಷ ಅಂತಾ ಮಾಡಿದರು. ಆಗಿನ ಪರಿಸ್ಥಿತಿ ಏನಂತೀರಿ! ಅಡವಿಯೊಳಗಿದ್ದ ಏನೂ ಅರಿಯದ ಜನ. ಸರ್ವೆನಂಬರು ಅಂದರೇನು ಅಂತಲೇ ಗೊತ್ತಿಲ್ಲದೋರು. ಇಂತಾವರನ್ನ ವಕ್ಕಲೆಬ್ಬಿಸೋ ಕಾಲ. ಲಿಂಗನಮಕ್ಕಿ, ಚಕ್ರ, ಸಾವಹಕ್ಲು ಇಲ್ಲೆಲ್ಲ ಏನೆಲ್ಲಾ ಅನಾವುತ ಆಗಿತ್ತು ಅಂತಾ ತಿಳಿದಿತ್ತು. (ಕಾಗೋಡು ಸತ್ಯಾಗ್ರಹ ಆಗಿತ್ತು). ಆಗ ಅಬ್ಬೆಪಾರಿಗಳಾಗಿ ಎಷ್ಟೋ ಜನ ಸತ್ತು ಹೋಗಿದ್ದರು. ಕಾನೂನೇ ಸತ್ತು ಹೋಗಿತ್ತು ಅನ್ನಿ, ವರಾಹಿ ವಿಚಾರ ಹೇಳ್ತಿನಿ ಕೇಳಿ, ಆ ಕಾಡು ಜಗತ್ತಿನ ಬೃಹತ್ ಅಡವಿಯಲ್ಲಿ ಇದೊಂದು. ಆ ಕಾಡು ಕಡಿತಾ ಇದ್ದರೆ ಈಚೆಗೆ ಬಂದ ಹಂದಿಗಳು ಬೆಳ್ಳಗಿದ್ದವು ಅಂತೀನಿ, ಸೂರ್ಯನ ಬೆಳಕೇ ಬೀಳದ ಕಾಡು ಕಡಿದಿದ್ದು 22 ಸಾವಿರ ಹೆಕ್ಟೇರ್ ಕಾಡು. ವಿದ್ಯುತ್ ಅಲ್ಲಿಂದ ಬರೋದು ಅಷ್ಟರಲ್ಲೇ ಇರಲಿ ಬಿಡಿ! ಗೇಣಿ ಕಾಯ್ದೆ ಬಂದ ಸಮಯ. ಸಾಹುಕಾರರಾದ 'ಶೀರಾಳಿಯವರಿಗೋಸ್ಕರ ಈ ಮುಳುಗಡೆ' ಅಂತಾ ನಮಗೇನು ಗೊತ್ತಿಲ್ಲದ ವಿಚಾರ ಆಗಿದ್ದಿಲ್ಲ. ಏನು ಮಾಡೋದು! ದೇವರಾಜ ಅರಸರ ಬಳಿ ರೈತರ ಪರ ನಿಯೋಗ ಹೋದಿವಿ. ಆಯ್ತು ಆಯ್ತು. ನೀವೆಲ್ಲಾ ದೇಶಕ್ಕೆ ತ್ಯಾಗ ಮಾಡಬೇಕ್ರಿ' ಎಂದು ಗುಟುರಿಕೆ ಹಾಕಿ ಕಳುಹಿಸಿದರು.

ಆಮೇಲೆ ಗುಂಡೂರಾವ್ ಬಂದರು. ಮತ್ತೆ ಹೋದಿವಿ. ಎಲ್ಲಾ ಚೀಫ್ ಸೆಕ್ರೆಟರಿ, ಸೀನಿಯರ್ ಆಫೀಸರನ್ನೆಲ್ಲಾ ಹಾಜರಿರಿಸಿದ್ದರು. ನಾನು ವಿಚಾರವೆಲ್ಲಾ ವಿವರವಾಗಿ ಮಂಡಿಸಿದೆ. ಏನೂ ಅರಿಯದ ಕಾಡು ಜನಸ್ವಾಮಿ, ಎಲ್ಲಿಗೆ ಹೋಗೋದು, ಈಗ ನೀವು ನಿಗದಿಪಡಿಸಿರೋ ಹಣದಲ್ಲಿ ಏನು ಸಿಗುತ್ತೆ ಅಂತೆಲ್ಲ ವಾದ ಮಂಡಿಸಿದೆ. ಪಂಚೆವುಟ್ಟ ವಲ್ಲಿ ಹೆಗಲ ಮೇಲೆ ಹಾಕಿದ್ದ ನನ್ನ ದಿರಿಸು ನೋಡಿ; ಇವರು ತಿಳ್ಕೊಂಡಿರೋಂತೆ ಕಾಡ್ತಾರೆ ಅಂದ್ರು. ಅಲ್ಲಿ ಪಕ್ಕದಲ್ಲಿದ್ದ ಕಾಗೋಡು ತಿಮ್ಮಪ್ಪನವರು ನನ್ನ ಚುಟುಕದಲ್ಲಿ ಪರಿಚಯಿಸಿದರು. ಇರಲಿ, ಸಂತೋಷ ಅಂದವರೇ ಎಕರೆಗೆ ಅಡಿಕೆ ತೋಟಕ್ಕೆ 40 ಸಾವಿರ, ಗದ್ದೆಗೆ 17 ಸಾವಿರ, ಮನೆಗೆ ಇಂತಿಷ್ಟು, ಕಡೆಗೆ ಏನೂ ರಿಕಾರ್ಡಿಲ್ಲದ ಜಾಗ, ಮನೆಗೂ ಇಷ್ಟು ಕೊಡಬೇಕು ಅಂತಾ ತೀರ್ಮಾನ ಹೇಳಿಬಿಟ್ಟರು. ಆ ಕಾಲಕ್ಕೆ ಅದು ರೈತರಿಗೆ ದೊಡ್ಡ ಮೊತ್ತ. 'ನಾವು ಹಾರಂಗಿ ಮುಳುಗಡೆಲಿ ಮನೆಮಠ ಕಳ್ಕೊಂಡವರೇ ಹೌದು, ಮುಂದೆ ಏನೂ ಹೇಳಬೇಡಿ; ರೈತರ ಕಷ್ಟ ಏನೂ ಅಂತಾ ಗೊತ್ತು' ಎಂದು ಖಡಾಖಂಡಿತವಾಗಿ ಅಧಿಕಾರಿಗಳಿಗೆ ಹೇಳಿದರು. ಅದೇ ರೀತಿ ಆದೇಶ ಗಳಾದವು. ನಾವು ರೈತರನ್ನ ಒಟ್ಟು ಹಾಕಿದವು. ಹಣಕೊಡದೆ ಜಾಗ ಬಿಡೋರಲ್ಲ ಅಂತಾ ಹೇಳಿ ಚಡೇ ಕೂತಿವಿ. ಮುಳುಗಡೆ ಕಚೇರಿಗಳಿಗೆ ರೈತರ ದನಕರು ಕಟ್ಟಿಸಿದ್ದು ಉಂಟು. ಅನಂತರ ನಮ್ಮ ಅಲಿನ ಹೋರಾಟ ಉಳಿದೆಡೆಗೆ ಒಂದು ಮಾದರಿಯಾದಂತೆ ಆಯಿತು. ಅದಿರಲಿ! ಏನು ಸುಡುಗಾಡು ಸರ್ಕಾರಗಳೇ! ರೈತರ ಗೋಳ ಕೇಳೋರ್ ಇಲ್ಲವಲ್ಲ! ಗುಂಡೂರಾಯನ ಇತಿಹಾಸ ಏನಾದರಿರಲಿ; ಒಂದು ಮನಸ್ಸಿರಬೇಡವೇ! ಆತನಿಗೆ ಆ ಮನಸಿತ್ತು.

7. ಅಯ್ಯೋ ಆಗಿನ ಮಲೆನಾಡು ಏನು ಹೇಳೀರಿ; ಹುಟ್ಟಿದೋರು, ಹೆತ್ತೋರು, ದುಡಿಯೋರು, ಇವೊತ್ತಿದ್ದೋರು ನಾಳೆ ಇರಿಗ್ಲಿಲ್ಲ. ನನಗೆ ಒಂದೆರಡು ವರ್ಷದ ಮಗುನಲ್ಲೆ ಅಪ್ಪ ಸತ್ತೋದರು. ತಾಯಿ ಬೇಸಾಯಕ್ಕೆ ಇಳಿದಳು. ಸಾಕಿದಳು ಓದಿಸಿದಳು. ಆದರೆ ನಾನು ಮನೆಬಿಟ್ಟು ಸಮಾಜಕಾರ್ಯ ಅಂತಾ ಇಳಿದುಬಿಟ್ಟೆ. ಹೀಗೀಗೆ ಅಂತಾ ಒಂದಿನ ಹಂಗಿಸಿಲ್ಲ. ಹೇಗೆ ಸಹಿಸಿಕೊಂಡಿರಬೇಕು. ಮಾತಾಯಿ! ಆಗ ಒಂಥರಾ ಗಾಣಗುದ್ದುಗೆ ಜ್ವರ ಅಂತಾ ಬಂದು ಬಿಡೋದು. ಅದು 1931 ಜಪಾನ್ =ಚೈನಾ ಯುದ್ಧ ಕಾರಣ ಅದೊಂದು ಫ್ಲೂ ತರಾ ಬರಿತ್ತು ಅಂತಾರಪ್ಪಾ! ಅದೆಂತದೋ ಸುಡುಗಾಡು ಅದಿರಲಿ! ನನ್ನಜ್ಜ ಬೊಮ್ಮಗೌಡ ದೊಡ್ಡ ಜಮೀನ್ದಾರು. ಆಗ ವಿಠಲ್ ರಾವ್ ಅನ್ನೋ ಸಾಹುಕಾರ ಜೊತೆ ಬೊಂಬಯಿ ವರೆಗೂ ವ್ಯಾಪಾರ ಮಾಡ್ತಿದ್ದರು. ಆಗ ಸೊಂಟದಲ್ಲಿ ಚಿನ್ನದ ನಾಣ್ಯ ಕಳ್ಕೊಂಡು ಬತ್ತ ಇದ್ದರಂತೆ.

ನಮ್ಮನೆಲಿ ಒಂದು ದೋಣಿ; ಅಂದರೆ ಮುಚ್ಚಿದರೆ ಪೆಟ್ಟಿಗೆ, ಅದೇ ಮಲಗೋ ಮಂಚ ಆಗೋದು. ಅದರೊಳಗೆ ಚಿಕ್ಕದೊಂದು ಪೆಟ್ಟಿಗೇ ಬೀಗಹಾಕಿ ಬಂಗಾರ ಇಟ್ಟಿರಿದ್ದರು. ನಮ್ಮನೆಲಿ ಹೆಗ್ಗಣ ಇಲಿ ಕಾಟ. ನನ್ನ ದೊಡ್ಡಪ್ಪನ ಮಕ್ಕಳೂ ನನ್ನ ವಯಸ್ಸಿನವರೇ ಹೌದು. ಮಲಗ್ತಿದ್ವಿ. ಕರಕರ ಕೊರಕೊರ ಅನ್ನೋ ಶಬ್ದ. ಆಗ ಎದ್ದು ಇಲಿ ಹೆಗ್ಗಣ ಹೊಡೋದು ಇದ್ದೇ ಇತ್ತು. ದಿನಾ ಇದಿತ್ತಲಾ! ಆವೊತ್ತು ಹಿಂಗೇ ಶಬ್ದ ಆಗ್ತಾ ಇತ್ತು. ಹೇ ಸುಮ್ಮನೆ ಬಿಡ್ಕೊಳೋ ಯಾವನು ಏಳನೆ ಅಂತಾ ನನ್ನಣ್ಣ ಹೇಳಿದ. ಬೆಳಗಾದರೆ ನೋಡ್ತಾರೆ! ಮನೆ ಹೆಂಚು ತೆಗೆದವರೆ! ಪೆಟ್ಟಿಗೆ ಖಾಲಿ. ಯಾತ್ಯಾರನ್ನೋ ಪೊಲೀಸಿನವರು ತಂದು ವದೆ ಬಿಟ್ಟಿದ್ದು ಅಷ್ಟೇ ನೆನಪು. ಅದೆಲ್ಲಿ ಸಿಕ್ಕಾತು! ನಾನು ಆಗ ಸಣ್ಣ ಹುಡುಗ ಅನ್ನಿ.

(ಕೃಪೆ: ಹೊಸತು, ಡಿಸೆಂಬರ್ 2019)

ಕಲಬುರಗಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ರಾಷ್ಟ್ರಪತಿಗಳಿಗೆ ಪತ್ರ

1. ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಯಾಕಾಪುರ ಗ್ರಾಮದಲ್ಲಿ ಎಂಟು ವರ್ಷದ ಬಾಲಕಿಯ ಮೇಲಿನ ಅತ್ಯಾಚಾರ ಕೊಲೆ ಖಂಡಿಸಿ
2. ಆಂದ್ರ ಪ್ರದೇಶದ ಪಶು ವೈದ್ಯೆಯ ಮೇಲಿನ ಅತ್ಯಾಚಾರ ಕೊಲೆ ಖಂಡಿಸಿ
3. ದೇಶದಾದ್ಯಂತ ಹೆಚ್ಚುತ್ತಿರುವ ಮಹಿಳೆ, ದಲಿತ, ಬಾಲಕಿಯರ ಮೇಲಿನ ಅತ್ಯಾಚಾರ ಕೊಲೆ ಮತ್ತು ದೌರ್ಜನಯ ಖಂಡಿಸಿ
4. ಕಲಬುರಗಿ ನಗರದ ವಸತಿ ನಿಲಯದಲ್ಲಿ ದುಷ್ಕರ್ಮಿಯೊಬ್ಬ ನಡುರಾತ್ರಿ ನುಗ್ಗಿರುವುದನ್ನು ಹಗುರವಾಗಿ ಪರಿಗಣಿಸಿದ ಸಂಬಂಧಪಟ್ಟ ಅಧಿಕಾರಿಗಳ ಧೋರಣೆ ಖಂಡಿಸಿ
5. ಮೇಲಿನ ಎಲ್ಲ ಪ್ರಕರಣಗಳಿಗೆ ಕಾರಣೀಭೂತವಾದ ಕೇಂದ್ರ ಮತ್ತು ರಾಜ್ಯ ಸರಕಾರದ ಮಹಿಳಾ ಸಂಬಂಧಿ ನಿರ್ಲಕ್ಷ್ಯದ ಧೋರಣೆ ಮತ್ತು ವಿರೋಧದ ಧೋರಣೆ ಖಂಡಿಸಿ ಪ್ರತಿಭಟನಾ ಮೆರವಣಿಗೆ.

ಚಿಂಚೋಳಿ ತಾಲ್ಲೂಕಿನ ಯಾಕಾಪುರ ಗ್ರಾಮದ ಎಂಟು ವರ್ಷ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರಗೈದು ಕೊಲೆ ಮಾಡಿರುವ ದಾರುಣ ಘಟನೆಯನ್ನು ಹಾಗೂ ಆಂದ್ರಪ್ರದೇಶದ ಪಶು ವೈದ್ಯೆಯನ್ನು ನಾಲ್ವರು ದುಷ್ಕರ್ಮಿಗಳು ಅತ್ಯಾಚಾರ ಮಾಡಿ ಸುಟ್ಟು ಹಾಕಿರುವುದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ದೇಶದಾದ್ಯಂತ ಮಹಿಳೆಯರ ಮೇಲೆ ಮಕ್ಕಳ ಮೇಲೆ ಮತ್ತು ದಲಿತರ ಮೇಲೆ ಅತ್ಯಾಚಾರ ಕೊಲೆಗಳು ಹೆಚ್ಚುತ್ತಿವೆ. ಇದು ನಾಗರೀಕ ಸಮಾಜವು ತಲೆ ತಗ್ಗಿಸುವಂತಹದ್ದು. ಸರಕಾರ ಮತ್ತು ಜಿಲ್ಲಾಡಳಿತವು ಕೂಡಲೇ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರ ಮೇಲೆ ಉಗ್ರ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಲು ಸಾಧ್ಯವಾಗಬೇಕು ಎಂದು ಆಗ್ರಹಿಸುತ್ತೇವೆ. ದೇಶದಾದ್ಯಂತ ಹೆಚ್ಚುತ್ತಿರುವ ಅತ್ಯಾಚಾರ ಕೊಲೆ ಪ್ರಕರಣಗಳು ಆಡಳಿತದ ವೈಫಲ್ಯದ ಸೂಚನೆಯಾಗಿದೆ. ಬೇಟಿ ಬಚಾವೊ ಬೇಟಿ ಪಢಾವೊ ಎಂಬುದೊಂದು ಬರಿ ಘೋಷಣೆ ಅಲ್ಲದೆ ಮತ್ತೇನೂ ಅಲ್ಲ. ಬೇಟಿ ಬದುಕಿ ಉಳಿದರೆ ಮಾತ್ರ ಓದುವ ಪ್ರಶ್ನೆ. ಬದುಕಲೇ ಬಿಡುತ್ತಿಲ್ಲ. ಈ ಅತ್ಯಾಚಾರ ಕೊಲೆ ಪ್ರಕರಣಗಳು ಕೇವಲ ಸಾಮಾಜಿಕವಲ್ಲ. ಬದಲಿಗೆ ಇದು ರಾಜಕೀಯ ಸಂಗತಿಯಾಗಿದೆ. ಅಧಿಕಾರದಲ್ಲಿದ್ದವರೇ ಬಹಳಷ್ಟು ಜನ ಅತ್ಯಾಚಾರದ ಆರೋಪಿಗಳಿರುವರು. ಹನಿ ಟ್ರ್ಯಾಪ್ದಂತಹದರಲ್ಲಿರುವವರು ಚುನಾವಣಾ ಅಭ್ಯರ್ಥಿಗಳು. ಆಡಳಿತ ವ್ಯವಸ್ಥೆಯಲ್ಲಿಯೇ ಮಹಿಳಾ ವಿರೋಧಿ ಧೋರಣೆಯು ಹಾಸು ಹೊಕ್ಕಾಗಿದೆ. ಆದ್ದರಿಂದಲೇ ತಳ ಹಂತದಲ್ಲಿ ಇನ್ನೂ ನಿರ್ಭಯವಾಗಿ ಇಂತಹ ಪ್ರಕರಣಗಳು ಹೆಚ್ಚುತ್ತಿವೆ. ಮತ್ತು ಇಂತಹ ಬಾರ್ಬರಿಕ ಕೃತ್ಯಗಳನ್ನು ತಡೆಗಟ್ಟುವಲ್ಲಿ ರಾಜಕೀಯ ಇಚ್ಛೆ ವ್ಯಕ್ತವಾಗುತ್ತಿಲ್ಲ. ಸಮಾಜವು ಇಷ್ಟರ ಮಟ್ಟಿಗೆ ಅನಾಚಾರಕ್ಕೆ ಹೊರಳಿದರೆ ಮಹಿಳೆಯರು ಮಕ್ಕಳು ಸುರಕ್ಷಿತವಾಗಿರಲು ಸಾಧ್ಯವೇ ಇಲ್ಲವಾಗಿದೆ. ನ್ಯಾಯಾಲಯದ ಬಾಗಿಲು ಸಹ ನೊಂದವರಿಗಾಗಿ ಬೇಗ ತೆರೆಯುವುದೇ ಇಲ್ಲ. ತೀವ್ರ ವಿಳಂಬ ಮತ್ತು ಅತ್ಯಂತ ಕಡಿಮೆ ತಪ್ಪಿತಸ್ಥರಿಗೆ ಶಿಕ್ಷೆ, ಶಿಕ್ಷೆಯ ಪ್ರಮಾಣವೂ ಕಡಿಮೆ ಇವೆಲ್ಲವೂ ಸಹ ಇಂತಹ ಪ್ರಕರಣಗಳು ಹೆಚ್ಚಲು ಕಾರಣವಾಗುತ್ತಿವೆ. ಇಡೀ ಸಮಾಜವೇ ಹತಾಶ ಸ್ಥಿತಿಗೆ ತಲುಪುವಂತಾಗಿದೆ. ಇದು ದೇಶದ ಒಟ್ಟೂ ಅಭಿವೃದ್ಧಿಯ ದುಷ್ಪರಿಣಾಮ ಉಂಟಾಗುವುದು. ಉತ್ತರ ಪ್ರದೇಶದ ಉನ್ನಾವು ಪ್ರಕರಣದಲ್ಲಿ ಆರೋಪಿಯಾಗಿರುವ ಬಿಜೆಪಿಯ ಶಾಸಕನೇ ಸಂತ್ರಸ್ಥೆಯನ್ನು ಕೊಲೆ ಮಾಡಲು ಪ್ರಯತ್ನಿಸಿರುವುದನ್ನು ಇಡೀ ದೇಶವೇ ನೋಡಿದೆ. ನಮೋ ಬ್ರಿಗ್ರೇಡ್ ನ ಚಕ್ರವರ್ತಿ ಸೂಲಿಬೆಲೆ ಎಂಬ ಮನುಷ್ಯ ಅತ್ಯಾಚಾರ ಕೊಲೆಯ ಪ್ರಕರಣವನ್ನು ತನ್ನ ಹೇಯ ಕೋಮುವಾದಿ ಅಜೆಂಡಾಕ್ಕೆ ತಕ್ಕಂತೆ ದುಷ್ಪ್ರಚಾರಕ್ಕೆ ಇಳಿದಿದ್ದು ಕ್ರೌರ್ಯದ ಪರಮಾವಧಿಯಾಗಿದೆ. ಇದನ್ನೆಲ್ಲ ತಡೆಗಟ್ಟುವವರು ಯಾರು? ಮಹಿಳೆಯರ ಮಕ್ಕಳ ದಲಿತರ ಮೇಲೆ ಅತ್ಯಾಚಾರ ದೌರ್ಜನ್ಯ ಕೊಲೆಗಳು ನಡೆದಾಗ ಇಡೀ ವಿವೇಕವಂತ ಸಮಾಜವು ಧ್ವನಿ ಎತ್ತಬೇಕಲ್ಲವೆ? ಮತ್ತು ಸರಕಾರಗಳು ಬೇಟಿ ಬಚಾವೊ ಬೇಟಿ ಪಢಾವೊ ಎಂಬ ಪ್ರಚಾರಕ್ಕಾಗಿ ಘೋಷಣೆ ಕೊಡಲು ಮಾತ್ರ ಇವೆಯೇ ಎಂದು ಪ್ರಶ್ನಿಸಬೇಕಿದೆ. ಬೇಟಿಯನ್ನು ಬದುಕಲು ಬಿಡದೇ ಇದ್ದಲ್ಲಿ ಓದುವ ಪ್ರಶ್ನೆ ಎಲ್ಲಿ ಬರುವುದು? ದೇಶದೊಳಗಿನ ಇಂತಹ ಭಯಭೀತ ವಾತಾವರಣವು ತಡೆಗಟ್ಟಲೇಬೇಕಿದೆ. ಎಳೆ ಕಂದಗಳನ್ನು ಬಾಲಕಿಯರನ್ನು ಸಂರಕ್ಷಿಸುವ ಠಾಣಗಳು ಮಾಯವಾಗುತ್ತಿವೆ. ಇದು ತಾಯಂದಿರ ಎದೆಯಲ್ಲಿ ತೀವ್ರ ತಲ್ಲಣ ಆತಂಕ ಹುಟ್ಟುವಂತಾಗಿದೆ. ಈ ಹೊತ್ತಿನಲ್ಲಿ ಸಮಾಜದ ವಿವೇಕವಂತರು ನ್ಯಾಯಕಾಗಿ ಧ್ವನಿ ಎತ್ತಬೇಕಿದೆ. ಇದು ಮಹಿಳೆ ಮಕ್ಕಳು ಮತ್ತು ನೊಂದವರ ಪ್ರಶ್ನೆ ಮಾತ್ರವಲ್ಲ. ಒಟ್ಟು ಸಮಾಜದ ಪ್ರಶ್ನೆಯಾಗಿದೆ. ಆದ್ದರಿಂದ ಹೋರಾಟದ ಮೂಲಕ ಈ ಆಗ್ರಹ ಪತ್ರ ಕೊಡುತ್ತಿದ್ದೇವೆ.

ಆಗ್ರಹಗಳು ಹೀಗಿವೆ.

1. ಆರೋಪಿಗಳಿಗೆ ತ್ವರಿತ ನ್ಯಾಯಾಲಯದ ಮೂಲಕ ಉಗ್ರ ಶಿಕ್ಷೆ ಆಗಬೇಕು.
2. ಜಸ್ಟಿಸ್ ವರ್ಮಾ ಕಮಿಷನ್‌ನ ಶಿಫಾರಸ್ಸುಗಳು ಕೂಡಲೇ ಜಾರಿಯಾಗಬೇಕು.
3. ಜಿಲ್ಲೆಯಲ್ಲಿ ಈವರೆಗೆ ನಡೆದ ಇಂತಹ ಪ್ರಕರಣಗಳ ಕುರಿತು ವಾಸ್ತವದಲ್ಲಿ ಇರುವ ಪರಿಸ್ಥಿತಿಯ ಸಮಗ್ರ ಮಾಹಿತಿಯನ್ನು ಜನತೆಯ ಮುಂದೆ ತರಲು ಆಗ್ರಹ.
4. ಮಹಿಳೆಯರ ಮಕ್ಕಳ ಸಂಪೂರ್ಣ ಸಂರಕ್ಷಣೆ ಕುರಿತಂತೆ ಜಿಲ್ಲಾಡಳಿತವು ಗಂಭೀರ ಕ್ರಮಗಳನ್ನು ಕೈಗೊಳ್ಳಲು ಆಗ್ರಹ.
5. ಶಾಲೆಗಳಲ್ಲಿ ಬಾಲಕಿಯರ ಮೇಲೆ ನಡೆಯುತ್ತಿರುವ ಲೈಂಗಿಕ ಕಿರುಕುಳ ಪತ್ತೆ ಹಚ್ಚಲು ತಡೆಗಟ್ಟಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲು ಆಡಳಿತವು ಮುಂದಾಗಬೇಕು.
6. ಜಿಲ್ಲೆಯ ವಿದ್ಯಾರ್ಥಿನಿಯರ ಎಲ್ಲ ವಸತಿ ನಿಲಯಗಳಲ್ಲಿನ ಸುರಕ್ಷತೆಯ ಪರಿಸ್ಥಿತಿ ಬಲಪಡಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.

ಕೆ ನೀಲಾ, ನಂದಾದೇವಿ ಮಂಗೊಂಡಿ, ಅಮೀನಾ ಬೇಗಂ, ಅಶ್ವಿನಿ ಮದನಕರ್, ಲವಿತ್ರಾ ವಸ್ತ್ರದ, ಡಾ ಪ್ರಭು ಖಾನಾಪುರೆ, ವಿಠಲ ಚಿಕಣಿ.

ಹಾವೇರಿ: ಅತ್ಯಾಚಾರ ಕೊಲೆ ಖಂಡಿಸಿ ಎಸ್‌ಎಫ್‌ಐ – ಡಿವೈಎಫ್‌ಐ ಪ್ರತಿಭಟನೆ ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆಗೆ ಆಗ್ರಹ



ದೇಶವ್ಯಾಪಿ ಹೆಚ್ಚುತ್ತಿರುವ ಅತ್ಯಾಚಾರ, ದೌರ್ಜನ್ಯವನ್ನು ವಿರೋಧಿಸಿ, ಪಶುವೈದ್ಯೆ ಪ್ರಿಯಾಂಕ ರೆಡ್ಡಿ ಹಾಗೂ ಕಲಬುರಗಿ ಜಿಲ್ಲೆಯ ಎರಡನೇ ತರಗತಿ ವಿದ್ಯಾರ್ಥಿನಿಯ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಮತ್ತು ಹತ್ಯೆ ಖಂಡಿಸಿ, ವಿದ್ಯಾರ್ಥಿನಿಯರು–ಮಹಿಳೆಯರಿಗೆ ಸೂಕ್ತ ಭದ್ರತೆ ನೀಡಲು ಆಗ್ರಹಿಸಿ, ಅತ್ಯಾಚಾರಿ ಹಂತಕರಿಗೆ ಕಠಿಣ ಶಿಕ್ಷೆಗೆ ನೀಡಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್‌ಐ) ಹಾವೇರಿ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿ ಯುವಜನರು ನಗರದ ಜಿಎಚ್ ಕಾಲೇಜು ಎದುರು ಪ್ರತಿಭಟನೆ ನಡೆಸಿ, ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ವಿದ್ಯಾರ್ಥಿನಿಯರ ಮತ್ತು ಮಹಿಳೆಯರ ಮೇಲೆ ದಿನನಿತ್ಯ ದೌರ್ಜನ್ಯ, ದಬ್ಬಾಳಿಕೆ ಮತ್ತು ಅತ್ಯಾಚಾರಗಳು ಹೆಚ್ಚಾಗುತ್ತಲೇ ಇವೆ. ಇವುಗಳಿಗೆ ಕಡಿವಾಣ ಹಾಕಬೇಕಾದರೆ ಕಾನೂನುಗಳು ಇನ್ನಷ್ಟು ಬಿಗಿಯಾಗಬೇಕು. ಆ ಮೂಲಕ ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಉಗ್ರಪ್ಪ ವರದಿ ಶಿಫಾರಸ್ಸುಗಳನ್ನು ಮತ್ತು ಕೇಂದ್ರದಲ್ಲಿ ಜಸ್ಟಿಸ್ ವರ್ಮಾ ವರದಿಯು ನೀಡಿರುವ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕು. ರಾಜ್ಯದ ಎಲ್ಲಾ ಶಾಲಾ ಕಾಲೇಜು ಮತ್ತು ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿ ಯನ್ನು ರಚಿಸಬೇಕು. ಜೊತೆಗೆ ಕಡ್ಡಾಯವಾಗಿ ಸಿ.ಸಿ ಟಿ.ವಿ ಅಳವಡಿಕೆ ಮಾಡಬೇಕು ಎಂದರು.

ಎಸ್‌ಎಫ್‌ಐ ಜಿಲ್ಲಾ ಸಹ ಕಾರ್ಯದರ್ಶಿ ಬಸವರಾಜ ಭೋವಿ ಮಾತನಾಡಿ, ಅತ್ಯಾಚಾರಗಳನ್ನು ತಡೆಗಟ್ಟಲು ಸಮಾಜ ಮತ್ತು ಕುಟುಂಬಗಳು ಕೂಡ ಮುತುವರ್ಜಿ ವಹಿಸಬೇಕಿದೆ. ಮನೆಗಳಲ್ಲಿ ಹೆಣ್ಣು ಅಬಲೆ, ನಿಸ್ಸಹಾಯಕ ಎಂಬ ಮನೋಭಾವ ತೊಡೆದು ಹಾಕಿ, ಮಾನಸಿಕವಾಗಿ ದಿಟ್ಟತನದ ಪೋಷಣೆ ಹಾಗೂ ದೈಹಿಕ ಸ್ವರಕ್ಷಣಾ ತರಬೇತಿಗಳನ್ನು ನೀಡಬೇಕು. ಇರುವ ಕಾನೂನುಗಳ ಜಾರಿಗಾಗಿ ನಿರಂತರ ಒತ್ತಾಯ ಮಾಡಬೇಕಿದೆ ಎಂದರು.


ಹೈದರಾಬಾದ್‌ನಲ್ಲಿ ಪ್ರಿಯಾಂಕ ರೆಡ್ಡಿ ಎಂಬ ಹೆಣ್ಣುಮಗಳನ್ನು ಕೆಲವು ದುಷ್ಕರ್ಮಿಗಳು ಹೊತ್ತೊಯ್ದು, ಗ್ಯಾಂಗ್ ರೇಪ್ ಮಾಡಿ ಜೀವಂತವಾಗಿ ಸುಟ್ಟು ಹಾಕಿದ್ದಾರೆ. ಈ ಅಮಾನುಷ ಘಟನೆಯ ಬಗ್ಗೆ ತಿಳಿದ ಬಳಿಕ ಮನುಷ್ಯನೆಂಬ ಪ್ರಾಣಿಯು ತನ್ನಲ್ಲಿರುವ ವಿವೇಚನಾ ಶಕ್ತಿಯನ್ನು ಕಳೆದುಕೊಂಡು ತಲುಪಬಲ್ಲ ವಿಕ್ಷಿಪ್ತತೆಯನ್ನು ನೆನೆದು ನಮ್ಮದೇ ನೆರೆಹೊರೆಯವರನ್ನು ನಂಬಲಾರದಷ್ಟು ಅನುಮಾನ ಮೂಡುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಿಯಾಂಕ ಅವರ ಮೇಲೆ ಅತ್ಯಾಚಾರ ಮಾಡಿ ಜೀವಂತ ಸುಟ್ಟು ಬೂದಿ ಮಾಡಿರುವ ಹಂತಕರಿಗೆ ಹಾಗೂ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಯಾಕಾಪುರ ಗ್ರಾಮದ ಹೊರವಲಯದಲ್ಲಿ ಎರಡನೇ ತರಗತಿಯ (8 ವರ್ಷ) ಬಾಲಕಿ ಮೇಲೆ ಸೋಮವಾರ ಸಂಜೆ ಅತ್ಯಾಚಾರ ಎಸಗಿ, ಬರ್ಬರವಾಗಿ ಹತ್ಯೆಗೈದ ಹಂತಕರಿಗೆ ಕಾನೂನು ಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಎಸ್‌ಎಫ್‌ಐ, ಡಿವೈಎಫ್‌ಐ ಮುಖಂಡರಾದ ಜ್ಯೋತಿ ಪೋಲಿಸಗೌಡ್ರ, ಖುಷಿ, ಕೃಷ್ಣ ಕಡಕೋಳ, ಶ್ರೇಯಾಗೌಡ, ರಕ್ಷಿತಾ, ಪ್ರೀತಿ, ಅಭಿಷೇಕ ಲಮಾಣಿ, ರಾಜು ಲಮಾಣಿ, ಹನುಮಂತ ಎಚ್, ಕನ್ನಪ್ಪ ಬ್ಯಾಡಗಿ, ನೇಹಾ, ಅರ್ಪಿತಾ, ಐಶ್ವರ್ಯ, ವೇಗಾನಂದ, ವೆಂಕಟೇಶ ಅಕ್ಕಸಾಲಿ, ಗಣೇಶ ಭತ್ರದ ವಹಿಸಿದ್ದರು.

ಬಸವರಾಜ ಭೋವಿ

‘ಆಯುಷ್ಮಾನ್ ಭಾರತ’: ಆರೋಗ್ಯ ವಿಮೆಯಿಂದ ಯಾರಿಗೆ ಲಾಭ?



ನವ ಉದಾರ ನೀತಿಗಳ ಅನುಸರಣೆಯ ಅವಧಿಯಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹಾಳುಗೆಡವಿ ಖಾಸಗಿ ಆಸ್ಪತ್ರೆಗಳಿಗೆ ಉತ್ತೇಜನ ಕೊಡಲಾಗಿದೆ. ಈ ನಿಟ್ಟಿನಲ್ಲಿ ಆರೋಗ್ಯ ವಿಮೆಯ ಪರಿಕಲ್ಪನೆ ಪ್ರಚಲಿತಗೊಂಡಿದೆ. ಇದನ್ನು ಹಿಂದಿನ ಕಾಂಗ್ರೆಸ್ ನೇತೃತ್ವದ ಸರಕಾರ ಆರಂಭಿಸಿದ್ದರೂ, ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರಗಳ ಅಡಿಯಲ್ಲಿ ಇದರ ಮೇಲೆಯೇ ಗಮನ ಕೇಂದ್ರೀಕರಿಸಲಾಗಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲಿನ ಒತ್ತನ್ನು ಸಂಪೂರ್ಣವಾಗಿ ಪಲ್ಲಟಗೊಳಿಸಿ ಖಾಸಗಿಯವರನ್ನೇ ಹೆಚ್ಚಾಗಿ ಅವಲಂಬಿಸುವಂತೆ ಮಾಡುವ ಖಾಸಗಿಯವರ ಮೂಲಕದ ಆರೋಗ್ಯ ವಿಮೆಯ ಪ್ರಯೋಜನ ಹೆಚ್ಚು ಸ್ಥಿತಿವಂತ ವಿಭಾಗಗಳಿಗೇ ದೊರೆತಿರುವಂತೆ ಕಾಣುತ್ತದೆ. ಇದರ ಆವಶ್ಯಕತೆ ಹೆಚ್ಚಾಗಿರುವ ಬಡವಿಭಾಗಗಳಿಗೆ ದೊರೆತಿರುವ ಪ್ರಯೋಜನ ನಗಣ್ಯವೆಂದೇ ಅಂಕಿ-ಅಂಶಗಳು ಹೇಳುತ್ತವೆ.

ಕೆ.ಎಂ.ನಾಗರಾಜ್

ಮಾನವ ಹಕ್ಕುಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲು ಮುಖ್ಯವಾಗಿ ಆರೋಗ್ಯ ಒಂದು ಹಕ್ಕು ಎಂದು ಪರಿಗಣಿತವಾದಾಗ ಮಾತ್ರ ಸಾಧ್ಯವಾಗುತ್ತದೆ. ಆದರೆ, ಆರೋಗ್ಯ ಒಂದು ಹಕ್ಕು ಎಂಬುದನ್ನು ನಮ್ಮ ಸಂವಿಧಾನ ಇನ್ನೂ ಒಪ್ಪಿಕೊಂಡಿಲ್ಲ. ಸಂವಿಧಾನದ ಮಾರ್ಗದರ್ಶಿ ತತ್ವಗಳಡಿಯಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಉತ್ತಮಪಡಿಸುವಂತೆ ಸುಪ್ರೀಂ ಕೋರ್ಟಿನ ಆದೇಶಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರ್ಲಕ್ಷಿಸಿವೆ. ಹಣಕಾಸಿನ ತೊಂದರೆಯಿಂದಾಗಿ ಸುಮಾರು ಎಂಟು ಕೋಟಿಯಷ್ಟು ಭಾರತೀಯರು ಕಾಯಿಲೆ ಇದ್ದಾಗಲೂ ಯಾವುದೇ ಔಷಧೋಪಚಾರ ಪಡೆಯುತ್ತಿಲ್ಲ. ಇನ್ನು ಔಷಧೋಪಚಾರ ಪಡೆಯುವವರ ಪರಿಸ್ಥಿತಿಯಂತೂ ಭಯಾನಕವಾಗಿದೆ. ವೈದ್ಯಕೀಯ ಚಿಕಿತ್ಸೆಯ ವೆಚ್ಚ ಹೇಳತೀರದಷ್ಟು ದುಬಾರಿಯಾಗಿದೆ. ಆರೋಗ್ಯ ರಕ್ಷಣೆಗಾಗಿ ಒಂದು ಕುಟುಂಬವು ಮಾಡುವ ಖರ್ಚಿನಲ್ಲಿ 67% ಹಣ ಸಣ್ಣ ಪುಟ್ಟ ಔಷಧೋಪಚಾರ ಮತ್ತು ಇತರ ಕೆಲವು ಖರ್ಚುಗಳಿಗೆ ತಗಲುತ್ತದೆ ಎಂಬುದಾಗಿ ವರದಿಗಳು ತಿಳಿಸುತ್ತವೆ.

ನವ ಉದಾರ ನೀತಿಗಳ ಅನುಸರಣೆಯ ಅವಧಿಯಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹಾಳುಗೆಡವಿ ಖಾಸಗಿ ಆಸ್ಪತ್ರೆಗಳಿಗೆ ಉತ್ತೇಜನ ಕೊಡಲಾಗಿದೆ. ಈ ನಿಟ್ಟಿನಲ್ಲಿ ಆರೋಗ್ಯ ವಿಮೆಯ ಪರಿಕಲ್ಪನೆ ಪ್ರಚಲಿತಗೊಂಡಿದೆ. ಇದನ್ನು ಹಿಂದಿನ ಕಾಂಗ್ರೆಸ್ ನೇತೃತ್ವದ ಸರಕಾರ ಆರಂಭಿಸಿದ್ದರೂ, ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರಗಳ ಅಡಿಯಲ್ಲಿ ಇದರ ಮೇಲೆಯೇ ಗಮನ ಕೇಂದ್ರೀಕರಿಸಲಾಗಿದೆ.

ಮೋದಿ ಸರ್ಕಾರವು ತನ್ನ 2018-19ರ ಬಜೆಟ್‌ನಲ್ಲಿ "ಆಯುಷ್ಮಾನ್ ಭಾರತ" ಎಂಬ ಆರೋಗ್ಯ ವಿಮೆ ಯೋಜನೆಯನ್ನು ಘೋಷಿಸಿತ್ತು. 10 ಕೋಟಿ ಕುಟುಂಬಗಳಿಗೆ (ಅಂದರೆ, ಸುಮಾರು 50 ಕೋಟಿ ಮಂದಿಗೆ) ಐದು ಲಕ್ಷ ರೂಗಳ ವರೆಗಿನ ಆರೋಗ್ಯ ವಿಮೆ ಒದಗಿಸುವ ಈ ಯೋಜನೆಯು ಜಗತ್ತಿನಲ್ಲೇ ಅತಿ ದೊಡ್ಡದು ಎಂದು ಸರ್ಕಾರ ಹೇಳಿಕೊಂಡಿತ್ತು ಮತ್ತು ಅದಕ್ಕಾಗಿ ಬಜೆಟ್‌ನಲ್ಲಿ 2000 ಕೋಟಿ ರೂ ನಿಗದಿಪಡಿಸಿತ್ತು. ವಿಮಾ ಕಂಪೆನಿಗಳ ಮೂಲಕ ಜಾರಿಯಾಗುವ ಈ ಯೋಜನೆಗೆ ಫಲಾನುಭವಿಗಳ ಸಂಖ್ಯೆಯ ಆಧಾರದ ಮೇಲೆ ಸರ್ಕಾರವು ಪ್ರೀಮಿಯಂ ತೆರಬೇಕಾಗುತ್ತದೆ. ಹಾಗಾಗಿ, ಸರ್ಕಾರ ನಿಗದಿಪಡಿಸಿದ 2000 ಕೋಟಿ ರೂ ಗಳಲ್ಲಿ 50 ಕೋಟಿ ಮಂದಿಗೆ ಪ್ರೀಮಿಯಂ ಲೆಕ್ಕದಲ್ಲಿ ಒದಗುವ ಹಣ ತಲಾ 40 ರೂಗಳಾಗುತ್ತದೆ. ಈ ಒಂದು ಅಂಶವೇ ಜಗತ್ತಿನಲ್ಲೇ ಅತಿ ದೊಡ್ಡ ಆರೋಗ್ಯ ವಿಮೆಯ ನಿಜ ಸ್ವರೂಪವನ್ನು ಬಯಲು ಮಾಡಿತ್ತು. ಆದರೂ, ಬಿಜೆಪಿಯು 2019ರ ಚುನಾವಣೆಯಲ್ಲಿ ‘ಆಯುಷ್ಮಾನ್ ಭಾರತ’ ಯೋಜನೆಯನ್ನು ಪ್ರಚಾರಕ್ಕೆ ಬಳಸಿಕೊಂಡಿತ್ತು. ಎರಡನೆಯ ಬಾರಿಗೆ ಅಧಿಕಾರಕ್ಕೆ ಬಂದ ನಂತರವೂ ಮೋದಿ ಸರ್ಕಾರವು 2019-20ರ ಬಜೆಟ್‌ನಲ್ಲಿ ಈ ಯೋಜನೆಗೆ 6400 ಕೋಟಿ ರೂ ನಿಗದಿಪಡಿಸಿದೆ. ಹಾಗಾಗಿ, ಈ ಯೋಜನೆಯು ಅದೆಷ್ಟು ಟೊಳ್ಳು ಎಂಬುದನ್ನು ಅರ್ಥಮಾಡಿಕೊಳ್ಳಲು ಹಿಂದಿನ ಸರ್ಕಾರಗಳು (ರಾಜ್ಯ ಮತ್ತು ಕೇಂದ್ರ ಸರ್ಕಾರಗಳು) ಜಾರಿಗೊಳಿಸಿದ್ದ ಆರೋಗ್ಯ ವಿಮಾ ಯೋಜನೆಗಳನ್ನು ಅವಲೋಕಿಸಬೇಕಾಗುತ್ತದೆ.

2002ರಲ್ಲಿ ಕರ್ನಾಟಕ ಸರ್ಕಾರವು ‘ಯಶಸ್ವಿನಿ’ ಎಂಬ ಒಂದು ಆರೋಗ್ಯ ವಿಮೆಯನ್ನು ಜಾರಿಗೊಳಿಸಿತ್ತು. ಆರಂಭದಲ್ಲಿ, ಗ್ರಾಮೀಣ ಪ್ರದೇಶದ ಸಹಕಾರಿ ಸಂಘಗಳ ಸದಸ್ಯರಿಗೆ ಮಾತ್ರ ಸೀಮಿತಗೊಂಡಿದ್ದ ಈ ಕಿರು ಯೋಜನೆಯು ಸದಸ್ಯರಿಂದ ತಿಂಗಳಿಗೆ ತಲಾ ಐದು ರೂ ವಂತಿಕೆಯ ಮೂಲಕ ಸ್ವತಃ ಹಣ ಒದಗಿಸಿಕೊಳ್ಳುತ್ತಿತ್ತು. ಹೃದಯ ಸಂಬಂಧಿ ಮತ್ತು ಇತರ ಕೆಲವು ಶಸ್ತ್ರ ಚಿಕಿತ್ಸೆಗಳಿಗೆ ಗುರುತಿಸಿದ ಕೆಲವು ಆಸ್ಪತ್ರೆಗಳ ಮೂಲಕ ನಗದುರಹಿತ ಸೌಲಭ್ಯ ಒದಗಿಸಿತ್ತು. ಈಚೆಗೆ, ಎರಡು ಲಕ್ಷದ ವರೆಗಿನ ವಿಮೆಯೊಂದಿಗೆ ವಾರ್ಷಿಕ ಪ್ರೀಮಿಯಂ ಮೊತ್ತವನ್ನು ಗ್ರಾಮೀಣದವರಿಗೆ 600ರೂ ಮತ್ತು ಪಟ್ಟಣದವರಿಗೆ 710 ರೂ ಏರಿಸಲಾಗಿದೆ ಮತ್ತು ಅನೇಕ ಆಸ್ಪತ್ರೆಗಳು ಮತ್ತು ಸುಮಾರು ಎಲ್ಲ ಶಸ್ತ್ರ ಚಿಕಿತ್ಸೆಗಳೂ ಯೋಜನೆಗೆ ಸೇರ್ಪಡೆಯಾಗಿವೆ. ಈ ನಡುವೆ, ಕರ್ನಾಟಕ ಸರ್ಕಾರವು ಯಶಸ್ವಿನಿ, ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ, ವಾಜಪೇಯಿ ಆರೋಗ್ಯ ಶ್ರೀ, ರಾಜೀವ್ ಆರೋಗ್ಯಭಾಗ್ಯ ಮುಂತಾದ ಎಲ್ಲ ಯೋಜನೆಗಳನ್ನೂ ಸೇರಿಸಿ "ಆರೋಗ್ಯ ಕರ್ನಾಟಕ" ಎಂಬ ಹೆಸರಿನ ಯೋಜನೆಯು ಗೊಂದಲದ ಗೂಡಾಗಿತ್ತು. ಆಯುಷ್ಮಾನ್ ಭಾರತ ಯೋಜನೆಯನ್ನು ಒಪ್ಪಿಕೊಳ್ಳಲಾಗದ ಪರಿಸ್ಥಿತಿಯಲ್ಲಿ, ಹಿಂದಿನ ಮತ್ತು ಇಂದಿನ ಮುಖ್ಯ ಮಂತ್ರಿ, ಇಬ್ಬರೂ, ಹಳೆಯ ಯಶಸ್ವಿನಿ ಯೋಜನೆಯನ್ನೇ ಜಾರಿಗೊಳಿಸುವುದಾಗಿ ಹೇಳಿದ್ದಾರೆ.

ಯುಪಿಎ ಸರ್ಕಾರವು "ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್" ಅಡಿಯಲ್ಲಿ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ, ಜನನಿ ಸುರಕ್ಷಾ ಮುಂತಾದ ಯೋಜನೆಗಳ ಜೊತೆಗೆ "ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ" ಎಂಬ ಒಂದು ಆರೋಗ್ಯ ವಿಮೆಯನ್ನು ಜಾರಿಗೊಳಿಸಿತ್ತು. ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ 30 ಸಾವಿರ ರೂ ವರೆಗಿನ ವಾರ್ಷಿಕ ಒಳ-ರೋಗಿ ಚಿಕಿತ್ಸೆಯನ್ನು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ಕಲ್ಪಿಸಲಾಗಿತ್ತು. ಈ ಯೋಜನೆಯನ್ನೇ ಮುಂದುವರೆಸಿದರೂ, ಅದೊಂದು ತನ್ನ ಹೊಸ ಯೋಜನೆಯೆಂಬಂತೆ ಪ್ರಸ್ತುತಪಡಿಸುತ್ತ ಮೋದಿ ಸರ್ಕಾರವು 2016-17ರ ಬಜೆಟ್‌ನಲ್ಲಿ, ಬಡ ಕುಟುಂಬಗಳಿಗೆ ಒಂದು ಲಕ್ಷ ರೂ ವರೆಗಿನ ಒಳ-ರೋಗಿ ಚಿಕಿತ್ಸೆಯನ್ನು ಮತ್ತು ಹಿರಿಯ ನಾಗರಿಕರಿಗೆ 30 ಸಾವಿರ ರೂ ಅಧಿಕವಾಗಿ ಒದಗಿಸುವುದಾಗಿ ಹೇಳಿತ್ತು. ಆದರೆ, ಈ ಯೋಜನೆ ಅನುಷ್ಠಾನಗೊಳ್ಳಲೇ ಇಲ್ಲ. ಬದಲಿಗೆ, ಮೂಗಿಗೆ ತುಪ್ಪ ಸವರುವ ಆಯುಷ್ಮಾನ್ ಭಾರತ ಯೋಜನೆಯ ಘೋಷಣೆಯಾಗಿದೆ.

ವಿಮೆಗೆ ಸಂಬಂಧಿಸಿದ ಅಂಕಿ-ಅಂಶಗಳ ಲೆಕ್ಕ ಹಾಕುವ ತಜ್ಞರ ಪ್ರಕಾರ, 50 ಕೋಟಿ ಮಂದಿಗೆ ಐದು ಲಕ್ಷ ರೂಗಳ ವರೆಗಿನ ಆರೋಗ್ಯ ವಿಮೆ ಒದಗಿಸುವ ಆಯುಷ್ಮಾನ್ ಭಾರತ ಯೋಜನೆಯ ತಲಾ ವಾರ್ಷಿಕ ಪ್ರೀಮಿಯಂ ಕನಿಷ್ಠ ಐದು ಸಾವಿರ ರೂ ಆಗುತ್ತದೆ. ಅಂದರೆ, ಸರ್ಕಾರವು ಒಂದು ಲಕ್ಷದ ಇಪ್ಪತ್ತೈದು ಸಾವಿರ ಕೋಟಿ ರೂಗಳಷ್ಟು ಪ್ರೀಮಿಯಂ ತೆರಬೇಕಾಗುತ್ತದೆ. ಆದರೆ, ಈ ಬಾಬ್ತು ಮೋದಿ ಸರ್ಕಾರವು 2019-20ರ ಬಜೆಟ್‌ನಲ್ಲಿ ತೆಗೆದಿಟ್ಟಿರುವ ಹಣ ಕೇವಲ 6,400 ಕೋಟಿ ರೂ. ಇದು ಮೋದಿ ಸರ್ಕಾರದ ಮಾತಿಗೂ ಮತ್ತು ಕೃತಿಗೂ ಇರುವ ಅಂತರವನ್ನು ತೋರಿಸುತ್ತದೆ.

ವಾಸ್ತವವಾಗಿ ಇದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲಿನ ಒತ್ತನ್ನು ಸಂಪೂರ್ಣವಾಗಿ ಪಲ್ಲಟಗೊಳಿಸಿ ಖಾಸಗಿಯವರನ್ನೇ ಹೆಚ್ಚಾಗಿ ಅವಲಂಬಿಸುವಂತೆ ಮಾಡುವ ಯೋಜನೆಯೇ ಆಗಿದೆ. ಖಾಸಗಿಯವರ ಮೂಲಕ ಆರೋಗ್ಯ ವಿಮೆಯ ಮೇಲೆ ಹೆಚ್ಚಿನ ಒತ್ತು ನೀಡುವ ಇಂತಹ ಯೋಜನೆಗಳಿಂದ ನಿಜವಾಗಿ ‘ಯಾರಿಗೆ ಲಾಭ’ ಎಂಬುದನ್ನು ಅಧ್ಯಯನ ಮಾಡುತ್ತಿರುವ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಅಂಕುರ್ ವರ್ಮ ಪ್ರಕಾರ (Who Benefits from the Govt Funded Health Insurance?, ನ್ಯೂಸ್‌ಕ್ಲಿಕ್, ಡಿಸೆಂಬರ್ 3, 2019) 2014ರಿಂದ 2018ರ ಅವಧಿಯಲ್ಲಿ ಆರೋಗ್ಯ ವಿಮೆಗೆ ಒಳಪಟ್ಟವರ ಪ್ರಮಾಣವೇನೂ ಹೆಚ್ಚಿಲ್ಲ. ವಿಮಾಯೋಜನೆಯನ್ನು ಸಾರ್ವತ್ರಿಕಗೊಳಿಸಿರುವ ರಾಜ್ಯಗಳಲ್ಲಿ ಮಾತ್ರವೇ ಆರೋಗ್ಯ ವಿಮೆಯ ಫಲಾನುಭವಿಗಳ ಸಂಖ್ಯೆ ಗಮನಾರ್ಹ ಪ್ರಮಾಣದಲ್ಲಿ ಇರುವುದು. ಈ ಆರೋಗ್ಯ ವಿಮೆಯ ಪ್ರಯೋಜನ ಕೂಡ ಹೆಚ್ಚು ಸ್ಥಿತಿವಂತ ವಿಭಾಗಗಳಿಗೇ ದೊರೆತಿರುವಂತೆ ಕಾಣುತ್ತದೆ. ಇದರ ಆವಶ್ಯಕತೆ ಹೆಚ್ಚಾಗಿರುವ ಬಡವಿಭಾಗಗಳಿಗೆ ದೊರೆತಿರುವ ಪ್ರಯೋಜನ ನಗಣ್ಯವೆಂದೇ ಹೇಳಬಹುದು.

ಅಂಕುರ್‌ವರ್ಮ ತಮ್ಮ ಲೇಖನದಲ್ಲಿ ಹೋಲಿಸಿರುವ 75ನೇ ಸುತ್ತಿನ ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ 71ನೇ ಮತ್ತು 75ನೇ ಸುತ್ತಿನ ಮಾಹಿತಿಗಳು ಕುತೂಹಲಕಾರಿಯಾಗಿವೆ. ಜುಲೈ 2017 ಮತ್ತು ಜೂನ್ 2018ರ ನಡುವೆ, ಎನ್‌ಎಸ್‌ಎಸ್‌ಓ ನಡೆಸಿದ 75ನೇ ಸುತ್ತಿನ ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ಭಾಗವಾಗಿ, ಆರೋಗ್ಯ ಸಂಬಂಧವಾಗಿ ಕುಟುಂಬಗಳು ಮಾಡುವ ಖರ್ಚಿನ ವಿವರಗಳನ್ನು ಸಂಗ್ರಹಿಸಿದ ವರದಿಯನ್ನು ನವೆಂಬರ್ 24ರಂದು ಬಿಡುಗಡೆ ಮಾಡಿದೆ. ಇದೇ ಸರ್ವೆಯನ್ನು ಹಿಂದೆ 2014ರ 71ನೇ ಸುತ್ತಿನ ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ಭಾಗವಾಗಿ ಮಾಡಲಾಗಿತ್ತು.

75ನೇ ಸುತ್ತಿನ ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ಪ್ರಕಾರ, 2017-18ರಲ್ಲಿ, 85.9% ಗ್ರಾಮೀಣ ಜನತೆ ಮತ್ತು 82% ನಗರವಾಸಿಗಳು ಯಾವುದೇ ಆರೋಗ್ಯ ವಿಮೆಗೆ ಒಳಪಟ್ಟಿರಲಿಲ್ಲ. ವಿಮೆಗೆ ಒಳಪಡದವರ ಸಂಖ್ಯೆ 2014ರ ಸರ್ವೆಯಲ್ಲಿಯೂ ಇಷ್ಟೇ ಇತ್ತು ಮತ್ತು ಈ ನಾಲ್ಕು ವರ್ಷಗಳ ಅವಧಿಯಲ್ಲಿ ಆರೋಗ್ಯ ವಿಮೆಗೆ ಒಳಪಟ್ಟವರ ಸಂಖ್ಯೆಯು ನಗರಗಳಲ್ಲಿ ಮಾತ್ರ ಕೇವಲ 1.1% ಹೆಚ್ಚಿದೆ.

ವಿಮೆಗೆ ಒಳಪಟ್ಟವರಲ್ಲಿ ಬಹುತೇಕ ಎಲ್ಲರೂ ಸರ್ಕಾರ-ಪ್ರಾಯೋಜಿತ ವಿಮೆಗೊಳಪಟ್ಟಿದ್ದಾರೆ (ಕೋಷ್ಟಕ-1). ಗ್ರಾಮೀಣದಲ್ಲಿ, 0.2% ಮಂದಿ ಆರೋಗ್ಯ ವಿಮೆಯನ್ನು ತಾವೇ ಒದಗಿಸಿಕೊಂಡಿದ್ದಾರೆ ಮತ್ತು 0.3% ಮಂದಿ ಖಾಸಗಿ ಉದ್ಯೋಗದಾತರು ಒದಗಿಸಿದ ವಿಮೆಗೊಳಪಟ್ಟಿದ್ದಾರೆ. ನಗರಗಳಲ್ಲಿ, 3.8% ಮಂದಿ ಆರೋಗ್ಯ ವಿಮೆಯನ್ನು ತಾವೇ ಒದಗಿಸಿಕೊಂಡಿದ್ದಾರೆ ಮತ್ತು ಕೇವಲ 2.9% ಮಂದಿ ಖಾಸಗಿ ಉದ್ಯೋಗದಾತರು ಒದಗಿಸಿದ ವಿಮೆಗೊಳಪಟ್ಟಿದ್ದಾರೆ.

ಆರೋಗ್ಯ ವಿಮೆಗೊಳಪಟ್ಟವರ ಸಂಖ್ಯೆ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ. ಆಂಧ್ರ, ತೆಲಂಗಾಣ, ಕೇರಳ ಮತ್ತು ಛತ್ತೀಸ್‌ಘಡ ರಾಜ್ಯಗಳಲ್ಲಿ, ರಾಜ್ಯ ಸರ್ಕಾರಗಳು

ಪುಟ 14 ಕ್ಕೆ

ಕೋಷ್ಟಕ – 1
2014 ಮತ್ತು 2018ರಲ್ಲಿ ಬೇರೆ ಬೇರೆ ಮಾದರಿಯ ಆರೋಗ್ಯ ವಿಮಾ ಯೋಜನೆ ಬಳಸಿಕೊಂಡ ವ್ಯಕ್ತಿಗಳ ಶೇಖಡಾವಾರು

ಆರೋಗ್ಯ ವಿಮೆಯ ಮಾದರಿ	71ನೇ ಸುತ್ತು 2014ರಲ್ಲಿ	75ನೇ ಸುತ್ತು 2017–18ರಲ್ಲಿ
ಗ್ರಾಮೀಣ ಪ್ರದೇಶ		
ಸರ್ಕಾರ ಒದಗಿಸಿದ ಆರೋಗ್ಯ ವಿಮಾ ಯೋಜನೆ ಬಳಸಿಕೊಂಡವರು	13.1	13.5
ಖಾಸಗಿ ಉದ್ಯೋಗದಾತರು ಒದಗಿಸಿದ ವಿಮಾ ಯೋಜನೆ ಬಳಸಿಕೊಂಡವರು	0.6	0.3
ತಾವೇ ಒದಗಿಸಿಕೊಂಡ ಆರೋಗ್ಯ ವಿಮಾ ಯೋಜನೆಯನ್ನು ಬಳಸಿಕೊಂಡ ಕುಟುಂಬಗಳು	0.3	0.2
ಇತರೆ	0.1	0.1
ಯಾವುದೇ ಆರೋಗ್ಯ ವಿಮೆಗೆ ಒಳಪಡದವರು	85.9	85.9
ನಗರ ಪ್ರದೇಶ		
ಸರ್ಕಾರ ಒದಗಿಸಿದ ಆರೋಗ್ಯ ವಿಮಾ ಯೋಜನೆ ಬಳಸಿಕೊಂಡವರು	12	12.2
ಖಾಸಗಿ ಉದ್ಯೋಗದಾತರು ಒದಗಿಸಿದ ವಿಮಾ ಯೋಜನೆ ಬಳಸಿಕೊಂಡವರು	2.4	2.9
ತಾವೇ ಒದಗಿಸಿಕೊಂಡ ಆರೋಗ್ಯ ವಿಮಾ ಯೋಜನೆಯನ್ನು ಬಳಸಿಕೊಂಡ ಕುಟುಂಬಗಳು	3.5	3.8
ಇತರೆ	0.2	0.2
ಯಾವುದೇ ಆರೋಗ್ಯ ವಿಮೆಗೆ ಒಳಪಡದವರು	82	80.9

ಕೋಷ್ಟಕ – 2
2018ರಲ್ಲಿ ಆರೋಗ್ಯ ವಿಮೆಗೊಳಗಾದ ಕುಟುಂಬಗಳ ಅನುಪಾತ
(ಕುಟುಂಬಗಳ ವೆಚ್ಚವನ್ನು ಆಧರಿಸಿ ಅವುಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಲಾಗಿದೆ)

ಕುಟುಂಬಗಳ ಐದು ಗುಂಪುಗಳು	ಸರ್ಕಾರದ ಆರೋಗ್ಯ ವಿಮೆಬಳಸಿಕೊಂಡವರು		ಒಂದು ಆರೋಗ್ಯ ವಿಮೆಗೆ ಒಳಪಟ್ಟವರು	
	ಗ್ರಾಮೀಣ	ನಗರ	ಗ್ರಾಮೀಣ	ನಗರ
ಶೇ.20 ತಳಮಟ್ಟದ ಬಡ ಕುಟುಂಬಗಳು	10.1	8.1	10.2	9.8
ಶೇ.20 ತಳಮಟ್ಟದ ಮೇಲಿನ ಕುಟುಂಬಗಳು(20–40)	9.2	11.9	9.4	14.0
ಮಧ್ಯಮ ಮಟ್ಟದ ಶೇ.20 ಕುಟುಂಬಗಳು(40–60)	12.5	14.2	12.9	18.2
ಶೇ.20 ಶ್ರೀಮಂತ ಕುಟುಂಬಗಳು (60–80)	15.4	13.2	16.0	20.4
ಶೇ.20 ಅತಿ ಶ್ರೀಮಂತ ಕುಟುಂಬಗಳು	20.0	13.5	21.9	33.0

ಕೋಷ್ಟಕ – 3
ಆಸ್ಪತ್ರೆಗೆ ಸೇರಿದ್ದಾಗ ಮಾಡಿದ ಖರ್ಚಿನಲ್ಲಿ ಶೇ. ಎಷ್ಟು ಮಂದಿ ಮರಳಿ ಹಣ ಪಡೆದರು ಮತ್ತು ಅದರ ಮೊತ್ತ ವೆಷ್ಟು

ವೆಚ್ಚ ಮರಳಿ ಪಡೆದವರು%	ಮರಳಿ ಪಡೆದ ಸರಾಸರಿ ಮೊತ್ತ	ವೆಚ್ಚ ಮರಳಿ ಪಡೆದವರು%	ಮರಳಿ ಪಡೆದ ಸರಾಸರಿ ಮೊತ್ತ
ಗ್ರಾಮೀಣ		ನಗರ	
1.6	279	1.5	562
1.1	211	3.4	1467
1.9	417	5.5	2527
2.2	705	7.8	4030
4.0	1373	21.8	12000

ಸಂತ್ರಸ್ತೆಯರ ಕೊಲೆ, ಸುಟ್ಟು ಹಾಕುವ ಪ್ರಯತ್ನ ಮತ್ತು ಆರೋಪಿಗಳ 'ಎನ್‌ಕೌಂಟರ್' ನ್ಯಾಯದಾನ ವ್ಯವಸ್ಥೆಯ ಸಂಪೂರ್ಣ ವಿಫಲತೆಯನ್ನು ಪ್ರದರ್ಶಿಸುತ್ತಿದೆ- ಎಐಡಿಡಬ್ಲ್ಯುಎ

ಮಹಿಳೆಯರ ಮೇಲಿನ ಇತ್ತೀಚಿನ ಅತ್ಯಾಚಾರ ಮತ್ತು ಕೊಲೆ, ಕೊಲೆಯ ಪ್ರಯತ್ನದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೋಲೀಸರ ಕ್ರಿಯೆ ಮತ್ತು ನಿಷ್ಕ್ರಿಯೆ, ಆಡಳಿತ ವ್ಯವಸ್ಥೆಯ ಹಾಗೂ ನ್ಯಾಯ ವ್ಯವಸ್ಥೆಯ ಸಂಪೂರ್ಣ ವೈಫಲ್ಯವನ್ನು ಪ್ರದರ್ಶಿಸುತ್ತಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಖಂಡಿಸಿದೆ. ಧೈರ್ಯ ಮಾಡಿ ದೂರು ದಾಖಲಿಸಿದ ಉತ್ತರ ಪ್ರದೇಶದ ಉನ್ನಾವ್ ನ ಅತ್ಯಾಚಾರ ಸಂತ್ರಸ್ತೆಯನ್ನು ಕೊಲೆ ಮಾಡುವ ಪ್ರಯತ್ನ ನಡೆದಿದೆ. ಹಾಗೆಯೇ ಎರಡನೇ ಪ್ರಕರಣದ ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದು ಸಂತ್ರಸ್ತೆಯ ಮೇಲೆ ಆಸಿಡ್ ಸುರಿದು ಕೊಲೆಗೆ ಯತ್ನಿಸಿದ ಘಟನೆಯೂ ವರದಿಯಾಗಿದೆ ಅಲ್ಲಿ ಸಾಕ್ಷಿಯೂ ಆದ ಸಂತ್ರಸ್ತೆಯ ರಕ್ಷಣೆ ಮಾಡುವಲ್ಲಿ ಪೋಲೀಸರು ವಿಫಲರಾಗಿದ್ದಾರೆ.

ಈಗ ತೆಲಂಗಾಣದಲ್ಲಿ ನಡೆದ ಅತ್ಯಂತ ಹೇಯ ಅತ್ಯಾಚಾರ ಮತ್ತು ಸಜೀವ ದಹನದ ಪ್ರಕರಣದ ಎಲ್ಲ 4 ಆರೋಪಿಗಳನ್ನು ವಿಚಾರಣೆ ಮತ್ತು ನ್ಯಾಯಾಲಯದ ಕಲಾಪಗಳು ಪ್ರಾರಂಭವಾಗುವ ಮುನ್ನವೇ ಪೋಲೀಸ್ ಎನ್‌ಕೌಂಟರ್‌ನಲ್ಲಿ ಸಾಯಿಸಲಾಗಿದೆ. ಪ್ರಾರಂಭದಲ್ಲಿಯೇ ವೈದ್ಯೆ ಕಾಣೆಯಾಗಿದ್ದಾರೆ ಎಂದ ದೂರು ಬಂದಾಗಲೇ ಸ್ವೀಕರಿಸಲು ತಕರಾರು ಮಾಡಿದ್ದರು ಪೋಲೀಸರು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು. ಒಂದೆಡೆ ಸಮಾಜದ 'ಪ್ರತಿಷ್ಠಿತ' ವಲಯದಿಂದ ಆರೋಪಿಗಳನ್ನು ಹೊಡೆದು ಸಾಯಿಸಬೇಕು ಎಂಬ ಕೂಗು, ಇನ್ನೊಂದೆಡೆ ಕಾನೂನಿನ ಕೆಲಸಗಳು ಪ್ರಾರಂಭವಾಗುವ ಮೊದಲೇ ಆರೋಪಿಗಳನ್ನೇ ಮುಗಿಸಿಬಿಟ್ಟಿದ್ದು, ಆ ಮೂಲಕ ಕಪಟತನದಿಂದ ವ್ಯವಸ್ಥೆಯ ದೋಷ ವೈಫಲ್ಯಗಳನ್ನು ಮುಚ್ಚಿಕೊಳ್ಳಲು, ಹಾಗೂ ಜನರ ಆಕ್ರೋಶದ ದಿಕ್ಕು ತಪ್ಪಿಸುವುದೇ ಉದ್ದೇಶವಾಗಿದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಇದೇ ಮುಂದುವರೆದರೆ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ, ವಿಕೃತಿಗಳು ಹಾಗೂ ಶಿಕ್ಷೆಯ ಪ್ರಮಾಣದ ಇಳಿಕೆಯಲ್ಲಿ ಯಾವುದೇ ಬದಲಾವಣೆ ಕಾಣುವುದು ಸಾಧ್ಯವಿಲ್ಲ. ಆದ್ದರಿಂದ ನಾವು ನ್ಯಾಯದಾನ ವ್ಯವಸ್ಥೆಯಲ್ಲಿ ತೀವ್ರ ಸುಧಾರಣೆಯನ್ನು ಮತ್ತು ಅತ್ಯಾಚಾರ ಸಂತ್ರಸ್ತರಿಗೆ ಸೂಕ್ತ ರಕ್ಷಣೆಯನ್ನು ಒದಗಿಸಬೇಕು ಅಲ್ಲದೇ ಇಂಥಹ ಪ್ರಕರಣಗಳಲ್ಲಿ ಪೋಲಿಸರನ್ನು ಹೊಣೆಗಾರರನ್ನಾಗಿಸುವ ಹಾಗೂ ಸ್ವತಂತ್ರ ಸಂಸ್ಥೆಯ ಮೂಲಕ ಈ ಪ್ರಕರಣದಲ್ಲಿ ಪೋಲೀಸರು ನಡೆಸಿದ ಎನ್‌ಕೌಂಟರ್ ಬಗ್ಗೆ ತನಿಖೆ ನಡೆಸಬೇಕು ಎಂದು ಎಐಡಿಡಬ್ಲ್ಯುಎ ಒತ್ತಾಯಿಸಿದೆ.



ಜಾಮೀನಿನಲ್ಲಿ ಬಿಡುಗಡೆಯಾದ ಅತ್ಯಾಚಾರ ಆರೋಪಿಗಳ ಅಮಾನುಷ ದಾಳಿಗೆ ಒಳಗಾಗಿ ದಿಲ್ಲಿಯ ಸಫ್ದರ್ಜಂಗ್ ಆಸ್ಪತ್ರೆಯಲ್ಲಿ ಸಾವು-ಬದುಕಿನ ನಡುವೆ ಹೋರಾಡುತ್ತಿರುವ ಉನ್ನಾವ್‌ನ ಸಂತ್ರಸ್ತೆಯ ತಾಯಿ, ಸೋದರಿ ಮತ್ತು ಸೋದರನನನು ಡಿಸೆಂಬರ್ 6ರಂದು ಬೃಂದಾ ಕಾರಟ್ ಮತ್ತು ಕವಿತ ಶರ್ಮ ಆಸ್ಪತ್ರೆಯಲ್ಲಿ ಭೇಟಿಯಾದರು. ಸರಕಾರದಿಂದ ಯಾರೊಬ್ಬರೂ ಅವರನ್ನು ಕಾಣಲು, ನೆರವು ನೀಡಲು ಬಂದಿಲ್ಲ ಎಂಬ ನಾಚಿಕೆಗೇಡಿನ ಸುದ್ದಿ ವರದಿಯಾಗಿದೆ.

ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ, ನ್ಯೂಸ್‌ಸ್ಟಿಂಗ್



'ಆಯುಷ್ಮಾನ್ ಭಾರತ': ಆರೋಗ್ಯ ವಿಮೆಯಿಂದ ಯಾರಿಗೆ ಲಾಭ?

ಪುಟ 13 ರಿಂದ

ಅರ್ಹತೆಯನ್ನು ಸಡಿಲಗೊಳಿಸಿರುವುದರಿಂದಾಗಿ, ಬಹುತೇಕ ಎಲ್ಲರೂ ಆರೋಗ್ಯ ವಿಮೆಗೊಳಪಟ್ಟಿದ್ದಾರೆ. ಉಳಿದ ರಾಜ್ಯಗಳಲ್ಲಿ ಆರೋಗ್ಯ ವಿಮೆಗೊಳಪಟ್ಟವರ ಸಂಖ್ಯೆ ನಿಕೃಷ್ಟವಾಗಿದೆ.

ಈ ಸರ್ವೆಯಿಂದ ಹೊರಹೊಮ್ಮುವ ಒಂದು ಮುಖ್ಯವಾದ ಅಂಶವೆಂದರೆ, ಬಡವರಿಗಾಗಿಯೇ ಇರುವ ಯೋಜನೆಗಳನ್ನೊಳಗೊಂಡ ಸರ್ಕಾರ-ಪ್ರಾಯೋಜಿತ ಆರೋಗ್ಯ ವಿಮೆಗೆ ಬಡ ಕುಟುಂಬಗಳಿಗಿಂತ ಅತಿ ಹೆಚ್ಚು ಸಂಖ್ಯೆಯ ಶ್ರೀಮಂತರೇ ಒಳಪಟ್ಟಿದ್ದಾರೆ (ಕೋಷ್ಟಕ-2). ಶೇ.20 ತಳ ಮಟ್ಟದ ಬಡ ಕುಟುಂಬಗಳ (ವೆಚ್ಚದ ಆಧಾರದ ಮೇಲೆ) ಪೈಕಿ ಕೇವಲ 10% ಕುಟುಂಬಗಳು ಆರೋಗ್ಯ ವಿಮೆಗೊಳಪಟ್ಟಿವೆ. ಇನ್ನೊಂದೆಡೆಯಲ್ಲಿ, ಶೇ.20 ಅತಿ ಶ್ರೀಮಂತ ಕುಟುಂಬಗಳ (ವೆಚ್ಚದ ಆಧಾರದ ಮೇಲೆ) ಪೈಕಿ ಶೇ.22 ಕುಟುಂಬಗಳು ಆರೋಗ್ಯ ವಿಮೆಗೊಳಪಟ್ಟಿವೆ. ಈ ಶ್ರೀಮಂತ ಕುಟುಂಬಗಳಲ್ಲಿ ಶೇ.20ರಷ್ಟು ಮಂದಿ ಸರ್ಕಾರ-ಪ್ರಾಯೋಜಿತ ಆರೋಗ್ಯ ವಿಮೆಯ ಸೌಲಭ್ಯ ಬಳಸಿಕೊಂಡಿದ್ದಾರೆ. ನಗರ ವಾಸಿಗಳಲ್ಲಿ ಸುಮಾರು 8% ಮಂದಿ ಸರ್ಕಾರ-ಪ್ರಾಯೋಜಿತ ಆರೋಗ್ಯ ವಿಮೆಗೊಳಪಟ್ಟಿದ್ದಾರೆ.

ಆಸ್ಪತ್ರೆ ಸೇರಿದ ಸಂದರ್ಭದಲ್ಲಿ ಸ್ವತಃ ಮಾಡಿದ ಖರ್ಚಿನಲ್ಲಿ ಸ್ವಲ್ಪ ಹಣ ಮರಳಿಸಲಾಗುತ್ತದೆ. ಈ ಪ್ರಕಾರವಾಗಿ, ಸರ್ಕಾರ-ಪ್ರಾಯೋಜಿತ ಆರೋಗ್ಯ ವಿಮೆ, ಖಾಸಗಿ ಉದ್ಯೋಗದಾತರು ಒದಗಿಸಿದ ಆರೋಗ್ಯ ವಿಮೆ ಮತ್ತು ಸ್ವಂತವೇ ಪಡೆದ ಆರೋಗ್ಯ ವಿಮೆಗಳ ಮೂಲಕ ಶ್ರೀಮಂತರು ಹೆಚ್ಚು ಹಣ ಮರಳಿ ಪಡೆಯುತ್ತಾರೆ (ಕೋಷ್ಟಕ-3). ಉದಾಹರಣೆಗೆ, ಗ್ರಾಮೀಣದಲ್ಲಿ, ಆಸ್ಪತ್ರೆ ಸೇರಿದ ಪ್ರಕರಣಗಳಲ್ಲಿ, ಬಡವರ ಪ್ರಕರಣಗಳಲ್ಲಿ ಕೇವಲ 1.6% ಮತ್ತು ಶ್ರೀಮಂತರ 4% ಪ್ರಕರಣಗಳಲ್ಲಿ ಸ್ವಲ್ಪ ಹಣ ಮಾತ್ರ ಮರಳಿ ಪಡೆಯುತ್ತಾರೆ. ಬಡ ಕುಟುಂಬಗಳು ಆಸ್ಪತ್ರೆಯಲ್ಲಿ ಮಾಡಿದ ಖರ್ಚಿನಲ್ಲಿ ಕೇವಲ 4% ಹಣ ಮರಳಿ ಪಡೆದರೆ, ಶ್ರೀಮಂತರು ಆಸ್ಪತ್ರೆಯಲ್ಲಿ ಮಾಡಿದ ಖರ್ಚಿನಲ್ಲಿ 22% ಹಣ ಮರಳಿ ಪಡೆಯುತ್ತಾರೆ. ಅದೇ ರೀತಿಯಲ್ಲಿ, ನಗರ ವಾಸಿಗಳಲ್ಲಿ, ಬಡವರು 1.5% ಹಣ ಮರಳಿ ಪಡೆದರೆ, ಶ್ರೀಮಂತರು 22% ಹಣ ಮರಳಿ ಪಡೆಯುತ್ತಾರೆ.

ನಗರವಾಸಿಗಳು ಆಸ್ಪತ್ರೆ ಸೇರಿದ ಪ್ರಕರಣಗಳಲ್ಲಿ, ಬಡವರು ಆಸ್ಪತ್ರೆಯಲ್ಲಿ ಮಾಡಿದ ಖರ್ಚಿನಲ್ಲಿ ಕೇವಲ 4% ಹಣ ಮರಳಿ ಪಡೆದರೆ, ಶ್ರೀಮಂತರು 27% ಹಣ ಮರಳಿ ಪಡೆಯುತ್ತಾರೆ. ನಿರ್ದಿಷ್ಟವಾಗಿ, ಗ್ರಾಮೀಣ ಬಡವರು, ಒಂದು ಪ್ರಕರಣದಲ್ಲಿ, ಸರಾಸರಿ 279ರೂ ಮರಳಿ ಪಡೆದರೆ, ನಗರವಾಸಿ ಶ್ರೀಮಂತರು, ಒಂದು ಪ್ರಕರಣದಲ್ಲಿ, ಸರಾಸರಿ 12000ರೂ ಮರಳಿ ಪಡೆಯುತ್ತಾರೆ. ಇದು, ಆರೋಗ್ಯ ವಿಮೆಯ ಒಳಗೊಳ್ಳುವಿಕೆಯಲ್ಲಿ ಮತ್ತು ಆಸ್ಪತ್ರೆಯಲ್ಲಿ ಖರ್ಚಾದ ಹಣ ಮರಳಿಪಡೆಯುವಲ್ಲಿ ಅದೆಷ್ಟು ತಾರತಮ್ಯತೆ ಇದೆ ಮತ್ತು ಬಡವರು ಅದೆಷ್ಟು ತಿರಸ್ಕಾರಕ್ಕೊಳಗಾಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಒಂದು ಅಂದಾಜಿನ ಪ್ರಕಾರ, ದುಬಾರಿ ವೆಚ್ಚದ ವೈದ್ಯಕೀಯ ಚಿಕಿತ್ಸೆಯ ಕಾರಣದಿಂದಾಗಿಯೇ ಪ್ರತಿ ವರ್ಷವೂ ಸುಮಾರು ಆರು ಕೋಟಿ ಮಂದಿ ಭಾರತೀಯರು ಬಡತನಕ್ಕೆ ತಳ್ಳಲ್ಪಡುತ್ತಾರೆ.

ಕೇಂದ್ರ ಸರಕಾರ ಹೇರಿದ ಕ್ರಮಗಳ ದುಷ್ಫಲ: ಜಮ್ಮು-ಕಾಶ್ಮೀರದಲ್ಲಿ ಸೇಬು ಬಿಕ್ಕಟ್ಟು

ಪುಟ 2 ರಿಂದ

ಹಿರಿಯ ಅಧಿಕಾರಿಗಳು ಮತ್ತು ಪರಿಣಿತರ ಒಂದು ಉನ್ನತ ಮಟ್ಟದ ಸಮಿತಿ ಕೂಡಲೇ ಕಾಶ್ಮೀರ ಕಣಿವೆಗೆ ಭೇಟಿ ನೀಡಬೇಕು.

4. ರೈತರಿಗೆ ಎನ್‌ಡಿಆರ್‌ಎಫ್ ನಿಂದ ವಾಸ್ತವಿಕ ನಷ್ಟ ಮತ್ತು ಇದರ ದೂರಗಾಮೀ ದುಷ್ಪರಿಣಾಮವನ್ನು ಭರಿಸಿ ಕೊಡಬೇಕು.

5. ಬಾಧಿತರ ಸಾಲ ಮನ್ನಾ ಮಾಡಬೇಕು ಮತ್ತು ಎಲ್ಲ ಸೇಬು ರೈತರಿಗೆ ದೀರ್ಘಾವಧಿಯ ಬಡ್ಡಿ ರಹಿತ ಕೆ.ಸಿ.ಸಿ. ಸಾಲ ಕೊಡಬೇಕು.

6. ತೋಟಗಾರಿಕಾ ವಲಯಕ್ಕೆ 1000 ಕೋಟಿ ರೂ.ಗಳ ಒಂದು ವಿಶೇಷ ಮಧ್ಯಂತರ ಪ್ಯಾಕೇಜನ್ನು ಕೋಲ್ಡ್ ಸ್ಟೋರೇಜ್‌ಗಳ ಒಂದು ಜಾಲವನ್ನು ಬೆಳೆಸಲು, ಹಣ್ಣು ಸಂಸ್ಕರಣಾ ಉದ್ದಿಮೆಗಳನ್ನು ನಿರ್ಮಿಸಲು ಮತ್ತು ಸೇಬು ಬೆಳೆಗಾರರ ಸಾಮೂಹಿಕ ಹಾಗೂ ಸಹಕಾರಿ ಒಡೆತನದ ಅಡಿಯಲ್ಲಿ ಮಾರುಕಟ್ಟೆ ಬೆಂಬಲ ಯೋಜನೆಗೆ, ಜತೆಗೆ ಹಣ್ಣಿನ ತೋಟಗಳನ್ನು ಬೆಳೆಸಲು ರೈತರಿಗೆ ಬಡ್ಡಿಯಿಲ್ಲದ ಸಾಂಸ್ಥಿಕ ಸಾಲ ನೆರವನ್ನು ಕೊಡಲು ಪ್ರಕಟಿಸಬೇಕು.

7. ಹಾನಿಗಳ ಮೌಲ್ಯಮಾಪನ ಮಾಡಿ ಸೇಬು ಬೆಳೆಗಾರರಿಗೆ, ಮತ್ತು ಕೇಸರಿ, ಪೇರು, ದ್ರಾಕ್ಷೆ, ಚೆರಿ ಬೆಳೆಗಾರರಿಗೆ ಹಾಗೂ ಕುರಿ ಸಾಕಣೆದಾರರಿಗೆ ತ್ವರಿತ ಮತ್ತು ಪರಿಣಾಮಕಾರಿ ಪರಿಹಾರಗಳು ಲಭ್ಯವಾಗುವಂತೆ ಮಾಡಬೇಕು. ವಿಶೇಷವಾಗಿ ಅನಿರೀಕ್ಷಿತ ಮಳೆಯಿಂದಾಗಿ ಅಪಾರ ಹಾನಿಗೆ ಒಳಗಾಗಿರುವ ಜಮ್ಮುವಿನ ರೈತರಿಗೂ ಪರಿಹಾರ ಒದಗಿಸಬೇಕು.

ಕೃಷಿ ಮಂತ್ರಿಗಳನ್ನು ಭೇಟಿಯಾದ ನಿಯೋಗದಲ್ಲಿ ಜಮ್ಮು ಮತ್ತು ಕಾಶ್ಮೀರ ಕಿಸಾನ್ ತಹರೀಕ್‌ನ ಕಾರ್ಯದರ್ಶಿ ಗುಲಾಮ್ ನಬಿ ಮಲ್ಲಿಕ್, ಶೋಪಿಯಾನ್ ಜಿಲ್ಲಾಧ್ಯಕ್ಷ ಜಿ ಹೆಚ್ ರಸೂಲ್, ಕುಲ್‌ಗಾಂ ಜಿಲ್ಲಾ ಕಾರ್ಯದರ್ಶಿ ಮಶ್ಕೂರ್ ಅಹ್ಮದ್ ಹಾಗೂ ಎಐಕೆಎಸ್‌ಸಿಸಿಯಿಂದ ಕಾರ್ಯಕಾರಿ ಸಮಿತಿಯ ಸದಸ್ಯ ಹನ್ನನ್ ಮೊಲ್ಲ, ಕಾರ್ಯದರ್ಶಿ ಅವಿಕ್ ಸಾಹಾ, ಇನ್ನೊಬ್ಬ ಕಾರ್ಯಕಾರಿ ಸದಸ್ಯ ಪ್ರೇಮ್‌ಸಿಂಗ್ ಗೆಹ್ಲಾವಟ್, ರಾಜ್ಯಸಭಾ ಸದಸ್ಯ ಕೆ.ಕೆ. ರಾಗೇಶ್, ಎಐಕೆಎಸ್‌ನ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಹಾಗೂ ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್ ಇದ್ದರು.

"ಪೌರತ್ವದ ಎಲ್ಲಾ ಸಂವಿಧಾನಿಕ ಮೂಲಾಂಶಗಳನ್ನು ಉಲ್ಲಂಘಿಸುವ ಮಸೂದೆ"

ಪುಟ 2 ರಿಂದ

ಪ್ರಣಾಳಿಕೆಯಾಗಿ ಬಿಟ್ಟಿದೆ. ಇದು ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ತರುವ ಬದಲು ಹೊಸ ಸಮಸ್ಯೆಗಳನ್ನು ಹುಟ್ಟಿಸುತ್ತದೆ. ಜನಗಳು ಮತ್ತು ಭಾಷೆಗಳ ನಡುವೆ ಇನ್ನಷ್ಟು ವಿಭಜನೆಗಳನ್ನು ಮತ್ತು ಸಂದೇಹಗಳನ್ನು ಹುಟ್ಟಿಸುತ್ತದೆ.

ನಾಲ್ಕನೆಯದಾಗಿ, ಇದು ಅಸ್ಸಾಂ ನ್ನು ಬೆಂಕಿಯ ಮೇಲಿಡುತ್ತಿದೆ, ಅಸ್ಸಾಂ ಒಪ್ಪಂದಕ್ಕೆ ವಿಶ್ವಾಸಘಾತ ಮಾಡಿದೆ. ವಲಸೆಗಾರರು ಮತ್ತು ನಿರಾಶ್ರಿತರನ್ನು ಕೇವಲ ಧರ್ಮದ ಆಧಾರದಲ್ಲಿ ಪ್ರತ್ಯೇಕಿಸುತ್ತದೆ. ಇದು ಮುಸ್ಲಿಂ ಬಾಹುಳ್ಯದ ಅಫಘಾನಿಸ್ತಾನ, ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ನಿರಾಶ್ರಿತರ ಬಗ್ಗೆ ಮಾತ್ರ ಹೇಳುತ್ತದೆ, ಶ್ರೀಲಂಕಾ ಮತ್ತು ಮ್ಯಾನ್ಮಾರಿನಿಂದ ಕಿರುಕುಳಕ್ಕೆ ಒಳಗಾಗಿ ವಲಸೆ ಬರುವವರಿಗೆ ಯಾವುದೇ ಪರಿಹಾರ ನೀಡುವುದಿಲ್ಲ.

ಐದನೆಯದಾಗಿ, ಭಾರತದ ಸಂವಿಧಾನ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ನಿಸ್ಸಂದಿಗ್ಧವಾಗಿ ತಿರಸ್ಕರಿಸಿರುವುದರಿಂದ ಪ್ರಸಕ್ತ ಆಡಳಿತಗಾರರು ಅಸಂತುಷ್ಟರಾಗಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ಈ ತಿದ್ದುಪಡಿಗಳು ರಾಜಕೀಯ, ಧಾರ್ಮಿಕ, ಭಾಷಿಕ ಮತ್ತು ಜನಾಂಗೀಯ ಒಡಕುಗಳನ್ನು ತರುತ್ತವೆ.

ಆರನೆಯದಾಗಿ, ಭಾರತ ಅಂತರ್ರಾಷ್ಟ್ರೀಯ ಕಾನೂನಿಗೆ ಅನುಗುಣವಾದ ಒಂದು ನಿರಾಶ್ರಿತರ ಕುರಿತ ಧೋರಣೆಯನ್ನು ಹೊಂದಿರದಿರುವುದೇ ವಿದೇಶಿ-ದ್ವೇಷಿ ರಾಜಕೀಯ ಒತ್ತಡಗಳಿಗೆ ಕಾರಣ. ವಿವಿಧ ಅಂತರ್ರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಒಂದು ಪ್ರಮುಖ ಸ್ಥಾನ ಹೊಂದಿರುವ ಭಾರತಕ್ಕೆ ಆಶ್ರಯ ಕೇಳಿ ಬರುವ ಎಲ್ಲರೊಡನೆಯೂ ಸಮಾನವಾಗಿ ವರ್ತಿಸುವ ಹೊಣೆಗಾರಿಕೆ ಇದೆ. ಸಂಸದ್ ಭವನದ ಪ್ರವೇಶದ್ವಾರದಲ್ಲಿ 'ವಸುಧೈವ ಕುಟುಂಬಕಂ' ಎಂದು ಕೆತ್ತಲಾಗಿದೆ.

ಭಾರತೀಯ ಸಂವಿಧಾನ ಎರಡು-ರಾಷ್ಟ್ರಗಳ ಸಿದ್ಧಾಂತವನ್ನು ತಿರಸ್ಕರಿಸಿರುವುದು ಭಾರತೀಯ ಮುಸ್ಲಿಮರ ಸಮಾನ ನಾಗರಿಕರು ಎಂಬ ಸ್ಥಾನಮಾನಕ್ಕೆ ಸಂಬಂಧಪಟ್ಟಂತೆ ಒಂದು ನಿರ್ಣಾಯಕ ಮಹತ್ವವನ್ನು ಹೊಂದಿದೆ. ಈ ತಿದ್ದುಪಡಿ ಭಾರತೀಯ ಮುಸ್ಲಿಮರ ಭದ್ರತೆಯ ಭಾವನೆಯ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತದೆಯಷ್ಟೇ ಅಲ್ಲ, ಭವಿಷ್ಯದಲ್ಲಿ ಬಾಂಗ್ಲಾದೇಶದಲ್ಲಿ ಹಿಂದುಗಳ ಭದ್ರತೆ ಮತ್ತು ಕಾಶ್ಮೀರ ಪ್ರಶ್ನೆಯಲ್ಲಿ ಭಾರತದ ಚಾರಿತ್ರಿಕ ನಿಲುವಿನ ವಿಶ್ವಾಸಾರ್ಹತೆಯ ಮೇಲೂ ದುಷ್ಪರಿಣಾಮ ಬೀರುತ್ತದೆ. ಈ ಮಸೂದೆಯ ದುಷ್ಪರಿಣಾಮಗಳು ಬಹಳಷ್ಟು ಗಂಭೀರವಾಗಿವೆ ಮತ್ತು ಅತ್ಯಂತ ಅಪಾಯಕಾರಿಯಾಗಿವೆ, ಆದ್ದರಿಂದ ಇದನ್ನು ಹಿಂತೆಗೆದುಕೊಳ್ಳಲೇಬೇಕು ಎಂದು ಮಹಮ್ಮದ್ ಸಲೀಂ ತನ್ನ ಭಿನ್ನಮತದ ಟಿಪ್ಪಣಿಯ ಕೊನೆಯಲ್ಲಿ ಒತ್ತಿ ಹೇಳಿದ್ದರು.

ಕೃಷಿ ಕೂಲಿಕಾರರ ಸಮಾವೇಶದಲ್ಲಿ ಚಂದ್ರಪ್ಪ ಹೊಸಕೇರಾ ಹೇಳಿಕೆ

ಬಿಜೆಪಿ ಸರ್ಕಾರ ಶ್ರಮಿಕರ ವಿರೋಧಿ

ರಾಯಚೂರು: ಕೇಂದ್ರದ ಬಿಜೆಪಿ ಸರ್ಕಾರವು ರೈತ ವಿರೋಧಿ ಅಡಳಿತ ನಡೆಸುತ್ತಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಕಾರ್ಯದರ್ಶಿ ಚಂದ್ರಪ್ಪ ಹೊಸಕೇರಾ, ಹೇಳಿದರು.

ನಗರದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಕೃಷಿ ಕೂಲಿಕಾರರ ಪ್ರಥಮ ಜಿಲ್ಲಾ ಸಮಾವೇಶ' ಉದ್ಘಾಟಿಸಿ ಮಾತನಾಡಿದರು. ಕೃಷಿ ಕ್ಷೇತ್ರದಲ್ಲಿ ಕೆಲಸ ಇಲ್ಲದ ಕೂಲಿಕಾರರು ಗುಳೆ ಹೋಗುತ್ತಿದ್ದನ್ನು ತಪ್ಪಿಸಲು 30 ವರ್ಷಗಳ ಸತತ ಹೋರಾಟದ ಫಲವಾಗಿ ಖಾತ್ರಿ ಯೋಜನೆ ಜಾರಿಗೆ ತರಲಾಗಿದೆ. ಆದರೆ, ಮೋದಿ ನೇತೃತ್ವದ ಕೇಂದ್ರ ।ಸರ್ಕಾರ ಉದ್ಯೋಗ ಖಾತ್ರಿ ಯೋಜನೆ ರದ್ದು ಮಾಡಲು ಯೋಚಿಸುತ್ತಿದೆ. ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ವಾರ್ಷಿಕ 70 ಸಾವಿರ ಕೋಟಿ ಮೀಸಲಿಟ್ಟಿತ್ತು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ 58 ಸಾವಿರ ಕೋಟಿ ಮೀಸಲಿಟ್ಟು, ಗ್ರಾಮೀಣ ಕೃಷಿ ಕಾರ್ಮಿಕರಿಗೆ ಕೋಲಿ ಸಿಗದಂತೆ ಮಾಡಿದೆ ಎಂದು ಆರೋಪಿಸಿದರು.

ಕೂಲಿಕಾರಿಗೆ ಸ್ವಂತ ಸೂರಿಲ್ಲ, ಆಶ್ರಯ, ಅಂಬೇಡ್ಕರ್, ಬಸವ ಯೋಜನೆಗಳಲ್ಲಿ ಬಡವರಿಗೆ ಸಿಗಬೇಕಾದ ಮನೆಗಳು ಅನುಕೂಲಸ್ಥರ ಪಾಲಾಗುತ್ತಿವೆ. ಇದರಿಂದ ನಿಜವಾದ ನಿವೇಶನ ರಹಿತರಿಗೆ ಯೋಜನೆಗಳ ಲಾಭ ಸಿಗುತ್ತಿಲ್ಲ ಎಂದರು.

ರಾಜ್ಯದಲ್ಲಿ 1.50 ಕೋಟಿ ಗುಡಿಸಲುಗಳಿವೆ. ಬಿಜೆಪಿಯು ಅಧಿಕಾರ ಬರುವುದಕ್ಕಿಂತ ಮುಂಚೆ ಗುಡಿಸಲು ಮುಕ್ತ ರಾಜ್ಯ ಮಾಡುತ್ತೇವೆ ಎಂದಿದ್ದ ಸರ್ಕಾರ ಅಡಳಿತ ಬಂದ ನಂತರ ಬಡವರನ್ನು ಮರೆತಿದೆ. ಪಡಿತರ ಚೀಟಿ ಹೊಂದಿರುವ ಬಡ ಕುಟುಂಬಕ್ಕೆ ನ್ಯಾಯಬೆಲೆ ಅಂಗಡಿಯಿಂದ ಸಿಗುತ್ತಿದ್ದ ದವಸ ಧಾನ್ಯಗಳು ರದ್ದು ಮಾಡಿ ಬಡ ಕುಟುಂಬಗಳ ಹೊಟ್ಟೆ ಮೇಲೆ ಹೊಡೆಯಲು ಸಂಚು ರೂಪಿಸಿದೆ ಎಂದರು. ಕೇರಳ ರಾಜ್ಯದಲ್ಲಿ ಬಡವರಿಗೆ ದಿನ ಬಳಕೆಯ 14 ವಸ್ತುಗಳನ್ನು ನ್ಯಾಯಬೆಲೆ ಅಂಗಡಿಯಲ್ಲಿ ಹಂಚುತ್ತಿದ್ದಾರೆ. ವಸತಿ ರಹಿತ ಬಡ ಕುಟುಂಬಗಳಿಗೆ 4 ಗುಂಟೆ ಜಾಗ ಕೊಡುತ್ತಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ಇಂತಹ ವ್ಯವಸ್ಥೆ ಇಲ್ಲ ಎಂದರು.





ಉದ್ಯೋಗ ಖಾತ್ರಿ ಸಮಗ್ರ ಜಾರಿ, ಕೃಷಿ ಕೂಲಿಕಾರರಿಗೆ ಇಪಿಎಫ್, ಇಎಸ್ಐ, ಪೆನ್ಷನ್, ಮನೆ ನಿರ್ಮಾಣ, ಸಾಲ ಒಳಗೊಂಡ ಸಮಗ್ರವಾದ ಕಾನೂನು ಜಾರಿಗೆ ತರುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಗಮನಕ್ಕೆ ತರಲು ಡಿಸೆಂಬರ್ 13 ರಿಂದ 15 ರ ವರೆಗೆ ಕಲಬುರ್ಗಿಯಲ್ಲಿ ರಾಜ್ಯ ಮಟ್ಟದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ವೀರೇಶ ಮಾತನಾಡಿ, ಬಂಡವಾಳ ಶಾಹಿಗಳ ಗುಲಾಮಗಿರಿಯಾಗಿ ರಾಜಕೀಯ ಪಕ್ಷಗಳು ಆಡಳಿತ ನಡೆಸುತ್ತಿವೆ. ದಲಿತರಿಗೆ, ಬಡವರಿಗೆ, ಮಹಿಳೆಯರಿಗೆ ಧ್ವನಿಯಾಗಿರುವ ಕೂಲಿಕಾರರ ಸಂಘವನ್ನು ಬಲಪಡಿಸಲು ಕರೆ ನೀಡಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ದಾವಲ್ ಸಾಬ್ ನದಾಫ್ ಮಾತನಾಡಿ, ಕೂಲಿಕಾರರೆಲ್ಲರು ಒಗ್ಗಟ್ಟಾಗಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸಮರ್ಪಕ ಉದ್ಯೋಗ ಪಡೆದುಕೊಳ್ಳುವಂತೆ ತಿಳಿಸಿದರು. ಕರಿಯಪ್ಪ ಅಚ್ಚೊಳಿ ಅಧ್ಯಕ್ಷತೆ ವಹಿಸಿದ್ದರು.

> "ಖಾತ್ರಿ ಯೋಜನೆ ಅಡಿ ಗ್ರಾಮ ಪಂಚಾಯಿತಿ ಸದಸ್ಯರು, ಗುತ್ತಿಗೆದಾರರು ಹಾಗೂ ಅಧಿಕಾರಿ ವರ್ಗದವರಿಂದ ಕೃಷಿ ಕೂಲಿಕಾರರಿಗೆ ಮೋಸ ಮಾಡಲಾಗುತ್ತಿದೆ."
>
> **ದಾವಲ್ ಸಾಬ್ ನದಾಫ್,** ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ

ಕರ್ನಾಟಕ ಪಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನದ ಭಾವಚಿತ್ರಗಳು

















JANASHAKTHI KANNADA VARA PATRIKE DECEMBER 9-15, 2019 Price: Rs. 10/- Date of Publication: 6 DECEMBER 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಅಂಗನವಾಡಿ ಕೇಂದ್ರಗಳಲ್ಲಿ ಪಾಲನೆಯೊಟ್ಟಿಗೆ ಎಲ್.ಕೆ.ಜಿ – ಯು.ಕೆ.ಜಿ ಶಿಕ್ಷಣ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಡಿ. 10 ರಿಂದ ತುಮಕೂರಿನಿಂದ ಬೆಂಗಳೂರಿಗೆ ಅಂಗನವಾಡಿ ನೌಕರರ ಪಾದಯಾತ್ರೆ ಸಂಬಂಧ ಮಡಿಕೇರಿಯಲ್ಲಿ ಸೋಮವಾರ ಉದ್ಘಾಟನೆಗೊಂಡ ಅಂಗನವಾಡಿ ನೌಕರರ ಸಂಘದ ಜಾಥಾ ಮಂಗಳವಾರ ಹಾಸನಕ್ಕೆ ಆಗಮಿಸಿತು.

ಅಂಗನವಾಡಿ ನೌಕರರ ಜಾಥಾ



ಜಾಥಾ ನೇತೃತ್ವ ವಹಿಸಿರುವ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ ಮಾತನಾಡಿ, ಫಿರಿಯಾಡಿಕಲ್ ಲೇಬರ್ ಫೋರ್ಸ್ ಸರ್ವೇ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಮಹಿಳಾ ನಿರುದ್ಯೋಗ ಹೆಚ್ಚುತ್ತಿದೆ. ಮಾತ್ರವಲ್ಲದೇ ನಿಗದಿತ ಸಂಬಳ ತೆಗೆದು ಕೊಳ್ಳುವವರು 26% ಮಾತ್ರ ಉಳಿದವರು, ಸ್ವಯಂ ಉದ್ಯೋಗ, ಅರೆಕಾಲಿಕ, ಸಾಂಧಾರ್ಭಿಕ, ಗುತ್ತಿಗೆ ಇತರ ಉದ್ಯೋಗಿಗಳಾಗಿದ್ದಾರೆ. ಅಂಗನವಾಡಿ ನೌಕರರು ಇಂತಹ ಉದ್ಯೋಗಿಗಳು ಅರೆಕಾಲಿಕ ಪಡೆಗೆ ಸೇರಿದವರು ಆದರೆ ಇಂದು ಉದಾರೀಕರಣ ನೀತಿಗಳನ್ನು ಅಪ್ಪಿಕೊಂಡು ಮುದ್ದಾಡುತ್ತಿರುವ ಸರ್ಕಾರ ಎಲ್ಲಾ ಕ್ಷೇತ್ರಗಳನ್ನು ಖಾಸಗಿ ಮಾಡುತ್ತಿದೆ. ಆಹಾರ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗಾಗಿ ಇರುವ ಯೋಜನೆಗಳ ಪ್ರಮುಖ ಜವಾಬ್ದಾರಿಗಳನ್ನು ಬೇರೆಡೆಗೆ ವರ್ಗಾಯಿಸುವ ಮುಖಾಂತರ ಬಲಹೀನಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದರಿಂದ ಸಾವಿರಾರು ಮಹಿಳೆಯರು ಕೆಲಸ ಕಳೆದು ಕೊಳ್ಳುವುದಲ್ಲದೇ ಐಸಿಡಿಎಸ್ ಯೋಜನೆ ತನ್ನ ಉದ್ದೇಶ ಕಳೆದು ಕೊಳ್ಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ ಇತ್ತೀಚೆಗೆ ಮಾಡಿರುವ ಶಿಫಾರಸ್ಸಿನಲ್ಲಿ 3 ರಿಂದ 8 ವರ್ಷದ ಒಂದು ವರ್ಗೀಕರಣ ಮಾಡಿ ಮಾಧ್ಯಮವನ್ನು ಶಿಕ್ಷಣ ಇಲಾಖೆಯಡಿಯಲ್ಲಿ ತೆರೆಯಬೇಕೆಂಬ ಶಿಫಾರಸ್ಸು ಮಾಡಿದೆ. ಮಾತ್ರವಲ್ಲದೆ ರಾಜ್ಯದಲ್ಲಿ 2019 ಮೇ ತಿಂಗಳಲ್ಲಿ 3 1/2 ವರ್ಷ ಮೇಲ್ಪಟ್ಟ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಎಲ್.ಕೆ.ಜಿ– ಯು.ಕೆ.ಜಿ ಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಶಿಕ್ಷಣ ಇಲಾಖೆ ತಂದಿರುವ ಈ ಸುತ್ತೋಲೆ ಐಸಿಡಿಎಸ್ ಯೋಜನೆಯ ಮತ್ತೊಂದು ತದ್ರೂಪಿ (ಡ್ಯೂಪ್ಲಿಕೇಟ್) ಕಾರ್ಯಕ್ರಮವೇ ಹೊರತು ಬೇರೇನಲ್ಲ ಏಕೆಂದರೆ ಇದರ ಪ್ರಾಸ್ತಾಪಿತ ಕಲಿಕೆಯ ಸ್ವರೂಪವೂ ಈಗಗಲೇ ಅಂಗನವಾಡಿ ಕೇಂದ್ರಗಳಲಿ ್ಲಕೊಡಲಾಗುತ್ತಿದೆ. ಈಗಾಗಲೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 4200 ಕೋಟಿ ರೂಗಳನ್ನು ಪೂರಕ ಪೌಷ್ಠಿಕ ಆಹಾರ, ಪೂರ್ವಪ್ರಾರ್ಥಮಿಕ ಶಿಕ್ಷಣವನ್ನೊಳಗೊಂಡಂತೆ ಖರ್ಚು ಮಾಡಲಾಗುತ್ತಿದೆ. ಆದರೆ ಸರ್ಕಾರ ಈ ಹಣವನ್ನು ಸದ್ಬಳಿಕೆ ಮಾಡುವ ಬದಲಿಗೆ ಶಿಕ್ಷಣ ಇಲಾಖೆಯ ಮುಖಾಂತರ ಒಂದೇ ಮಗುವಿಗೆ ಡಬಲ್ ಹಣವನ್ನು ಖರ್ಚುಮಾಡಲು ಹೊರಟಿರುವುದು ನ್ಯಾಯವೇ ಎಂದು ಪ್ರಶ್ನಿಸಿದರು.

ಆದ್ದರಿಂದ ನಮ್ಮ ಸಂಘಟನೆ ಕೆಳಕಂಡ ಬೇಡಿಕೆಗಳನ್ನಿಟ್ಟು ಈಗಾಗಲೇ ಹಲವು ಬಾರಿ ಸಂಬಂಧಿಸಿದವರೊಡನೆ ಚರ್ಚೆಗಳನ್ನು ಮಾಡಿ ಮನವಿಗಳನ್ನು ಕೊಟ್ಟಿದೆ. ಆದರೆ ಅಧಿಕಾರಸ್ಥರ ಉದಾಸೀನತೆ ಮುಂದುವರಿದಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಸಂಘಟನೆ ಈ ಅನಿರ್ದಿಷ್ಠಾವಧಿಯ ಹೋರಾಟ ಕರೆ ನೀಡಲಾಗಿದೆ. ರಾಜ್ಯದಲ್ಲಿ ಸಾರ್ವಜನಿಕ, ಪೋಷಕರ ಸಹಿಸಂಗ್ರಹ ಮಾಡಿಸಲಾಗಿದೆ. ಮತ್ತು 30 ಜಿಲ್ಲೆಗಳನ್ನೊಳಗೊಂಡ 6 ಜಾಥಾಗಳನ್ನು ನಡೆಸಲಾಗಿದೆ. ಅಂತಿಮವಾಗಿ ಡಿಸೆಂಬರ್ 10 ರಿಂದ ಅಂಗನವಾಡಿ ನೌಕರರು ಅನಿರ್ದಿಷ್ಠಾವಧಿ ಹೋರಾಟವನ್ನು ನಡೆಸುತ್ತಿದ್ದು ಬೆಂಗಳೂರಿಗೆ ಪಾದಯಾತ್ರೆ ನಡೆಸಲಾಗುತ್ತಿದೆ. ಪಾದಯಾತ್ರೆಗೆ ಎಲ್ಲಾ ನೌಕರರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಇಂದಿರಮ್ಮ, ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಕೆಪಿಆರ್ಎಸ್ ಜಿಲ್ಲಾಧ್ಯಕ್ಷ ಎಚ್. ಆರ್.ನವೀನ್‌ಕುಮಾರ್, ಕೆಪಿಆರ್ಎಸ್ ಜಿಲ್ಲಾ ಕಾರ್ಯದರ್ಶಿ ವಸಂತಕುಮಾರ್, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ.ಪೃಥ್ವಿ, ಅಂಗನವಾಡಿ ನೌಕರರ ಸಂಘದ ಜಯಂತಿ, ಶೈಲಜಾ, ನಾಗರತ್ನ ಮತ್ತಿತರರಿದ್ದರು.

ಬೇಡಿಕೆಗಳು

1. ಅಂಗನವಾಡಿ ಕೇಂದ್ರಗಳಲ್ಲಿ ಪಾಲನೆಯೊಟ್ಟಿಗೆ ಎಲ್.ಕೆ.ಜಿ – ಯು.ಕೆ.ಜಿ ಶಿಕ್ಷಣ ನೀಡಿ
2. ಹೊಸ ಶಿಕ್ಷಣ ನೀತಿಯ ಶಿಫಾರಸ್ಸಿನಲ್ಲಿರುವ 3 ರಿಂದ 9 ವರ್ಷದ ವರ್ಗೀಕರಣವನ್ನು ವಿರೋಧಿಸಬೇಕು.
3. ಈಗಿರುವ ನಿವೃತ್ತಿ ಸೌಲಭ್ಯವನ್ನು ಬದಲಾಯಿಸಿ ಎಲ್ಐಸಿ ಆಧಾರಿತ ಪೆನ್‌ಷನ್ ನೀಡಬೇಕು.
4. ಸೇವಾ ಜೇಷ್ಠತೆಯ ಆಧಾರದಲ್ಲಿ ಕನಿಷ್ಠ ವೇತನ ಜಾರಿ ಮಾಡಬೇಕು
5. ಮೇಲ್ವಿಚಾರಕಿಯಾಗಿ ಮುಂಬಡ್ತಿ ಹೊಂದುವ ಹುದ್ದೆಗಳನ್ನು ಸಂಪೂರ್ಣ ಅಂಗನವಾಡಿ ನೌಕರರಿಗೆ ಕೊಡಬೇಕು.
6. ಶಿಸ್ತು ಪ್ರಾಧಿಕಾರದಲ್ಲಿ ಇಲಾಖೆಯ ಅಧಿಕಾರಿಗಳು ಮಾತ್ರ ಇರಬೇಕು.
7. ಅಂಗನವಾಡಿ ಸಹಾಯಕಿ ಕಾರ್ಯಕರ್ತೆಯಾಗಿ ಮುಂಬಡ್ತಿ ಪಡೆಯಲು ಇರುವ ವಯಸ್ಸಿನ ಭೌಗೋಳಿಕ ವಿಸ್ತೀರ್ಣದ ಮಿತಿಯನ್ನು ಸಡಿಲಿಸಬೇಕು.
8. ಅನುಕಂಪದ ಆಧಾರದಲ್ಲಿರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಮದುವೆಯಾಗದ ಹೆಣ್ಣು ಮಕ್ಕಳಿಗೆ ಎಂಬ ಷರತ್ತನ್ನು ತೆಗೆದು ಕುಟುಂಬದವರಿಗೆ ಎಂದು ತಿದ್ದುಪಡಿಯಾಗಬೇಕು.
9. ಖಾಲಿಯಿರುವ ಸಹಾಯಕಿ ಮತ್ತು ಕಾರ್ಯಕರ್ತೆಯರ ಹುದ್ದೆಗಳನ್ನು ತುಂಬಬೇಕು.
10. ಇಲಾಖೆಗೆ ಡಿಡಿ, ಪಿಒ, ಸಿಡಿಪಿಒ, ಎಸಿಡಿಪಿಒ ಮೇಲ್ವಿಚಾರಕಿಯರನ್ನು ಖಾಯಂ ಆಗಿ ನೇಮಕ ಮಾಡಬೇಕು.
11. ಅಂಗನವಾಡಿ ಕಾರ್ಯಕರ್ತೆಯರಿಗೆ ಸೇವಾ ನಿಯಾಮಾವಳಿ ರಚಿಸಬೇಕು.
12. ಕೇಂದ್ರ ಸರ್ಕಾರ ಕಡಿತ ಮಾಡಿರುವ ಅನುದಾನ ವಾಪಸ್ಸು ಆಗಬೇಕು.
13. ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಯನ್ನು ಸೂಚನೆಯನ್ನು ರಾಜ್ಯ ಸರ್ಕಾರ ಒಪ್ಪಬಾರದು.
14. 5 ವರ್ಷಗಳನ್ನು ಪೂರೈಸಿದ ಮೇಲ್ವಿಚಾರಕಿಯರನ್ನು ಕಡ್ಡಾಯ ವರ್ಗಾವಣೆ ಮಾಡಬೇಕು.

ವರದಿ: ಎಂ.ಬಿ. ಪುಷ್ಪ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**